07 February 2026 Saturday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ಬದುಕಿನಲ್ಲಿ ನಾವು ಸಂಗ್ರಹಿಸ ಬೇಕಾಗಿದ್ದು ಸಂತೋಷದ ಕ್ಷಣಗಳನ್ನೇ ಹೊರತು ದುಬಾರಿ ಮಾತುಗಳನ್ನಲ್ಲ!

-ಸ್ನೇಹಾ ಆನಂದ್

info.varthaman@gmail.com



ಸಂವಿಧಾನ ವಿರೋಧಿಗಳ ಕೈಗೆ ಅಧಿಕಾರ ಕೊಡದಿರಿ: ಡಾ.ಯತೀಂದ್ರ ಪುಟ ಸಂ. 2



ಉದ್ಯಮ ಯಶಸ್ಸಿಗೆ ಪ್ರಾದೇಶಿಕ ಭೌಗೋಳಿಕ ಅರಿವು ಮುಖ್ಯ: ಸವಿತಾ ಪುಟ ಸಂ. 2



ಸುವರ್ಣಾವತಿದಲ್ಲಿ ಜಲಸಾಹಸ: ಕ್ರೀಡೋತ್ಸವಕ್ಕೆ ಸಿ.ಪುಟ್ಟರಂಗಶೆಟ್ಟಿ ಚಾಲನೆ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 92 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಉಚಿತ ಕೊಡುಗೆಗೆ 'ಸುಪ್ರೀಂ' ಕಳವಳ

### ಚುನಾವಣೆ ಸಂದರ್ಭದಲ್ಲಿ ಕೊಡುಗೆ ಪ್ರಶ್ನಿಸಿ ಪಿಐಎಲ್: ಸೂಕ್ಷ್ಮ ಪರಿಶೀಲನೆ



**ನವದೆಹಲಿ:** ರಾಜಕೀಯ ಪಕ್ಷಗಳು ಚುನಾವಣೆಗೆ ಮುನ್ನ ಪ್ರಕಟಿಸುವ ಉಚಿತ ಕೊಡುಗೆಗಳ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಅಲ್ಲದೆ, ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಸಿದ್ಧ ಎಂದು ತಿಳಿಸಿದೆ.

ಬಿಜೆಪಿ ನಾಯಕ ಅಶ್ವಿನಿ ಉಪಾಧ್ಯಾಯ ಅವರು, ಉಚಿತ ಕೊಡುಗೆಗಳನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ನಲ್ಲಿ ಸಾರ್ವಜನಿಕಾ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಮುಂಬರುವ ಹಲವಾರು ರಾಜ್ಯ ವಿಧಾನಸಭಾ ಚುನಾವಣೆಗಳು ನಡೆಯಲಿರುವುದರಿಂದ ಈ ಸಾರ್ವಜನಿಕಾ ಹಿತಾಸಕ್ತಿ ಅರ್ಜಿಯನ್ನು ತುರ್ತಾಗಿ ವಿಚಾರಣೆ ನಡೆಸಬೇಕೆಂದು ಕೋರಿದರು.

ಈ ಅರ್ಜಿಯ ವಿಚಾರಣೆ ನಡೆಸಿದ ಸಿಜೆಐ ಸೂರ್ಯ ಕಾಂತ್ ಮತ್ತು ನ್ಯಾ. ಜೋಯ್ಮಲ್ಯ ಬಾಗ್ಚಿ ನೇತೃತ್ವದ ಪೀಠವು ಈ ವಿಷಯವು ಪ್ರಮುಖ ಸಾರ್ವಜನಿಕ ಪ್ರಾಮುಖ್ಯತೆಯನ್ನು ಹೊಂದಿದೆ ಮತ್ತು ಇದನ್ನು ಮೂವರು ನ್ಯಾಯಾಧೀಶರ ಪೀಠವು ವಿಚಾರಣೆ ನಡೆಸಬೇಕು ಎಂದು ಹೇಳಿದೆ. ಈ ವಿಷಯವು ಗಂಭೀರ ಕಳವಳಗಳನ್ನು ಹುಟ್ಟುಹಾಕುತ್ತದೆ ಎಂದ ಸಿಜೆಐ ಮಾರ್ಚ್‌ರೆಗೆ ಕಾಯಿರಿ ಎಂದು ಹೇಳಿದರು.

ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ನೀಡಿದ ಭರವಸೆಗಳು ಚುನಾವಣಾ ದುಷ್ಕೃತ್ಯಕ್ಕೆ ಸಮನಾಗಿದೆ. ಮುಂದೆ 5 ವಿಧಾನಸಭಾ ಚುನಾವಣೆಗಳು ಬರಲಿವೆ. ಉಚಿತ ಘೋಷಣೆಗಳು ಭ್ರಷ್ಟ ಪದ್ದತಿಗಳಾಗಿವೆ. ಇದು ರಾಜ್ಯದ ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತದೆ. ಸೂರ್ಯ, ಚಂದ್ರನನ್ನು ಬಿಟ್ಟು ಉಳಿದೆಲ್ಲವನ್ನೂ ಕೊಡುವುದಾಗಿ ಪಕ್ಷಗಳು ಭರವಸೆ ನೀಡುತ್ತವೆ. ಇದು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಮಾರಕವಾಗಿದ್ದು ಸಂವಿಧಾನಕ್ಕೂ ಹಾನಿಯುಂಟುಮಾಡುತ್ತದೆ. ಚುನಾವಣಾ ಪ್ರಣಾಳಿಕೆಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ಮತ್ತು ಮತ್ತು ಭಾರತದ ಚುನಾವಣಾ ಆಯೋಗಕ್ಕೆ ನಿರ್ದೇಶನಗಳನ್ನು ನೀಡುವಂತೆ ಅರ್ಜಿಯಲ್ಲಿ ಕೋರಲಾಗಿದೆ. ಮುಂದೆ ಕೇರಳ, ಪುಟ 2ಕ್ಕೆ







## ಕೋಟ್ಯಂತರ ಬೆಲೆ ಬಾಳುವ ಸರ್ಕಾರಿ ಜಾಗ ಒತ್ತುವರಿ ತೆರವು




**ಮೈಸೂರು:** ನಗರದ ಹೃದಯ ಭಾಗದಲ್ಲಿದ್ದ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದ ಜಾಗವನ್ನು ತಹಶೀಲ್ದಾರ್ ನೇತೃತ್ವದಲ್ಲಿ ಶುಕ್ರವಾರ ದಾಳಿ ನಡೆಸಿ ತೆರವು ಮಾಡಲಾಗಿದೆ. ನಗರದ ನಂಜನಗೂಡು ರಸ್ತೆಯ ಜೆಎಸ್‌ಎಸ್ ಕಾಲೇಜು ಮುಂಭಾಗದಲ್ಲಿದ್ದ ಕೋಟ್ಯಂತರ ಬೆಲೆಯ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಲಾಗಿತ್ತು.

ನಗರದ ಸ.ನಂ.87ರಲ್ಲಿ 0.38 ಎಕರೆ ಅಕ್ರಮ ಒತ್ತುವರಿಯನ್ನು ತಹಸೀಲ್ದಾರ್ ಮಹೇಶ್ ನೇತೃತ್ವದಲ್ಲಿ ತೆರವು ಮಾಡಲಾಯಿತು. ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕ–ಬಾಲಕಿಯರ ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ಸರ್ಕಾರ ಮಂಜೂರು ಮಾಡಿದ್ದ ಅಮೂಲ್ಯ ಜಾಗವನ್ನು ಅಕ್ರಮ ಪಾರ್ಕಿಂಗ್ ಮತ್ತು ಖಾಸಗಿ ವ್ಯಾಪಾರಕ್ಕಾಗಿ ಒತ್ತುವರಿ ಮಾಡಿಕೊಳ್ಳಲಾಗಿತ್ತು.

ಕಳೆದ 15 ವರ್ಷಗಳಿಂದ ಈ ಜಾಗವನ್ನು ಅಕ್ರಮವಾಗಿ ವಶಪಡಿಸಿಕೊಂಡಿರುವ ಖಾಸಗಿ ವ್ಯಕ್ತಿಗಳು, ವಾಹನ ಪಾರ್ಕಿಂಗ್ ಹಾಗೂ ಟೀ ಅಂಗಡಿ ನಡೆಸಿ ಪ್ರತಿನಿತ್ಯ ಲಕ್ಷಾಂತರ ರೂಪಾಯಿ ಸಂಪಾದಿಸುತ್ತಿದ್ದರು. ಅಧಿಕಾರಿಗಳು ಈ ಬಗ್ಗೆ ಮೌನ ವಹಿಸಿದ್ದು, ಪುಟ 2ಕ್ಕೆ

## ಮೆಟ್ರೋ ಪ್ರಯಾಣ ದರ ಹೆಚ್ಚಳದಲ್ಲಿ ರಾಜ್ಯ ಸರ್ಕಾರದ ಪಾತ್ರವಿಲ್ಲ: ಸಿದ್ದರಾಮಯ್ಯ



**ಬೆಂಗಳೂರು:** ಬೆಂಗಳೂರು ನಮ್ಮ ಮೆಟ್ರೋ ಪ್ರಯಾಣ ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ಆಡಳಿತರೂಢ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಮತ್ತೆ ಆರೋಪ– ಪ್ರತ್ಯಾರೋಪ ಆರಂಭವಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಸ್ಪಷ್ಟನೆ ನೀಡಿದ್ದಾರೆ.

ಮೆಟ್ರೋ ಪ್ರಯಾಣ ದರ ಏರಿಕೆಯಲ್ಲಿ ರಾಜ್ಯ ಸರ್ಕಾರದ ಯಾವುದೇ ಪಾತ್ರವಿಲ್ಲ. ಇದು ಕೇಂದ್ರ ಸರ್ಕಾರದ ಕಾಯ್ದೆಯಡಿ ರಚನೆಯಾದ ಸಮಿತಿಯ ತೀರ್ಮಾನವಾಗಿದೆ. ಅದನ್ನು ಜಾರಿಗೊಳಿಸುವುದು ಕಾನೂನಿನ ಅನಿವಾರ್ಯತೆ ಪುಟ 2ಕ್ಕೆ

## ಪತ್ರಕರ್ತ ಕೆ.ವಿ.ಶ್ರೀನಿವಾಸನ್ ನಿಧನ



**ಮೈಸೂರು:** ಇಲ್ಲಿನ ಹಿರಿಯ ಪತ್ರಕರ್ತ ಕೆ.ವಿ.ಶ್ರೀನಿವಾಸನ್ ಅವರು ಶುಕ್ರವಾರ ಸಂಜೆ ಹುಣಸೂರು ಸಮೀಪದ ಕಲ್ಕುಣಿಕೆ ಗ್ರಾಮದ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ 81 ವರ್ಷ ವಯಸ್ಸಾಗಿತ್ತು. ಅವರು ಅವಿವಾಹಿತರಾಗಿದ್ದರು. ಶ್ರೀನಿವಾಸನ್ ಅವರು ಪತ್ರಕರ್ತರ ಬಳಗದಲ್ಲಿ ಬ್ರದರ್ ಎಂದೇ ಹೆಸರಾಗಿದ್ದರು. ಅವರು ಕೆಲವು ದಿನಗಳಿಂದ ವಯೋಸಹಜ ಕಾಯಿಲೆಯಿಂದ ಅಸ್ವಸ್ಥರಾಗಿದ್ದರು.

ಶ್ರೀನಿವಾಸನ್ ಅವರು ಪತ್ರಿಕೋದ್ಯಮದಲ್ಲಿ ತಮ್ಮ ಸರಳ ನಡೆ, ನುಡಿ ಪ್ರಾಮಾಣಿಕತೆ, ವೃತ್ತಿ ಬದ್ಧತೆಗೆ ಹೆಸರಾಗಿದ್ದರು.

ತಂದೆ ಕೆ.ವಿ.ವೆಂಕಟಪ್ಪಗೌಡ, ತಾಯಿ ಜಾನಕಮ್ಮ ಅವರ ಪುತ್ರನಾಗಿದ್ದರು. 1944 ಮಾ.6ರಲ್ಲಿ ಹುಣಸೂರು ಪಟ್ಟಣದ ಕಲ್ಕುಣಿಕೆಯಲ್ಲಿ ಜನಿಸಿದರು.

## ನಾಯಕತ್ವ ಬದಲಾವಣೆ ಯತ್ನಕ್ಕೆ ಹೈಕಮಾಂಡ್ 'ಸೊಪ್ಪು ಹಾಕಿಲ್ಲ' । ಡಿಕೆಶಿಗೆ ಯತೀಂದ್ರ ಟಾಂಗ್

# ಮತ್ತೆ ಶುರು 'ಪವರ್ ಪಾಲಿಟಿಕ್ಸ್'





**ಮೈಸೂರು:** ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಯಾರೋ ಕೆಲವರು ಪ್ರಯತ್ನಿಸಿದರು. ಅದಕ್ಕೆ ಹೈಕಮಾಂಡ್ ಸೊಪ್ಪು ಹಾಕಿಲಿಲ್ಲ ಎಂದ ವಿಧಾನ ಪರಿಷತ್ ಸದಸ್ಯ, ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಅವರು ಡಿ.ಕೆ.ಶಿವಕುಮಾರ್ ಅವರ ಹೆಸರು ಹೇಳದೆ ಟಾಂಗ್ ನೀಡಿದ್ದಾರೆ.

ಮೈಸೂರಿನಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಯತೀಂದ್ರ ಅವರು, ಸ್ಫೋಟಕ ವಿಚಾರವನ್ನು ಬಹಿರಂಗಪಡಿಸಿದ್ದಾರೆ. ನಾಯಕತ್ವ ಬದಲಾವಣೆ ಮುಗಿದ ವಿಚಾರ. ಐದು ವರ್ಷವೂ ನಮ್ಮ ತಂದೆ ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ. ಇದು ಈಗ ಸೆಟ್ಲಡ್ ವಿಚಾರ. ಈ ಬಗ್ಗೆ ಹೈಕಮಾಂಡ್ ನಮ್ಮ ತಂದೆಗೆ ಗ್ರೀನ್ ಸಿಗ್ನಲ್ ಕೊಟ್ಟಿದೆ. ಸಿದ್ದರಾಮಯ್ಯ ಅವರು ಬಜೆಟ್ ಸಭೆ ಮಾಡುತ್ತಿದ್ದಾರೆ ಎಂದು ಹೇಳಿದರು.

ಯಾರೋ ಕೆಲವರು ನಾಯಕತ್ವ ಬದಲಾವಣೆ ಬಗ್ಗೆ ಪ್ರಯತ್ನ ಮಾಡಿದ್ದರು. ಆ ಪ್ರಯತ್ನಕ್ಕೆ ಹೈಕಮಾಂಡ್ ಸೊಪ್ಪು ಹಾಕಿಲ್ಲ. ಹೀಗಾಗಿ ಸಿದ್ದರಾಮಯ್ಯನವರು 5 ವರ್ಷ ಸಿಎಂ ಆಗಿ ಅಧಿಕಾರ ನಡೆಸುತ್ತಾರೆ. ಪಕ್ಷದಲ್ಲಿ ಈಗ ಎಲ್ಲೂ ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆಗಳು ಆಗುತ್ತಿಲ್ಲ. ಮಾಧ್ಯಮಗಳಲ್ಲಿ ಮಾತ್ರ ಈ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ನಮ್ಮಲ್ಲಿ ಈಗ ಯಾವ ಗೊಂದಲಗಳೂ ಇಲ್ಲ ಎಂದು ತಿಳಿಸಿದರು.

ಮುಡಾ ಪ್ರಕರಣದಲ್ಲಿ ನ್ಯಾಯಾಲಯದಿಂದ ಸಿಎಂ ಕುಟುಂಬಕ್ಕೆ ಕ್ಲೀನ್‌ಚಿಟ್ ಸಿಕ್ಕ ಬಗ್ಗೆ ಮಾತನಾಡಿ, ದೂರುದಾರರು ಮೇಲ್ಮನವಿ ಹೋಗುತ್ತೇವೆ ಎಂದು ಹೇಳಿದ್ದಾರೆ. ಆ ಪ್ರಕ್ರಿಯೆ ಮುಗಿಯಲಿ. ಪುಟ 2ಕ್ಕೆ

### ಜಾರ್ಜ್ ಕೆಲಸದಲ್ಲಿ ಕೈಹಾಕಿಲ್ಲ

**ಮೈಸೂರು:** ಇಂಧನ ಸಚಿವ ಕೆ.ಜೆ.ಜಾರ್ಜ್ ರಾಜೀನಾಮೆ ನೀಡಿದ್ದರು ಎಂಬ ವಿಚಾರವಾಗಿ ಪ್ರತಿಕ್ರಿಯಿಸಿದ ಯತೀಂದ್ರ ಅವರು, ಜಾರ್ಜ್ ಅವರೇ ಈ ಬಗ್ಗೆ ಸ್ಪಷ್ಟನೆ ಕೊಟ್ಟಿದ್ದಾರೆ. ನಾನು ಯಾವತ್ತೂ ಜಾರ್ಜ್ ಅವರ ಇಲಾಖೆಯ ಬಗ್ಗೆ ಯಾವ ಚರ್ಚೆಯನ್ನೂ ಮಾಡಿಲ್ಲ. ಸುಖಾಸುಮ್ಮನೆ ಬಿಜೆಪಿಯವರು ನನ್ನ ಹೆಸರನ್ನು ಎಳೆದು ತಂದಿದ್ದಾರೆ. ನನ್ನ ತಂದೆಯವರನ್ನು ಟಾರ್ಗೆಟ್ ಮಾಡಲು ಬಿಜೆಪಿಗೆ ಆಗಲ್ಲ. ಈ ಕಾರಣದಿಂದ ಎಲ್ಲಾ ವಿಚಾರದಲ್ಲೂ ನನ್ನನ್ನು ಟಾರ್ಗೆಟ್ ಮಾಡುತ್ತಾರೆ. ಜಾರ್ಜ್ ಅವರ ವಿಚಾರದಲ್ಲೂ ಆಗಿರುವುದು ಇದೇ ಎಂದು ತಿರುಗೇಟು ನೀಡಿದರು.

## ಯತೀಂದ್ರ ನಮ್ಮ ಹೈಕಮಾಂಡ್: ಡಿ.ಕೆ.ಶಿವಕುಮಾರ್ ತಿರುಗೇಟು



**ಮಂಗಳೂರು:** ಯತೀಂದ್ರ ಅವರೇ ನಮ್ಮ ಹೈಕಮಾಂಡ್. ಅವರು ಹೇಳಿದ ಮೇಲೆ ಇನ್ನೇನಿದೆ. ಅವರ ಮಾತನ್ನು ಗೌರವದಿಂದ ಸ್ವೀಕರಿಸುವೆ ಎಂದು ಉಪಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಮಂಗಳೂರು ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಪತ್ರಕರ್ತರ ಜೊತೆ ಅವರು ಮಾತನಾಡಿದರು. ಐದು ವರ್ಷ ತಮ್ಮ ತಂದೆ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ, ಅದಕ್ಕೆ ಹೈಕಮಾಂಡ್ ಒಪ್ಪಿದ್ದು ಹಸಿರು ನಿಶಾನೆಯನ್ನೂ ತೋರಿಸಿದೆ ಎಂದು ಪುಟ 2ಕ್ಕೆ


## ಡ್ರಗ್ಸ್ ಫ್ಯಾಕ್ಟರಿ ಪತ್ತೆ ವೈಫಲ್ಯ: 11 ಮಂದಿ ಪೊಲೀಸರ ಎತ್ತಂಗಡಿ

**ಮೈಸೂರು:** ನಗರದಲ್ಲಿ ತಲೆ ಎತ್ತಿದ್ದ ಡ್ರಗ್ಸ್ ಫ್ಯಾಕ್ಟರಿ ಪತ್ತೆ ಹಚ್ಚುವಲ್ಲಿ ವಿಫಲವಾದ ಹಿನ್ನೆಲೆಯಲ್ಲಿ ನಗರ ಅಪರಾಧ ಘಟಕದ (ಸಿಸಿಬಿ) 8 ಸಿಬ್ಬಂದಿ ಸೇರಿದಂತೆ 11 ಪೊಲೀಸರನ್ನು ಸರ್ಕಾರ ಎತ್ತಂಗಡಿ ಮಾಡಿದೆ. ಆದರೆ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದ ಹಿರಿಯ ಅಧಿಕಾರಿಗಳನ್ನು ಮುಟ್ಟಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ.

ಸಿಸಿಬಿಯ ಶಿವಣ್ಣ, ದೊಡ್ಡೇಗೌಡ, ಅನಿಲ್, ರಾಜು, ಉಮಾ ಮಹೇಶ್ವರ್, ರಾಮಸ್ವಾಮಿ, ಪ್ರಕಾಶ್ ಹಾಗೂ ಗೋವಿಂದ ಅವರನ್ನು ವರ್ಗಾವಣೆ ಮಾಡಲಾಗಿದೆ. ಜತೆಗೆ ರೌಡಿ ಪ್ರತಿಬಂಧಕ ದಳದ ಮೂವರು ಸಿಬ್ಬಂದಿಗೂ ವರ್ಗಾವಣೆ ಶಿಕ್ಷೆ ವಿಧಿಸಲಾಗಿದೆ. ಕರ್ತವ್ಯ ಲೋಪ, ಅಪರಾಧ ಕೃತ್ಯಗಳ ಪತ್ತೆಯಲ್ಲಿ ನಿರ್ಲಕ್ಷ್ಯ ಹಾಗೂ ಡ್ರಗ್ಸ್ ಪೆಡ್ಲರ್‌ಗಳ ವಿರುದ್ಧ ಪರಿಣಾಮಕಾರಿ ಕ್ರಮ ಕೈಗೊಳ್ಳದಿರುವ ಆರೋಪಗಳ ಹಿನ್ನೆಲೆ ಪೊಲೀಸರನ್ನು ತಕ್ಷಣದಿಂದಲೇ ವರ್ಗಾವಣೆ ಮಾಡಲಾಗಿದೆ.

ಮೈಸೂರಿನ ರಿಂಗ್ ರಸ್ತೆ ಬಳಿ ಡ್ರಗ್ಸ್ ಪುಟ 2ಕ್ಕೆ

## ವಿಮಾನ ನಿಲ್ದಾಣದಲ್ಲಿ ಚಿನ್ನಾಭರಣ ಕಳವು



**ಬೆಂಗಳೂರು:** ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಅಮೆರಿಕಗೆ ಪ್ರಯಾಣ ಬೆಳೆಸುತ್ತಿದ್ದ ಮಹಿಳೆಯ ಲಗೇಜ್ ಬ್ಯಾಗ್ ನಲ್ಲಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನ, ವಜ್ರಾಭರಣ ಕಳುವಾಗಿರುವ ಘಟನೆ ನಡೆದಿದೆ. ಈ ಸಂಬಂಧ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಹುಬ್ಬಳ್ಳಿಯ ಶಾಂತಾ ರಮೇಶ್ ಕಾಶಿ ಕೌಂಟಿ ಎಂಬುವವರು ಕುಟುಂಬ ಸಮೇತ ಅಮೆರಿಕದಲ್ಲಿ ನೆಲೆಸಿದ್ದಾರೆ. ಆಗಸ್ಟ್ ನಲ್ಲಿ ಹುಬ್ಬಳ್ಳಿಗೆ ಆಗಮಿಸಿದ್ದರು. ಮರಳಿ ಅಮೆರಿಕಗೆ ತೆರಳುವ ಸಲುವಾಗಿ ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದುಬೈನ ಅಬುದಾಬಿಗೆ ಪ್ರಯಾಣ ಬೆಳೆಸಿದ್ದಾರೆ.

ಪ್ರಯಾಣದ ಸಮಯದಲ್ಲಿ ಲಗೇಜ್ ಬ್ಯಾಗ್‌ನಲ್ಲಿ ಸರಿಸುಮಾರು 790 ಗ್ರಾಂ ಚಿನ್ನಾಭರಣ ಹಾಗೂ 8 ಲಕ್ಷ ಮೌಲ್ಯದ ವಜ್ರಾವರಣಗಳನ್ನ ಇಟ್ಟಿದ್ದರು. ಬೆಂಗಳೂರಿಂದ ಪ್ರಯಾಣ ಬೆಳೆಸಿದ ಮಹಿಳೆ ಪುಟ 2ಕ್ಕೆ

## ಖಾಸಗಿ ಬಸ್ ಗೆ ಬೆಂಕಿ: 40 ಪ್ರಯಾಣಿಕರು ಪಾರು






**ಬೆಂಗಳೂರು:** ನೆಲಮಂಗಲ ತಾಲ್ಲೂಕಿನ ಹನುಮಂತಪುರ ಗೇಟ್ ಬಳಿ 40 ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಖಾಸಗಿ ಬಸ್ ಬೆಂಕಿ ಹತ್ತಿಕೊಂಡು ಸಂಪೂರ್ಣ ಕರಕಲಾಗಿ ಸುಟ್ಟು ಹೋಗಿದೆ. ಈ ಭೀಕರ ಅವಘಡದಲ್ಲಿ ಅದೃಷ್ಟವಶಾತ್ ಬಸ್‌ನಲ್ಲಿದ್ದ ಎಲ್ಲಾ ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ.

ಸಂಜನಾ ಟ್ರಾವೆಲ್ಸ್ ಗೆ ಸೇರಿದ ಬಸ್ ಶುಕ್ರವಾರ ಬೆಳಗ್ಗೆ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಬೆಂಕಿ ಹತ್ತಿಕೊಂಡು ಸಂಪೂರ್ಣ ಬಸ್ ಸುಟ್ಟು ಕರಕಲಾಗಿದೆ. ತುಮಕೂರು– ಬೆಂಗಳೂರು ಹೆದ್ದಾರಿಯಲ್ಲಿ ಈ ಘಟನೆ ನಡೆದಿದೆ. ಬೆಂಗಳೂರಿನಿಂದ ಕಲಬುರಗಿಗೆ ತೆರಳುತ್ತಿದ್ದ ಸಂಜನಾ ಟ್ರಾವೆಲ್ಸ್ ಸೇರಿದ ಬಸ್ ನೆಲಮಂಗಲ ತಾಲೂಕಿನ ಹನುಮಂತಪುರ ಗೇಟ್ ಸಮೀಪ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಬೆಂಕಿಗೆ ಆಹುತಿಯಾಗಿದೆ.

ಹೆದ್ದಾರಿ ಕಾಮಗಾರಿ ಹಿನ್ನೆಲೆ ಬಸ್ ನಿಧಾನವಾಗಿ ಸಾಗುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಬಳಿಕ ಕ್ಷಣಾರ್ಧದಲ್ಲೇ ಬೆಂಕಿ ಹೊತ್ತಿಕೊಂಡಿದೆ. ಬಸ್ ಹೊತ್ತಿ ಉರಿದು ಬಸ್ ನಲ್ಲಿದ್ದ ಲಗೇಜ್, ಬೆಲೆಬಾಳುವ ವಸ್ತುಗಳು ಸುಟ್ಟು ಭಸ್ಮವಾಗಿವೆ. ಸ್ಥಳಕ್ಕೆ ಬಂದ ನೆಲಮಂಗಲ ಅಗ್ನಿಶಾಮಕ ದಳ ಬೆಂಕಿ ನಂದಿಸಿದೆ. ನೆಲಮಂಗಲ ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

## ರೆಪೋ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಆರ್‌ಬಿಐ ಸಮಿತಿ




**ಮುಂಬೈ:** ಭಾರತೀಯ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ರೆಪೋ ದರವನ್ನು ಶುಕ್ರವಾರ ಯಥಾಸ್ಥಿತಿಯಲ್ಲೇ ಮುಂದುವರಿಸಿದೆ. ಗವರ್ನರ್ ಸಂಜಯ್ ಮಲ್ಹೋತ್ರಾ ನೇತೃತ್ವದಲ್ಲಿ ನಡೆದ ಆರ್‌ಬಿಐನ ಹಣಕಾಸು ನೀತಿ ಸಮಿತಿಯು ಸಭೆಯು ಸರ್ವಾನುಮತದಿಂದ ಬಡ್ಡಿದರವನ್ನು ಯಥಾಸ್ಥಿತಿಯಲ್ಲೇ ಮುಂದುವರಿಸಲು ನಿರ್ಧರಿಸಿದೆ.

ಬೆಳವಣಿಗೆಯಾಗುತ್ತಿರುವ ಸ್ಥೂಲ ಆರ್ಥಿಕ ಪರಿಸ್ಥಿತಿಗಳು ಮತ್ತು ಒಟ್ಟಾರೆ ಆರ್ಥಿಕ ದೃಷ್ಟಿಕೋನದ ವಿವರವಾಗಿ ಮೌಲ್ಯಮಾಪನದ ನಂತರ ಎಂಪಿಸಿ ತಟಸ್ಥ ನಿಲುವನ್ನು ಕಾಯ್ದುಕೊಂಡಿದೆ ಎಂದು ಮಲ್ಹೋತ್ರಾ ತಿಳಿಸಿದರು. ದೇಶೀಯ ಹಣದುಬ್ಬರ ಮತ್ತು ಬೆಳವಣಿಗೆಯ ಮುನ್ನೋಟವು ಧನಾತ್ಮಕವಾಗಿದೆ. ಮುಂದಿನ ಎರಡು ತ್ರೈಮಾಸಿಕಗಳಿಗೆ ನೈಜ ಜಿಡಿಪಿ ಬೆಳವಣಿಗೆ ಏರಿಕೆಯಾಗುವಂತೆ ಪುಟ 2ಕ್ಕೆ

## ಮಕ್ಕಳಿಗೆ ಶಿಕ್ಷಣ ಹೊರೆ ಆಗಬಾರದು: ಅರೆಮನಸ್ಸಿನ ಕಲಿಕೆ ಬೇಡ

### 'ಪರೀಕ್ಷಾ ಪೆ ಚರ್ಚಾ 2026'ರ 9ನೇ ಆವೃತ್ತಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸಂವಾದ



**ನವದೆಹಲಿ:** ಅಗ್ಗದ ದರದಲ್ಲಿ ಡೇಟಾ ಸಿಗುತ್ತಿದೆ ಎಂಬ ಕಾರಣಕ್ಕೆ ಮೊಬೈಲ್‌ನಲ್ಲಿ ಮುಳುಗಿ ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡಬೇಡಿ. ಜೀವನ ಮತ್ತು ಶೈಕ್ಷಣಿಕ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳುವತ್ತ ಗಮನಹರಿಸಿ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ವಿದ್ಯಾರ್ಥಿಗಳಿಗೆ ತಿಳಿಸಿದರು.

ದೆಹಲಿಯ ತಮ್ಮ ನಿವಾಸದಲ್ಲಿ ದೇಶದ ಹಲವು ರಾಜ್ಯಗಳಿಂದ ಬಂದ ಆಯ್ದ ವಿದ್ಯಾರ್ಥಿಗಳೊಂದಿಗೆ 'ಪರೀಕ್ಷಾ ಪೆ ಚರ್ಚಾ 2026'ರ ಒಂಬತ್ತನೇ ಆವೃತ್ತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಸಂವಾದ ನಡೆಸಿದರು.

ಶಿಕ್ಷಣ ಮಕ್ಕಳಿಗೆ ಹೊರೆ ಎನಿಸಬಾರದು. ಅರೆಮನಸ್ಸಿನಿಂದ ಕಲಿತರೆ ವಿದ್ಯೆ ತಲೆಗೆ ಹತ್ತುವುದಿಲ್ಲ. ಆಸಕ್ತಿಯಿಲ್ಲದಿದ್ದರೆ ಶಿಕ್ಷಣ ಜೀವನವನ್ನು ಯಶಸ್ವಿಗೊಳಿಸುವುದಿಲ್ಲ. ಆದ್ದರಿಂದ ಎಲ್ಲರೂ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ನಮ್ಮ ಗುರಿ ತಲುಪಬಹುದಾದದ್ದಾಗಿರಬೇಕು. ಹಾಗೆಂದು ಸುಲಭವಾಗಿ ಸಾಧಿಸಲಾಗದಂತಿರಬೇಕು. ಮನಸ್ಸನ್ನು ಪಳಗಿಸಿ, ಮನಸ್ಸಿನ ಜೊತೆ ಸಂಪರ್ಕ ಹೊಂದಿ, ನೀವು ಅಧ್ಯಯನ ಮಾಡಲು ಅಗತ್ಯವಿರುವ ವಿಷಯಗಳನ್ನು ಇಟ್ಟುಕೊಳ್ಳಿ. ಆಗ ನೀವು ಯಾವಾಗಲೂ ಯಶಸ್ಸನ್ನು ಕಾಣುವಿರಿ ಎಂದು ಕರೆ ನೀಡಿದರು. ಪುಟ 2ಕ್ಕೆ

### ಆನ್ ಲೈನ್ ಜೂಜಾಟ ಪ್ರೋತ್ಸಾಹಿಸಲ್ಲ

ಹಣಕ್ಕಾಗಿ ಆನ್ ಲೈನ್ ಗೇಮ್ಸ್‌ನಲ್ಲಿ ತೊಡಗಿಸಿಕೊಳ್ಳುವವರು ಹಾಳಾಗುತ್ತಾರೆ. ನಾವು ದೇಶದಲ್ಲಿ ಜೂಜಾಟವನ್ನು ಪ್ರೋತ್ಸಾಹಿಸಬೇಕಾಗಿಲ್ಲ. ನಮ್ಮ ಭವಿಷ್ಯದ ಪೀಳಿಗೆ ಆನ್ ಲೈನ್ ಗೇಮ್ಸ್, ಜೂಜಾಟದಿಂದ ದಾರಿ ತಪ್ಪುತ್ತದೆ. ಹೀಗಾಗಿ ನಾನು ಆನ್‌ಲೈನ್ ಜೂಜಾಟದ ವಿರುದ್ಧ ಕಾನೂನು ಮಾಡಿದ್ದೇನೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು. 'ಪರೀಕ್ಷಾ ಪೆ ಚರ್ಚಾ'ದಲ್ಲಿ ಕೆಲವು ವಿಷಯಗಳನ್ನು ಬದಲಾಯಿಸಿದ್ದೇನೆ, ನಾನು ಪರೀಕ್ಷಾ ಪೆ ಚರ್ಚಾವನ್ನು ಪ್ರಾರಂಭಿಸಿದಾಗ, ಒಂದು ಮಾದರಿ ಇತ್ತು. ಈಗ, ಪುಟ 2ಕ್ಕೆ

## ಲೋಕಸಭೆಯಲ್ಲಿ ಮತ್ತೆ ಗದ್ದಲ: ಸ್ಪೀಕರ್ ಓಂಬಿರ್ಲಾ ಅಸಮಾಧಾನ



**ನವದೆಹಲಿ:** ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಶುಕ್ರವಾರ ಕೂಡ ತೀವ್ರ ಪ್ರತಿಭಟನೆ ನಡೆಸಿದವು. ಇದರಿಂದ ಅಸಮಾಧಾನಗೊಂಡ ಸ್ಪೀಕರ್ ಓಂ ಬಿರ್ಲಾ ಅವರು ಇಂತಹ ಸದನವನ್ನು ನಡೆಸಲು ಸಾಧ್ಯವಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಮಾಜಿ ಸೇನಾ ಮುಖ್ಯಸ್ಥ ನವರಣೆ ಅವರ ಅಪ್ರಕಟಿತ ಆತ್ಮಚರಿತ್ರೆ ಪ್ರಸ್ತಾಪ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ವಿರೋಧ ಪಕ್ಷಗಳು ತೀವ್ರ ಗದ್ದಲ ಸೃಷ್ಟಿಸಿದ್ದರಿಂದ ಸದನದಲ್ಲಿ ಕಾಲಹರಣವಾಗಿದೆ ಬಿರ್ಲಾ ಅವರು ಅಸಮಾಧಾನ ವ್ಯಕ್ತಪಡಿಸಿದರು. ಪ್ರಸ್ತುತ ಅಧಿವೇಶನದಲ್ಲಿ ಪುಟ 2ಕ್ಕೆ

ವರ್ತಮಾನ
ಶನಿವಾರ
ಫೆಬ್ರವರಿ 07, 2026

# ಸಂವಿಧಾನ ವಿರೋಧಿಗಳ ಕೈಗೆ ಅಧಿಕಾರ ಕೊಡದಿರಿ: ಡಾ.ಯತೀಂದ್ರ

ಮೈಸೂರು: ಸಂವಿಧಾನ ವಿರೋಧಿಗಳ ಕೈಗೆ ಅಧಿಕಾರ ಕೊಡಬಾರದು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶುಕ್ರವಾರ ಡಾ.ಎಚ್.ಸಿ. ಮಹದೇವಪ್ಪ ಅಭಿಮಾನಿಗಳ ಬಳಗದ ಎಂಟನೇ ವಾರ್ಷಿಕೋತ್ಸವ, ಜಿಲ್ಲಾ ಹಾಗೂ ತಾಲೂಕು ಅಧ್ಯಕ್ಷರ ಪದಗ್ರಹಣ, ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ಸಮಾರಂಭವನ್ನು ಸಂವಿಧಾನ ಪೀಠಿಕೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ನಾವು ಯಾರಿಗೆ ಅಧಿಕಾರ ಕೊಡ್ತೀವಿ ಎಂಬುದು ಮುಖ್ಯ ವಾಗುತ್ತದೆ. ಸಮಾಜದಲ್ಲಿ ಕಟ್ಟಕಡೆಯ ವ್ಯಕ್ತಿಗೂ ಸಮಾನತೆ, ಸಾಮಾಜಿಕ ನ್ಯಾಯ ಕೊಡುವವರಿಗೆ ಕೈಗೆ ಅಧಿಕಾರ ನೀಡಿದರೆ ಸಂವಿಧಾನ ಉಳಿಯುತ್ತದೆ. ಆದರೆ, ಇತ್ತೀಚಿನ ದಿನಮಾನಗಳಲ್ಲಿ ಸಂವಿಧಾನ ವಿರೋಧಿಗಳು ಪ್ರಬಲರಾಗುತ್ತಿದ್ದಾರೆ. ಅವರಿಗೆ ಹೆಚ್ಚೆಚ್ಚು ಅಧಿಕಾರಕ್ಕೆ ಬರುತ್ತಿದ್ದಾರೆ. ಇದು ಅಪಾಯಕಾರಿ. ಈ ರೀತಿ ಆಗದಂತೆ ನೋಡಿಕೊಳ್ಳಬೇಕು ಎಂದು ಎಚ್ಚರಿಸಿದರು.

ಡಾ.ಎಚ್.ಸಿ. ಮಹದೇವಪ್ಪ ಅವರು ಅಪರೂಪದ ರಾಜಕಾರಣಿ ಹಾಗೂ ಅಪರೂಪದ ನಾಯಕರು,



ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದ ಆಶಯಗಳಲ್ಲಿ ತಿಳಿಸಿರುವಂತೆ ಸ್ವಾತಂತ್ರ್ಯ, ಸಮಾನತೆ, ಭಾತೃತ್ವದಲ್ಲಿ ನಂಬಿಕೆ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ ಎಂದು ಡಾ.ಯತೀಂದ್ರ ಸಿದ್ದರಾಮಯ್ಯ ಶ್ಲಾಘಿಸಿದರು.

ಡಾ. ಮಹದೇವಪ್ಪ ಅವರು ನಮ್ಮ ತಂದೆ ಸಿದ್ದರಾಮಯ್ಯ ಅವರ ಪರಮಾಪ್ತರು. ಸದಾ ಅವರೊಂದಿಗೆ ಇದ್ದು ಕೆಲಸ ಮಾಡುತ್ತಾ ಬಂದಿದ್ದಾರೆ. ಜೆಡಿಎಸ್‌ನಿಂದ ತಂದೆಯವರನ್ನು ಉಚ್ಚಾಟಿಸಿದಾಗ ಅವರೊಂದಿಗೆ ಗಟ್ಟಿಯಾಗಿ ನಿಂತರು. ನಂತರ ಎಬಿಪಿಜೆಡಿಗೆ ಬಂದರು. ಅಲ್ಲಿಂದ ಕಾಂಗ್ರೆಸ್‌ಗೆ ಬಂದರು. ಟಿ. ನರಸೀಪುರದಿಂದ ಆರು ಬಾರಿ ಶಾಸಕರಾಗಿ, ಸಚಿವರಾಗಿ ತಂದೆಯವರ ಜೊತೆ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿರುವ ಸಿದ್ದರಾಮಯ್ಯ ಅವರ ಯಶಸ್ಸಿನಲ್ಲಿ ಮಹದೇವಪ್ಪ ಅವರ ಪಾಲು ಕೂಡ ಇದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸಾಹಿತಿ ಪ್ರೊ.ರಾಜಪ್ಪ ದಳವಾಯಿ, ಮೈವಿವಿ ಹಿರಿಯ ಪ್ರಾಧ್ಯಾಪಕ ಡಾ.ಡಿ. ಆನಂದ್ ಮುಖ್ಯ ಅತಿಥಿಗಳಾ ಗಿದ್ದರು. ಬಳಗದ ಗೌರವಾಧ್ಯಕ್ಷ ಬನ್ನೂರಿನ ಎಂ.ಎನ್ .ಸ್ವಾಮಿ, ರಾಜ್ಯಾಧ್ಯಕ್ಷ ಹಿನ್ಕಲ್ ನಂಜುಂಡ, ಉಪಾಧ್ಯಕ್ಷ ಕಡಕೊಳ ಕೆ.ವಿ.ಭರತರಾಜ್, ಕಾರ್ಯದರ್ಶಿ ಹರದನ ಹಳ್ಳಿ ಆರ್. ಮಹೇಶ್, ಖಜಾಂಚಿ ದಡದಹಳ್ಳಿ ಬಿ.ಎಂ.ಮಹದೇವ್, ಮಾಧ್ಯಮ ಸಲಹೆಗಾರ ಕೋಟೆ ಎಚ್.ಕೆ.ಮಂಜುನಾಥ್, ನಿರ್ದೇಶಕರಾದ ಮಾವಿನಹಳ್ಳಿ ನಾಗೇಶ್, ಹುಲ್ಲಹಳ್ಳಿ ಬಾಬು, ಬೆನಕನಹಳ್ಳಿ ಎಂ.ಹರೀ ಶ್‌ಕುಮಾರ್ ಇದ್ದರು. ಕಾರ್ಯಾಧ್ಯಕ್ಷ ಕುರಬೂರು ಡಾ.ಕೆ.ಎನ್.ಬಸವರಾಜು ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಬೆನಕನಹಳ್ಳಿ ಡಾ.ಬಿ.ಆರ್. ನಾಗರಾಜು ಸಂವಿಧಾನಪೀಠಿಕೆ ಬೋಧಿಸಿದರು. ಇದೇ ಸಂದರ್ಭ ದಲ್ಲಿ ಜಿಲ್ಲಾಧ್ಯಕ್ಷರಾದ ಕಗ್ಗಲಿಪುರ ಮಧುಕುಮಾರ್, ನಲ್ಲೂರು ಮಹದೇವಸ್ವಾಮಿ, ರಂಗಸ್ವಾಮಿ ಡೊನಾಲ್ಡ್, ವಿಶಾಲ್ ನಂದಕುಮಾರ್, ಕೆ.ಕಬ್ಬಾಳಯ್ಯಗೆ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ನೇಮಕಾತಿ ಆದೇಶ ಪತ್ರ ವಿತರಿಸಿದರು.

### ವಿವಿಧ ಕ್ಷೇತ್ರಗಳ 10 ಸಾಧಕರಿಗೆ ಸನ್ಮಾನ

**ಅಖಿಲ ಕರ್ನಾಟಕ ಡಾ.ಎಚ್.ಸಿ. ಮಹದೇವಪ್ಪ ಅಭಿಮಾನಿ ಬಳಗದಿಂದ ವಿವಿಧ ಕ್ಷೇತ್ರಗಳ 10 ಸಾಧಕರನ್ನು ಸನ್ಮಾನಿಸಲಾಯಿತು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್(ಮಾಧ್ಯಮ), ಮಂಡ್ಯದ ದಸಂಸ ಹಿರಿಯ ಹೋರಾಟಗಾರ ಗುರುಪ್ರಸಾದ್ ಕೆರೆಗೋಡು(ಸಂಘಟನೆ), ಜಯದೇವ ಆಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ.ಪಶುಪತಿ(ಆರೋಗ್ಯ), ಸರಗೂರು ತಾ.ಪ್ರಗತಿಪರ ರೈತ ಕೆ.ಜಿ.ಗೋಪಾಲಯ್ಯ, ಆಕಾಶವಾಣಿ ಕಲಾವಿದೆ, ಸೋಬಾನೆ ಗಿರಿಜಮ್ಮ, ಅಂತಾರಾಷ್ಟ್ರೀಯ ಖೋ ಖೋ ಆಟಗಾರ್ತಿ ಕುರುಬೂರಿನ ಬಿ.ಚೈತ್ರಾ, ಮಲಬಾರ್ ಗೋಲ್ಡ್ ದಕ್ಷಿಣ ವಲಯ ಮುಖ್ಯಸ್ಥ ಶರ್ಫುದ್ದೀನ್, ವಾಸ್ತುಶಿಲ್ಪ ಕಲಾವಿದ ಬನ್ನೂರಿನ ರಮೇಶ್ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹನೂರು ತಾ.ಗೆ ಪ್ರಥಮ ಸ್ಥಾನ ಗಳಿಸಿದ ಆರ್.ಸಂಜನಾ ಸನ್ಮಾನಿತರು.**

## ಮೊದಲ ಪುಟದಿಂದ

### ಪತ್ರಕರ್ತ ಕೆ.ವಿ.ಶ್ರೀನಿವಾಸನ್ ನಿಧನ

1962ರಲ್ಲಿ ಹುಣಸೂರು ಮುನಿಸಿಪಲ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದರು. ಬಳಿಕ ಮಹಾರಾಜ ಕಾಲೇಜಿನಲ್ಲಿ ಬಿಎ ಪದವಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ 1975-77ರಲ್ಲಿ ಪತ್ರಿಕೋದ್ಯಮದಲ್ಲಿ ಎಂ.ಎ ಪದವಿ ಪೂರೈಸಿದ್ದಾರೆ. 1972-75ರಲ್ಲಿ ಶಾರದಾ ವಿಲಾಸ ಕಾಲೇಜಿನಲ್ಲಿ ಎಲ್ ಎಲ್ ಬಿ ಪೂರೈಸಿದ್ದಾರೆ.

ಮೈಸೂರು ವಿವಿಯಲ್ಲಿ ಭಾರತೀಯ ತತ್ವಶಾಸ್ತ್ರ ಮತ್ತು ಪಾಶ್ಚಿಮಾತ್ಯ ತತ್ವಶಾಸ್ತ್ರಗಳಲ್ಲಿ ಸರ್ಟಿಫಿಕೇಟ್ ಕೋರ್ಸ್, 1980ರಲ್ಲಿ ಪತ್ರಿಕೋದ್ಯಮಿಯಾಗಿ, ಸಹ-ಬರಹಗಾರ ಜಾಹೀರಾತು 1986 (ಕನ್ನಡ) ಎಂಬ ಎರಡು ಪುಸ್ತಕಗಳು ಪ್ರಕಟಗೊಂಡಿವೆ. ಮಹಾತ್ಮ ಗಾಂಧೀಜಿ ಜನ್ಮ ಶತಾಬ್ದಿ ಅಂಗವಾಗಿ 1969ರಲ್ಲಿ ಮಹಾರಾಷ್ಟ್ರ ರಾಜ್ಯದ ಸೇವಾಗ್ರಾಮದಲ್ಲಿ ನಡೆದ ಪ್ರಥಮ ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.) ಶಿಬಿರದಲ್ಲಿ ಪಾಲ್ಗೊಂಡಿದ್ದರು. 1975-77 ರಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣ್) ಚಳುವಳಿಯಲ್ಲಿ ಭಾಗವಹಿಸಿದ್ದರು. 1975-77ರಲ್ಲಿ ವಿದ್ಯಾರ್ಥಿ ದಿಸೆಯಲ್ಲೇ ಪ್ರಾಯೋಗಿಕ ಲ್ಯಾಬ್ ಜರ್ನಲ್ ಪ್ರಾರಂಭ, ನವಧ್ವನಿ ಕನ್ನಡ ವಾರಪತ್ರಿಕೆ ಸ್ಥಾಪಕ ಸಂಪಾದಕರಾಗಿದ್ದರು. ಬಳಿಕ ಸಂಕ್ರಾಂತಿ ಪತ್ರಿಕೆ ಸಹಾಯಕ ಸಂಪಾದಕ ಮತ್ತು ಪ್ರಧಾನ ವರದಿಗಾರರಾಗಿದ್ದರು. ಬಳಿಕ ವರ್ತಮಾನ್ ಪತ್ರಿಕೆ ಉಪ ಸಂಪಾದಕ, ಅಶೋಕ ಪತ್ರಿಕೆ ಉಪ ಸಂಪಾದಕ ಹಾಗೂ ವರದಿಗಾರ, ಮಹಾನಂದಿ ಪತ್ರಿಕೆಯ ಸಹಾಯಕ ಸಂಪಾದಕ, ವಿಜಯಕನ್ನಡ ಉಪ ಸಂಪಾದಕ, ಆಕಾಶವಾಣಿ ಅರೆಕಾಲಿಕ ವರದಿಗಾರ, 2004ರವರೆಗೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪತ್ರಿಕೋದ್ಯಮ ಕ್ಷೇತ್ರದಲ್ಲಿ ತಮ್ಮದೇ ಆದ ಸಾಧನೆ ಮಾಡಿದ್ದರು. ಬೆಂಗಳೂರಿನಲ್ಲಿ 1993 ರಲ್ಲಿ ನಡೆದ ದಕ್ಷಿಣ ಭಾರತದ ಆಕಾಶವಾಣಿ ವರದಿಗಾರರ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದೇನೆ. 2001ರಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ, 2003ರಲ್ಲಿ ಹಿರಿಯ ಪತ್ರಕರ್ತ ಪ್ರಶಸ್ತಿ, 2007ರಲ್ಲಿ ಶ್ರೀ ಎಂ. ವೆಂಕಟಕೃಷ್ಣಯ್ಯ (ತಾತಯ್ಯ) ಪ್ರಶಸ್ತಿ, ಬಳಿಕ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ, ಪಿರಿಯಾಪಟ್ಟಣದಲ್ಲಿ 2010 ರಲ್ಲಿ ನಡೆದ 10ನೇ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಪ್ರಶಸ್ತಿ ಪತ್ರ' ನೀಡಿ ಗೌರವಿಸಲಾಗಿದೆ. ಜೆಎಸ್ ಎಸ್ ಮಹಾವಿದ್ಯಾಪೀಠದಿಂದ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ2014 ಸಹ ಲಭಿಸಿದೆ.

### ಯತೀಂದ್ರ ನಮ್ಮ ಹೈಕಮಾಂಡ್: ಡಿ.ಕೆ.ಶಿವಕುಮಾರ್ ತಿರುಗೇಟು

ಸಿದ್ದರಾಮಯ್ಯ ಪುತ್ರ ಯತೀಂದ್ರ ಅವರ ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್ ಅವರು, ಯತೀಂದ್ರ ಮಾತಿಗೆ ಪ್ರತಿಕ್ರಿಯಿಸಲು ಇಷ್ಟವಿಲ್ಲ. ಏನು ಹೇಳಬೇಕೋ ಅದನ್ನು ದೆಹಲಿಯಲ್ಲಿ ಹೇಳುತ್ತೇನೆ ಎಂದು ಮಾರ್ಮಿಕವಾಗಿ ಮಾತನಾಡಿದರು.

ನಾನು ಕೆಪಿಸಿಸಿ ಅಧ್ಯಕ್ಷನಾಗಿ ಮಾರ್ಚ್ 10ಕ್ಕೆ 6 ವರ್ಷ ತುಂಬುತ್ತದೆ. ಆ ಸಂದರ್ಭದಲ್ಲಿ ರಾಜ್ಯದಲ್ಲಿ 100 ಕಚೇರಿಗಳಿಗೆ ಭೂಮಿಪೂಜೆ ಮಾಡಲು ನಿರ್ದೇಶನ ನೀಡಲಾಗಿದೆ. ಇದಕ್ಕೆ ಎಐಸಿಸಿ ಒಪ್ಪಲಿ, ಬಿಡಲಿ. ನಾನಂತೂ ಸಿದ್ಧನಿದ್ದೇನೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಪುತ್ತೂರು ಕಾಂಗ್ರೆಸ್ ಕಚೇರಿ ಶಿಲಾನ್ಯಾಸದ ಆಹ್ವಾನ ಪತ್ರಿಕೆಯಲ್ಲಿ ಮುಸ್ಲಿಂ ಮುಖಂಡರ ಹೆಸರು ಕೈಬಿಡಲಾಗಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಜಾತಿ ಮೇಲಲ್ಲ, ನೀತಿ ಮೇಲೆ ರಾಜಕಾರಣ ಮಾಡುವುದು. ನಮಗೆ ಎಲ್ಲ ಜಾತಿ, ಧರ್ಮದವರೂ ಬೇಕು. ಅಸೂಯೆ ಇರುವವರು ಇಲ್ಲಸಲ್ಲದ ಆರೋಪ ಮಾಡುತ್ತಾರೆ. ಜಾಗ ಸಿಕ್ಕಿದರೆ ಕಚೇರಿಗಳನ್ನು ಯಾರು ಬೇಕಾದರೂ ಕಟ್ಟಿಕೊಳ್ಳಲಿ ಎಂದರು.

### ಡ್ರಗ್ಸ್ ಫ್ಯಾಕ್ಟರಿ ಪತ್ತೆ ವೈಫಲ್ಯ: 11 ಮಂದಿ ಪೊಲೀಸರ ಎತ್ತಂಗಡಿ

ತಯಾರಿಕಾ ಘಟಕ, ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಡ್ರಗ್ಸ್ ಪ್ರಯೋಗಾಲಯ ಪತ್ತೆಯಾಗಿತ್ತು. ಇದರಿಂದಾಗಿ ನಗರ ಪೊಲೀಸರ ಕಾರ್ಯಕ್ಷಮತೆ ಬಗ್ಗೆ ಸಾರ್ವಜನಿಕ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಸಿಸಿಬಿ ವಿಭಾಗದೊಳಗೆ ಕಾರ್ಯಕ್ಷಮತೆ ಹೆಚ್ಚಿಸುವುದು, ಡ್ರಗ್ ವಿರುದ್ಧ ವಿಶೇಷ ದಾಳಿ ಬಲಪಡಿಸುವುದು ಮತ್ತು ಅಪರಾಧ ನಿಯಂತ್ರಣಕ್ಕೆ ಹೊಸ ತಂಡಗಳನ್ನು ನಿಯೋಜಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

### ರೆಪೋ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಆರ್‌ಬಿಐ ಸಮಿತಿ

ಪರಿಷ್ಕರಿಸಲಾಗಿದೆ ಎಂದು ಅವರು ಹೇಳಿದರು. ಡಿಸೆಂಬರ್‌ನಲ್ಲಿ ನಡೆದ ಎಂಸಿಸಿ ಸಭೆಯಲ್ಲಿ ಆರ್‌ಬಿಐ 25 ಬೇಸಿಸ್ ಪಾಯಿಂಟ್ ಕಡಿತಗೊಳಿಸಿದ್ದರಿಂದ ರೆಪೋ ಬಡ್ಡಿ ದರ 5.50ರಿಂದ 5.25ಕ್ಕೆ ಇಳಿಕೆಯಾಗಿತ್ತು. ಈಗ ಅದನ್ನು ಮುಂದುವರಿಸಲಾಗಿದೆ.

ರೆಪೋ ದರ: ವಾಣಿಜ್ಯ ಬ್ಯಾಂಕ್‌ಗಳ ರಿಸರ್ವ್ ಬ್ಯಾಂಕ್‌ನಿಂದ ಪಡೆಯುವ ಅಲ್ಪಾವಧಿ ಸಾಲದ ಮೇಲಿನ ಬಡ್ಡಿ ದರಕ್ಕೆ ರೆಪೋ ದರ ಎನ್ನುತ್ತಾರೆ. ರೆಪೋ ದರ ಕಡಿಮೆಯಾದರೆ ಬ್ಯಾಂಕ್‌ಗಳು ಕಡಿಮೆ ಬಡ್ಡಿ ದರದಲ್ಲಿ ಹೆಚ್ಚಿನ ಹಣವನ್ನು ಪಡೆಯಬಹುದು. ಬ್ಯಾಂಕ್‌ಗಳು ತಮ್ಮಲ್ಲಿ ಹಣದ ಕೊರತೆಯಾದಾಗ ಆರ್‌ಬಿಐನಿಂದ ಹಣ ಪಡೆಯುತ್ತಿರುತ್ತವೆ. ರೆಪೋ ರೇಟ್ ಜಾಸ್ತಿ ಇದ್ದರೆ ಬ್ಯಾಂಕ್‌ಗಳು ಸಾಲದ ಮೇಲಿನ ಬಡ್ಡಿ ದರವನ್ನು ಏರಿಕೆ ಮಾಡುತ್ತದೆ. ಇದರಿಂದ ವಾಹನ ಸಾಲ, ಗೃಹ ಸಾಲ, ಇತ್ಯಾದಿ ಸಾಲಗಳ ಬಡ್ಡಿ ದರ ಏರುತ್ತದೆ.

ವಾಣಿಜ್ಯ ಬ್ಯಾಂಕುಗಳು ಆರ್‌ಬಿಐನಲ್ಲಿ ಇಡುವ ಠೇವಣಿಗಳ ಮೇಲೆ ಪಡೆಯುವ ಬಡ್ಡಿ ದರವೇ ರಿವರ್ಸ್ ರೆಪೋ ದರ. ಆರ್‌ಬಿಐನಲ್ಲಿ ಠೇವಣಿ ಇಡುವುದು ಬ್ಯಾಂಕುಗಳಿಗೆ ಸುರಕ್ಷಿತ. ರಿವರ್ಸ್ ರೆಪೋ ದರ ಹೆಚ್ಚಾದಾಗ ಬ್ಯಾಂಕುಗಳು ಹೆಚ್ಚಿನ ಮೊತ್ತವನ್ನು ಆರ್‌ಬಿಐಗೆ ವರ್ಗಾಯಿಸುತ್ತದೆ.

### ಚಿನ್ನಾಭರಣ ಕಳವು

ಅಬುದಾಬಿಯಲ್ಲಿ ಲಗೇಜ್ ಬ್ಯಾಗ್ ಕಲೆಕ್ಟ್ ಮಾಡಿಕೊಂಡಾಗ ಬ್ಯಾಗಿನಲ್ಲಿ ಒಡವೆಗಳು ಇಲ್ಲದಿರುವುದು ಕಂಡುಬಂದಿದೆ.

ಹೀಗಾಗಿ ಬೆಂಗಳೂರಿಗೆ ವಾಪಸ್ ಆಗಿರುವ ಮಹಿಳೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪೊಲೀಸ್ ಠಾಣೆಯಲ್ಲಿ ಚಿನ್ನಾಭರಣ ಕಳುವಾಗಿರುವ ಬಗ್ಗೆ ದೂರು ದಾಖಲಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

# ಉದ್ಯಮ ಯಶಸ್ವಿಗೆ ಪ್ರಾದೇಶಿಕ ಭೌಗೋಳಿಕ ಅರಿವು ಮುಖ್ಯ: ಸವಿತಾ

## ಆರೋಹಣ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಮೈವಿವಿ ಕುಲಸಚಿವೆ ಅಭಿಪ್ರಾಯ

ಮೈಸೂರು: ಉದ್ಯಮ ಕ್ಷೇತ್ರದಲ್ಲಿ ಯಶಸ್ವಿಯಾಗಬೇಕಾದರೇ ಪ್ರಾದೇಶಿಕತೆಯ ಭೋಗೋಳಿಕ, ಆರ್ಥಿಕ, ಸಾಮಾಜಿಕ ಕ್ಷೇತ್ರದ ಅರಿವು ಬಹಳ ಅವಶ್ಯವಾಗಿರುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಅಭಿಪ್ರಾಯಪಟ್ಟರು.

ನಗರದ ಸರಸ್ವತಿ ಪುರಂನಲ್ಲಿ ಇರುವ ಜೆಎಸ್ ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶುಕ್ರವಾರ ಕಾಲೇಜಿನ ವಾಣಿಜ್ಯ ಶಾಸ್ತ್ರ ಮತ್ತು ನಿರ್ವಹಣಾ ವಿಭಾಗದಿಂದ ಆಯೋಜಿಸಿರುವ ಆರೋಹಣ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಯಾವುದಾದರೊಂದು ಉದ್ಯಮವನ್ನು ಸ್ಥಾಪನೆ ಮಾಡಲು ಹೊರಡುವ ನವೋದ್ಯಮಿಗಳಿಗೆ, ಯುವ ಸಮೂಹಕ್ಕೆ, ತಾವು ಆಯ್ಕೆ ಮಾಡಿಕೊಂಡಿರುವ ಕ್ಷೇತ್ರದ ಆಳ-ಆರಿವನ್ನು ಪ್ರಾಥಮಿಕವಾಗಿ ತಿಳಿದುಕೊಂಡಿರಲೇ ಬೇಕು. ಉದ್ಯಮದ ಹಿತಾಸಕ್ತಿಗಳು ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗಿರುತ್ತದೆ. ಮಂಡ್ಯದಲ್ಲಿ ಕಬ್ಬನ್ನು ಅತಿ ಹೆಚ್ಚಾಗಿ ಬೆಳೆಯುತ್ತಾರೆ. ಉದ್ಯಮಿಗಳು ಕಬ್ಬಿನ ಉತ್ಪಾದನೆಗಳನ್ನು ತಯಾರು ಮಾಡುವ ಉದ್ಯಮಗಳನ್ನು ಸ್ಥಾಪನೆ ಮಾಡಬೇಕೇ ಹೊರತು. ಅಲ್ಲಿ ಕಬ್ಬಿಣ ಕಾರ್ಖಾನೆ, ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಿದರೇ ಯಶಸ್ಸು ಕಾಣುವುದಿಲ್ಲ. ಇದರೊಂದಿಗೆ ಸ್ಥಳೀಯ ಹವಾಮಾನ, ಮಣ್ಣಿನ ಮಾದರಿ, ಪ್ರಕೃತಿಯ ರಚನೆಗಳು ಕೂಡಾ ಉದ್ಯಮಕ್ಕೆ ಪೂರಕವಾಗಿ ಇರಬೇಕಾಗುತ್ತದೆ. ಇವುಗಳನ್ನು ಅತ್ಯಾವಶ್ಯಕವಾಗಿ ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ಸಲಹೆಯನ್ನು ನೀಡಿದರು.




### ಉದ್ಯಮಿಗಳಾಗಲು ಬಯಸುವವರಿಗೆ ಮೊದಲು ಆತ್ಮವಿಶ್ವಾಸ ಬಹಳ ಮುಖ್ಯ

**ಉದ್ಯಮಿಗಳಾಗಲು ಬಯಸುವವರಿಗೆ ಮೊದಲು ಆತ್ಮವಿಶ್ವಾಸ ಬಹಳ ಮುಖ್ಯ. ನಮಗೆ ನಮ್ಮ ಮೇಲೆ ವಿಶ್ವಾಸ ವಿಲ್ಲದೇ ಹೋದರೆ ಜೀವನದಲ್ಲಿ ಯಾವುದನ್ನು ಸಾಧಿಸಲು ಆಗುವುದೇ ಇಲ್ಲ. ನಮ್ಮ ಬಳಿ ನೂರಾರು ಕೋಟಿ ಹಣವಿರಬಹುದು. ಅಷ್ಟೇ ಪ್ರಮಾಣದ ಆಸ್ತಿ ಇರಬಹುದು. ಆದರೆ ನಮಗೆ ನಾವು ಯಶಸ್ವಿಯಾಗುತ್ತೇವೆ ಎನ್ನುವ ಆತ್ಮವಿಶ್ವಾಸವಿಲ್ಲದೇ ಹೋದರೆ ಬೆಳವಣಿಗೆಯಲ್ಲಿ ಹಿಂದೆ ಬೀಳಬೇಕಾಗುತ್ತದೆ. ಸಾಧನೆಯಲ್ಲಿ ತಳ ಸೇರಬೇಕಾಗುತ್ತದೆ. ಆತ್ಮವಿಶ್ವಾಸ ಹಾಗೂ ಧೈರ್ಯವನ್ನು ಕಳೆದುಕೊಂಡ ಅನೇಕ ಉದ್ಯಮಿಗಳು ಏನಾದರೂ ಎನ್ನುವ ವಿಚಾರ ಇತ್ತೀಚಿನ ವರ್ಷ ಹಾಗೂ ಕೆಳ ದಿನಗಳ ಹಿಂದೆಯೇ ನಮಗೆಲ್ಲರಿಗೂ ತಿಳಿದಿದೆ. ಆದ್ದರಿಂದ ಉದ್ಯಮಿಗಳಾಗುವವರು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ಅಂತಿಮ ಕ್ಷಣದ ವರೆಗೂ ಆಶಯ, ಭರವಸೆಯನ್ನು ಹೊಂದಿರಬೇಕು. ಆಗ ಮಾತ್ರ ಯಾವುದಾರೂ ಕಡೆಯಿಂದ ಸಣ್ಣದೊಂದು ಬೆಳಕು ಕಾಣಿಸಿಕೊಂಡು ಮಾರ್ಗದರ್ಶನ ಮಾಡುತ್ತದೆ ಎಂದರು.**

ನವೋದ್ಯಮಿಗಳು ಸ್ಟಾರ್ಟ ಅಪ್ ಶುರು ಮಾಡುವವರು ತಾವು ಉದ್ಯಮ ಶುರು ಮಾಡುವ ಸ್ಥಳವನ್ನು ಕುಲಂಕಷವಾಗಿ ಅಧ್ಯಯನ ಮಾಡಬೇಕು. ರಾಜಧಾನಿ ಬೆಂಗಳೂರಿನಲ್ಲಿ ಆಹರ್ನಿಶಿ ವ್ಯಾಪಾರಿ ಚಟುವಟಿಕೆ ಇರುತ್ತದೆ. ಅಲ್ಲಿ ಅದಕ್ಕೆ ತಕ್ಕನಾಗಿ ಉದ್ಯಮಗಳನ್ನು ರೂಪಿಸಬಹುದು. ಆದರೆ ಬೆಂಗಳೂರಿನ ಮಾದರಿಯನ್ನು ಮೈಸೂರಿನಲ್ಲಿ ಅನುಷ್ಠಾನ ಮಾಡಲು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ರಾತ್ರಿ ಹತ್ತು ಗಂಟೆಯಾಗುವ ಹೊತ್ತಿಗೆ ವ್ಯಾಪಾರಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತವೆ. ಆದ್ದರಿಂದ ಇಂತಹ ವಿಚಾರಗಳ ಕಡೆಯೂ ಗಮನ ಹರಿಸುವುದು ಅಗತ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ವಹಿಸಿದ್ದರು.ಎಸ್‌ಬಿಐ ನ ಎಜಿಎಂ ಬಿ.ವಿ.ವಿಶ್ವಾಸ್, ಕಾಲೇಜಿನ ಪ್ರಾಂಶುಪಾಲ ಡಾ.ರೇಚಣ್ಣ, ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ವಿ.ಗಂಗಧಾರ ಸ್ವಾಮಿ ವೇದಿಕೆಯಲ್ಲಿ ಇದ್ದರು.

### ಉದ್ಯೋಗಕ್ಕಾಗಿ ವಿದ್ಯಾಭ್ಯಾಸ ಮಾಡದಿರಿ


**ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಕೆ. ಹರೀಶ ಗೌಡ, ಉದ್ಯೋಗ ದೊರೆಯುತ್ತದೆ ಎಂದುಕೊಂಡು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಬಾರದು. ಬದಲಿಗೆ ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಶಿಕ್ಷಣ ಅತಿ ಅಗತ್ಯ ಎನ್ನುವ ಅಂಶವನ್ನು ಮನದಟ್ಟು ಮಾಡಿಕೊಳ್ಳಬೇಕು ಎಂದು ತಿಳಿಸಿದರು.**

ಉಗ್ರ ನರಸಿಂಹೇಗೌಡ ಹೇಳಿಕೆ

# ಬಡವರಿಗೆ ಮಾರಕವಾದ ಬೃಹತ್ ಮೈಸೂರು ಬೇಡ

ಮೈಸೂರು: ಸರ್ಕಾರ ಬೃಹತ್ ಮೈಸೂರು ಮಹಾ ನಗರ ಪಾಲಿಕೆ ರಚನೆಗೆ ಮುಂದಾಗಿದೆ. ಆದರೆ ಈಗಲೇ ನಗರದ ಬಡಾವಣೆಗಳಿಗೆ ಶುದ್ಧ ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಸೌಲಭ್ಯ ಒದಗಿಸಲು ಪಾಲಿಕೆಗೆ ಸಾಧ್ಯವಾಗಿಲ್ಲ. ಹೀಗಾಗಿ ಒಂದು ವೇಳೆ ಬೃಹತ್ ಮೈಸೂರು ಪಾಲಿಕೆ ರಚನೆಯಾದರೆ ಅದು ನಗರಕ್ಕೆ ಮಾರಕವಾಗಲಿದೆ ಎಂದು ಜನಾಂದೋಲನ ಮಹಾ ಮೈತ್ರಿ ಸಂಚಾಲಕ ಉಗ್ರ ನರಸಿಂಹೇಗೌಡ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೃಹತ್ ಮೈಸೂರು ರಚನೆಗೆ ಸಂಬಂಧಿಸಿದಂತೆ ಆಕ್ಷೇಪಣೆ ಆಹ್ವಾನಿಸಲಾಗಿದೆ. ಆದರೆ ಈ ವಿಷಯದಲ್ಲಿ ಭೂ ಮಾಫಿಯಾ ಲಾಬಿ ನಡೆದಿದೆ ಎಂಬ ಶಂಕೆಯಿದೆ. ರಾಜಕಾರಣಿಗಳು ಸಹಾ ಸುಮ್ಮನಿರಲು ಕಾರಣ ಅವರೂ ಸಹಾ ಇದರಲ್ಲಿ ಶಾಮೀಲಾಗಿರಬಹುದಾಗಿದೆ. ಆದ್ದರಿಂದ ಎಲ್ಲರೂ ಸುಮ್ಮನಿದ್ದಾರೆಂದು ಆರೋಪಿಸಿದರು. ಈಗಲೇ ಮೈಸೂರು 87 ಚದುರ ಕಿಲೋ ಮೀಟರ್ ಇದೆ.




ಇದನ್ನು 341 ಚದುರ ಕಿಮೀಗೆ ವಿಸ್ತರಿಸಿ ಬೃಹತ್ ಪಾಲಿಕೆ ರಚಿಸಲು ಯೋಜಿಸಲಾಗಿದೆ. ಈ ಹಿಂದೆಯೇ 2030 ರ ವೇಳೆಗೆ ಮೈಸೂರು ಹೇಗಿರಬೇಕೆಂಬ ಯೋಜನೆ ಇತ್ತು. ಅದನ್ನು ಬದಿಗಿರಿಸಿ ಈಗ ಬೃಹತ್ ಮೈಸೂರು ಪಾಲಿಕೆ ರಚನೆಗೆ ಮುಂದಾಗಿದ್ದಾರೆ. ಇವರೇನು ವ್ಯವಸ್ಥಿತ ಮೈಸೂರು ರಚನೆಗೆ ಕಾರಣರಾದ ನಾಲ್ವಡಿ ಅವರಿಗಿಂತ ಮೇಧಾವಿಗಳೇನು ಎಂದು ಪ್ರಶ್ನಿಸಿದರು.

ಎಂಡಿಎನಲ್ಲಿ ಬಹಳಷ್ಟು ಮಂದಿ ಅಧಿಕಾರಿಗಳು ಹಲವಾರು ವರ್ಷಗಳಿಂದ ಅಲ್ಲಿಯೇ ತಳವೂರಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಇದೇ ವೇಳೆ ರಾಜ್ಯ ಸರ್ಕಾರ ಸರ್ಕಾರಿ ಶಾಲೆಗಳನ್ನ ಮುಚ್ಚಿ ಮ್ಯಾಗ್ನೆಟ್ ಹೆಸರಿನಲ್ಲಿ ಕೆಪಿಎಸ್ ಶಾಲೆ ತೆರೆಯಲು ಮುಂದಾಗಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ಗೆ ಸುಮಾರು 2500 ಕೋಟಿ ಸಾಲಕ್ಕೆ ಕೈಚಾಚಿದೆ. ಮೈಸೂರು ಮಹಾ ನಗರ ಪಾಲಿಕೆಯಲ್ಲಿಯೂ ಹಣವಿಲ್ಲ. ಹೀಗಾಗಿ ಸುಮಾರು 5 ಸಾವಿರ ಕೋಟಿ ರೂ. ಬೇಡುವ ಬೃಹತ್ ಮಹಾ ನಗರ ಪಾಲಿಕೆ ರಚನೆ ಮಾಡಿದಲ್ಲಿ ನಿರ್ವಹಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಮೈಸೂರಿನ ಶಾಸಕರೊಬ್ಬರು ತಮ್ಮ ವ್ಯಾಪ್ತಿಯಲ್ಲಿ ಕೃಷಿ ಭೂಮಿಯ ಅಚ್ಚುಕಟ್ಟು ಇಲ್ಲದ ಕಟ್ಟೆಯೊಂದಕ್ಕೆ ಕಾವೇರಿ ನದಿಯಿಂದ ನೀರು ತುಂಬಿಸಲು 50 ಕೋಟಿ ಮಂಜೂರು ಮಾಡಿಸಿಕೊಂಡಿದ್ದಾರೆ. ಇವರು ತಮಗೆ ಮತ ನೀಡಿದ ರೈತರಿಂದ ಅತಿ ಕಡಿಮೆ ಬೆಲೆಗೆ ಭೂಮಿ ಖರೀದಿಸಿ ಅಧಿಕ ಬೆಲೆಗೆ ಮಾರಿಕೊಂಡ ವಂಚಕರಾಗಿದ್ದಾರೆ. ಇಂತಹವರೆಲ್ಲ ಬೃಹತ್ ಮೈಸೂರು ಪಾಲಿಕೆ ರಚನೆ ಹಿಂದಿದ್ದಾರೆ. ಈಗಿನ ಪಾಲಿಕೆ ವ್ಯಾಪ್ತಿಯ ಕೆರೆ ಕಟ್ಟೆ ಸಂರಕ್ಷಣೆಯೇ ಆಗಿಲ್ಲ, ಕುಡಿಯಲು ಯೋಗ್ಯವಾದ, ಜೀವಪರ ನದಿ ಮೂಲಕ ನೀರು ನೀಡುತ್ತಿಲ್ಲ. ಹೀಗಿರುವಾಗ ಬೃಹತ ಮೈಸೂರು ಮಹಾ ನಗರ ಪಾಲಿಕೆ ರಚನೆ ಮೂಲಕ ಮೈಸೂರನ್ನು ರೋಗಗ್ರಸ್ಥ ಮಾಡಲು ಹೊರಟಿದ್ದಾರೆ. ನಮಗೆ ಸುಂದರವಾದ, ಜೀವಿಸಲು ಯೋಗ್ಯವಾದ ರೀತಿ ಮೈಸೂರು ಇರಬೇಕು. ಈ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಿ ಬೃಹತ್ ಮೈಸೂರು ಮಹಾ ನಗರ ಪಾಲಿಕೆ ರಚನೆ ನಿರ್ಧಾರ ಕೈಬಿಡಬೇಕೆಂದು ಆಗ್ರಹಿಸಿದರು. ಇನ್ನಿತರ ಪದಾಧಿಕಾರಿಗಳಾದ ಚಂದ್ರಶೇಖರ ಮೇಟಿ, ಅಭಿರುಚಿ ಗಣೇಶ್ ಹಾಜರಿದ್ದರು.

## ಮೊದಲ ಪುಟದಿಂದ

### ಅರೆಮನಸ್ಸಿನ ಕಲಿಕೆ ಬೇಡ

ನಿಮಗೆ ಮೊಬೈಲ್ ನಲ್ಲಿ ಗೇಮ್ಸ್ ಆಡಲು ಖುಷಿಯಾಗಬಹುದು. ಆದರೆ ಈಗ ಪರೀಕ್ಷಾ ಸಮಯ, ಅಗ್ಗದ ದರದಲ್ಲಿ ಡೇಟಾ ಸಿಗುತ್ತದೆ ಎಂಬ ಕಾರಣಕ್ಕೆ ಸಮಯ ಕಳೆಯಲು ಅದರಲ್ಲಿ ತೊಡಗಿಕೊಳ್ಳಬೇಡಿ. ಮೋಜಿಗಾಗಿ ಅದನ್ನು ಮಾಡಬೇಡಿ ಎಂದು ಮಕ್ಕಳಿಗೆ ತಿಳಿಸಿದರು.

ನಾನು ಪ್ರಧಾನಿಯಾಗಿದ್ದರೂ ಜನರು ನನಗೆ ವಿಭಿನ್ನ ರೀತಿಯಲ್ಲಿ ಕೆಲಸ ಮಾಡಲು ಹೇಳುತ್ತಾರೆ. ಪ್ರತಿಯೊಬ್ಬರೂ ತಮ್ಮದೇ ಆದ ಮಾದರಿಯನ್ನು ಹೊಂದಿದ್ದಾರೆ. ಕೆಲವರು ಬೆಳಗ್ಗೆ, ಕೆಲವರು ರಾತ್ರಿಯಲ್ಲಿ ಉತ್ತಮವಾಗಿ ಅಧ್ಯಯನ ಮಾಡುತ್ತಾರೆ. ನಿಮಗೆ ಯಾವುದು ಸರಿಹೊಂದುತ್ತದೆಯೋ ಅದನ್ನು ನಂಬಿರಿ. ಆದರೆ ಸಲಹೆಯನ್ನು ಸಹ ತೆಗೆದುಕೊಳ್ಳಿ. ಅದು ನಿಮಗೆ ಪ್ರಯೋಜನವನ್ನು ನೀಡಿದರೆ, ಅದನ್ನು ನಿಮ್ಮ ಜೀವನ ರಚನೆಗೆ ಸೇರಿಸಿಕೊಳ್ಳಿ ಎಂದರು.

ಜೀವನ ಕೌಶಲ್ಯ ಮತ್ತು ವೃತ್ತಿಪರ ಕೌಶಲ್ಯಗಳು. ಎರಡೂ ಒಟ್ಟಿಗೆ ಇರುತ್ತವೆ. ಆದ್ದರಿಂದ, ಕೌಶಲ್ಯವು ಜ್ಞಾನದಿಂದ ಪ್ರಾರಂಭವಾಗುತ್ತದೆ. ನಾನು ಹಿಂದಿನದನ್ನು ಎಣಿಸುವುದಿಲ್ಲ. ಮುಂದೆ ಉಳಿದಿರುವ ಸಮಯವನ್ನು ಎಣಿಸುತ್ತೇನೆ. ನಿಮಗೂ ಅದನ್ನೇ ಹೇಳುತ್ತೇನೆ, ಹಿಂದಿನದನ್ನು ಯೋಚಿಸಬೇಡಿ. ನಿಮ್ಮ ಮುಂದೆ ಇರುವುದನ್ನು ಬದುಕಲು ಪ್ರಯತ್ನಿಸಿ ಎಂದು ಮಕ್ಕಳಿಗೆ ತಿಳಿಸಿದರು.

### ಜೂಜಾಟ ಪ್ರೋತ್ಸಾಹಿಸಲ್ಲ

**ಕ್ರಮೇಣ, ನಾನು ಅದನ್ನು ಬದಲಾಯಿಸುತ್ತಿದ್ದೇನೆ. ಈ ಬಾರಿ, ನಾನು ಅದನ್ನು ವಿವಿಧ ರಾಜ್ಯಗಳಲ್ಲಿಯೂ ಮಾಡಿದ್ದೇನೆ. ಆದರೆ ಮೂಲ ಮಾದರಿಯನ್ನು ಕೈಬಿಡಲಿಲ್ಲ. ಬೆಳವಣಿಗೆಗೆ ಪ್ರಮುಖವಾದ ಅಧ್ಯಯನ, ವಿಶ್ರಾಂತಿ, ಕೌಶಲ್ಯ ಮತ್ತು ಹವ್ಯಾಸಗಳನ್ನು ಸಮತೋಲನಗೊಳಿಸಲು ಪ್ರಧಾನ ಮಂತ್ರಿಗಳು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.**

### 'ಸುಪ್ರೀಂ' ಕಳವಳ

ತಮಿಳುನಾಡು, ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಸಂದರ್ಭದಲ್ಲಿ ಈ ಅರ್ಜಿಯ ವಿಚಾರಣೆ ಭಾರೀ ಮಹತ್ವ ಪಡೆದಿದೆ.

### ಜಾಗ ಒತ್ತುವರಿ ತೆರವು

ಅನುಮಾನಗಳಿಗೆ ಕಾರಣವಾಗಿತ್ತು. ಈ ಬಗ್ಗೆ ಮಾಧ್ಯಮಗಳಲ್ಲಿ ವರದಿ ಬಂದ ನಂತರ ಅಕ್ರಮ ತೆರವಿಗೆ ಜಿಲ್ಲಾಧಿಕಾರಿ ಆದೇಶ ನೀಡಿದ್ದರು. ಜಿಲ್ಲಾಧಿಕಾರಿ ಆದೇಶದ ನಂತರ ತಹಸೀಲ್ದಾರ್ ಮಹೇಶ್ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರಾಘವೇಂದ್ರ ಅವರು ಪೊಲೀಸರ ಬಂದೋಬಸ್ತ್ ನಲ್ಲಿ ತೆರವು ಕಾರ್ಯಾಚರಣೆ ನಡೆಸಿದರು. ಜೆಸಿಬಿ ಬಳಸಿ ಅಕ್ರಮ ನಿರ್ಮಾಣವನ್ನು ತೆರವು ಮಾಡಿದರು. ಆದರೆ, ಒತ್ತುವರಿಯಾಗಿದ್ದ ಜಾಗವನ್ನು ಬೇಲಿ ಹಾಕಿ ಕಾಪಾಡುವರೇ ಎಂಬುದನ್ನು ನೋಡಬೇಕಿದೆ.

### ಮತ್ತೆ ಶುರು 'ಪವರ್ ಪಾಲಿಟಿಕ್ಸ್'

ಆ ನಂತರ ಸೈಟ್ ವಾಪಸ್ ಪಡೆಯುವ ಬಗ್ಗೆ ನಮ್ಮ ತಾಯಿ ತೀರ್ಮಾನ ಮಾಡುತ್ತಾರೆ. ಈಗ ಸದ್ಯಕ್ಕಂತು ಆ ವಿಚಾರವನ್ನ ನಾವು ಚರ್ಚೆ ಮಾಡಿಲ್ಲ. ಪ್ರಕರಣದಲ್ಲಿ ಇನ್ನೂ ಕಾನೂನು ಪ್ರಕ್ರಿಯೆಗಳು ಬಾಕಿ ಇವೆ. ಮೊದಲು ಅವೆಲ್ಲಾ ಮುಗಿಯಲಿ. ಸದ್ಯಕ್ಕೆ ನಮ್ಮ ತಾಯಿಗೆ ಈ ಪ್ರಕರಣದಿಂದ ಕ್ಲೀನ್‌ಚಿಟ್ ಸಿಕ್ಕಿರುವುದು ಸಂತೋಷ ತಂದಿದೆ ಎಂದು ಹೇಳಿದರು. ಎಲ್ಲಾ ಚುನಾವಣೆಗಳಲ್ಲೂ ಇವಿಎಂ ರದ್ದಾಗಬೇಕು. ಬ್ಯಾಲೆಟ್ ಪೇಪರ್ ಬಳಕೆ ಮತ್ತೆ ಬರಬೇಕು. ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಬ್ಯಾಲೆಟ್ ಪೇಪರ್ ಬಳಸಲು ನಿರ್ಧರಿಸಲಾಗಿದೆ. ಇದೇ ರೀತಿ ಎಲ್ಲಾ ವಿಧಾನಸಭೆ ಚುನಾವಣೆಗಳಲ್ಲೂ ಬ್ಯಾಲೆಟ್ ಪೇಪರ್ ಬಳಕೆಯಾಗಬೇಕು. ಇವಿಎಂ ಮತಯಂತ್ರದಲ್ಲಿ ಸಾಕಷ್ಟು ದೋಷಗಳಿವೆ. ಇವಿಎಂ ಅನ್ನು ಹ್ಯಾಕ್ ಮಾಡಬಹುದು. ದೋಷಪೂರಿತ ವ್ಯವಸ್ಥೆ ಇದ್ದ ಮೇಲೆ ಅದನ್ನ ಯಾಕೆ ಇಟ್ಟುಕೊಳ್ಳಬೇಕು. ಮೊದಲಿನ ರೀತಿ ಈಗ ಬ್ಯಾಲೆಟ್ ಬಾಕ್ಸ್‌ಗಳನ್ನು ಕಳ್ಳತನ ಮಾಡಲು ಆಗಲ್ಲ. ನಮ್ಮ ವ್ಯವಸ್ಥೆ ಬಹಳ ಬಿಗಿ ಇದೆ. ಹೀಗಾಗಿ, ತಾಂತ್ರಿಕ ಕಳ್ಳತನ ಮಾಡಲು ಇವಿಎಂನಲ್ಲಿ ಸಾಧ್ಯವಿದೆ. ಈ ಎಲ್ಲ ಕಾರಣದಿಂದ ಇವಿಎಂ ರದ್ದಾಗಬೇಕು ಎಂದು ಆಗ್ರಹಿಸಿದರು.

### ಓಂಬಿರ್ಲಾ ಅಸಮಾಧಾನ

ಗದ್ದಲಗಳಿಂದ 19 ಗಂಟೆ 13 ನಿಮಿಷಗಳು ವ್ಯರ್ಥವಾಗಿವೆ ಎಂದು ಸ್ಪೀಕರ್ ಸದನಕ್ಕೆ ತಿಳಿಸಿದ್ದಾರೆ. ಸದಸ್ಯರು ಸದನವನ್ನು ಅಗೌರವಿಸುತ್ತಿದ್ದಾರೆ ಎಂದು ಹೇಳಿದರು. ಇಂದೂ ಸಹ ಸದನದ ಆರಂಭವಾದ ಬಳಿಕ ಗದ್ದಲ ಸೃಷ್ಟಿಯಾಯಿತು. ಜನರು ತಮ್ಮ ಸಮಸ್ಯೆಗಳಿಗೆ ಲೋಕಸಭೆಯಲ್ಲಿ ಧ್ವನಿಯಾಗಲು ಸಂಸದರಾಗಿ ಆಯ್ಕೆ ಮಾಡುತ್ತಾರೆ. ಈ ರೀತಿ ಗದ್ದಲ ಸೃಷ್ಟಿಸಿ ಸದನದ ಕಾಲಹರಣ ಮಾಡಲು ಅಲ್ಲ ಎಂದು ಬಿರ್ಲಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಬಿಜೆಪಿಯಿಂದ ಗಾಂಧಿವಾದ ಹತ್ಯೆ

ಮೈಸೂರು: ಅಂದು ಗೋಡ್ಸೆಯಿಂದ ಗಾಂಧಿಯನ್ನ ಹತ್ಯೆ ಮಾಡಲಾಯಿತು. ಇಂದು ಈ ಬಿಜೆಪಿಯವರು ಗಾಂಧಿಯ ಸಿದ್ಧಾಂತ, ಆದರ್ಶಗಳನ್ನ ಹತ್ಯೆ ಮಾಡುತ್ತಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬ ಸಂಘದ ಮಾಜಿ ಅಧ್ಯಕ್ಷ ಬಿ. ಸುಬ್ರಹ್ಮಣ್ಯ ಕಿಡಿ ಕಾರಿದರು.



ಮಹಾತ್ಮರನ್ನೇ ಬಂಡವಾಳ ಮಾಡಿಕೊಂಡ ನುಂಗಪ್ಪ ಗಳು ಎಂಬ ಜಾಹೀರಾತು ಸಂಬಂಧ ಮಾತನಾಡಿದ ಅವರು, ಅಂದು ಗೋಡ್ಸೆಯಿಂದ ಗಾಂಧಿಯ ಹತ್ಯೆ ನಡೆಯಿತು. ಇಂದು ಬಿಜೆಪಿಯಿಂದ ಮಹಾತ್ಮರ ಸಿದ್ಧಾಂತ, ಆದರ್ಶ ಹಾಗೂ ಗಾಂಧಿ ವಾದದ ಹತ್ಯೆ ನಡೆಯುತ್ತಿದೆ. ಹಾಗಾಗಿ ಬಿಜೆಪಿಯಿಂದ ಗಾಂಧಿಯ ತತ್ವಾದರ್ಶನಗಳನ್ನ ನಾವಿಂದು ರಕ್ಷಿಸಬೇಕಿದೆ. ಇಡೀ ವಿಶ್ವಕ್ಕೆ ಅಹಿಂಸೆ ಸಂದೇಶ ಸಾರಿದವರು ಗಾಂಧಿ. ಅಹಿಂಸೆಯಿಂದ ಎಂತಹ ಕಾರ್ಯವನ್ನ ಬೇಕಾದ್ರೂ ಸಾಧಿಸಬಹುದು ಅಂತ ತೋರಿಸಿಕೊಟ್ಟವರು ಗಾಂಧಿ. ಅಂಹಿಸಾ ಮಾರ್ಗದಿಂದಲೇ ಬ್ರಿಟಿಷರ ವಿರುದ್ಧ ಹೋರಾಡಿ ಸ್ವಾತಂತ್ರ್ಯ ತಂದುಕೊಟ್ಟವರು ಗಾಂಧಿ. ಹಾಗಾಗಿಯೇ ಅವರು ಮಹಾತ್ಮರಾಗಿದ್ದಾರೆ. ಗಾಂಧೀಜಿ ಅವರು ಎಂದಿಗೂ ತಮ್ಮ ಕೈಯಲ್ಲಿದ್ದ ಕೋಲನ್ನು ಯಾರ ಮೇಲೆ ಹಲ್ಲೆ ನಡೆಸೋದಕ್ಕೂ ಬಳಸಿದವರಲ್ಲ. ಸುಳ್ಳಿನ ಮಾರ್ಗ ಅನುಸರಿಸ ಸಲಿಲ್ಲ. ಆದ್ರೆ ಬಿಜೆಪಿ ಲಜ್ಜೆಗೆಟ್ಟ ರಾಜಕಾರಣಕ್ಕಾಗಿ ಗಾಂಧಿ ಅವರ ಆದರ್ಶವನ್ನೇ ಕೊಲ್ಲುವ ಕೆಲಸ ಮಾಡಿದೆ ಎಂದರು. ಮಹಾತ್ಮ ಗಾಂಧಿಯ ಮಹತ್ವ ಅರಿಯದ ಬಿಜೆಪಿ ಮಹಾತ್ಮ ಗಾಂಧಿಯವರನ್ನು ಹಿಂಸೆಯ ಪ್ರತಿಪಾದಕರನ್ನಾಗಿ ತೋರಿಸಿ ಜಾಹೀರಾತು ನೀಡಿದೆ. ಇದು ಮಹಾತ್ಮನಿಗೆ ಮಾಡಿದ ಮತ್ತೊಂದು ಅಪಮಾನ. ಈ ಮೊದಲು ಗಾಂಧಿ ಅವರನ್ನ ದೈಹಿಕವಾಗಿ ಕೊಂದರು. ಈಗ ಸಿದ್ಧಾಂತವನ್ನೂ ಕೊಲ್ಲುವ ಕೆಲಸಕ್ಕಿಳಿದಿದ್ದಾರೆ. ದೇಶಭಕ್ತರು ಇದರ ವಿರುದ್ಧ ಎಚ್ಚೆತ್ತು, ಗಾಂಧಿ ತತ್ವ ಆದರ್ಶಗಳನ್ನ ರಕ್ಷಣೆ ಮಾಡಬೇಕಿದೆ ಎಂದರು.

# ಬಿಳಿಗಿರಿ ರಂಗನಬೆಟ್ಟದಲ್ಲಿ ಶ್ರಮದಾನ

ಚಾಮರಾಜನಗರ: ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿ ಗಳು ಬಿಳಿಗಿರಿರಂಗನ ಬೆಟ್ಟದ ಬಿಳಿಗಿರಿರಂಗನಾಥಸ್ವಾಮಿ ದೇವಾಲಯ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಶ್ರಮ ದಾನದ ಮೂಲಕ ಸ್ವಚ್ಛತಾ ಕಾರ್ಯ ನಡೆಸಿದರು.



ವಿದ್ಯಾರ್ಥಿಗಳು ದೇವಾಲಯದ ಹೊರ ಆವ ರಣ, ಮೆಟ್ಟಿಲುಗಳು, ಪ್ರವೇಶ ದಾರಿಗಳು ಹಾಗೂ ಸಾರ್ವಜನಿಕರು ಸಂಚರಿಸುವ ಸ್ಥಳಗಳಲ್ಲಿ ಕಸ ಸಂಗ್ರಹಿಸಿ ಸ್ವಚ್ಛತೆ ಮಾಡಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಆರ್.ಎಸ್. ಅಶ್ವಿನಿ ಮಾತನಾಡಿ, ಸ್ಕೌಟ್ಸ್ ಅಂಡ್ ಗೈಡ್ಸ್ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಶಿಸ್ತು, ಸೇವಾ ಮನೋಭಾವ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸು ತ್ತವೆ. ಇಂತಹ ಶ್ರಮದಾನ ಕಾರ್ಯಗಳಿಂದ ವಿದ್ಯಾ ರ್ಥಿಗಳು ಕೇವಲ ಶಿಕ್ಷಣಕ್ಕಷ್ಟೇ ಸೀಮಿತವಾಗದೆ ಸಮಾಜದ ಸಮಸ್ಯೆಗಳತ್ತ ಗಮನಹರಿಸಲು ಸಾಧ್ಯ ವಾಗುತ್ತದೆ ಎಂದು ಹೇಳಿದರು.

ಪರಿಸರ ಸ್ವಚ್ಛತೆ ನಮ್ಮೆಲ್ಲರ ಕರ್ತವ್ಯ. ಯುವ ಜನರು ಈ ರೀತಿಯ ಸಮಾಜಮುಖಿ ಕಾರ್ಯಗ ಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರೆ ಇತರರಿಗೂ ಪ್ರೇರಣೆಯಾಗುತ್ತದೆ. ಇಂತಹ ಕಾರ್ಯಗಳು ವ್ಯಕ್ತಿತ್ವ ವಿಕಸನಕ್ಕೂ ಸಹಕಾರಿಯಾಗುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಚಾಲಕ ಡಾ. ಪಿ.ಎಂ. ನಾಗೇಂದ್ರ ಕುಮಾರ್, ಜಿ.ಕೆ. ದೀಕ್ಷಿತ ಹಾಗೂ ಕಾಲೇಜಿನ ಅಧ್ಯಾಪಕರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳ ಸೇವಾ ಮನೋಭಾವವನ್ನು ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದರು.

# ಯತೀಂದ್ರ ಅವರಿಗೆ ಬುದ್ಧಿ ಹೇಳಲು ಸಿದ್ದರಾಮಯ್ಯಗೆ ಕೆ.ರಾಜು ಆಗ್ರಹ

**ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಗಳಾಗ ಬೇಕು ಎಂಬುದು ಬಹುತೇಕರ ಆಸೆ**

ರಾಮನಗರ: ರಾಜ್ಯದ ಮುಖ್ಯಮಂತ್ರಿ ಸ್ಥಾನದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಒಂದು ಸ್ಪಷ್ಟ ನಿರ್ಧಾರಕ್ಕೆ ಬರದಿದ್ದರೆ, ಪಕ್ಷದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಅಲ್ಲಿಯವರೆಗೆ ಯತೀಂದ್ರ ಸಿದ್ದರಾಮಯ್ಯ ಅವರು ಬಾಯಿಮುಚ್ಚಿಕೊಂಡಿರುವಂತೆ, ಸಿಎಂ ಸಿದ್ದರಾಮಯ್ಯ ಬುದ್ಧಿ ಹೇಳ ಬೇಕು ಎಂದು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷರೂ ಆಗಿರುವ ಮಾಜಿ ಶಾಸಕ ಕೆ.ರಾಜು ಆಗ್ರಹಿಸಿದ್ದಾರೆ.



ಮಾಧ್ಯಮಗಳಿಗೆ ಲಿಖಿತ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಸಿದ್ದರಾಮಯ್ಯ ಅವರು ತಮ್ಮ ಮಗನಿಗೆ ಶಿಸ್ತು ಮತ್ತು ಬುದ್ಧಿ ಹೇಳದಿದ್ದರೆ, ಈ ರಾಜ್ಯದ ಮುಖಂಡರಿಗೆ, ಕಾರ್ಯಕರ್ತರಿಗೆ ಬುದ್ಧಿ, ಶಿಸ್ತು ಹೇಳಲು ಸಾಧ್ಯವೆ? ಎಂದು ಭಾವಿಸಬೇಕಾಗುತ್ತದೆ ಎಂದು ಹೇಳಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರು ಒಳ್ಳೆಯ ಆಡಳಿತಗಾರರು, ಅವರ ಬಗ್ಗೆ ತಮಗೆ ಅಪಾರ ಗೌರವವಿದೆ. ಆದರೆ ಸಿಎಂ ಬದಲಾವಣೆ ಮತ್ತು ಮುಂದಿನ ಯಾರಾಗಬೇಕು ಎಂಬುದನ್ನು ಪಕ್ಷದ ಹೈಕಮಾಂಡ್ ಹೇಳುತ್ತದೆ. ಆದರೆ ಸಿದ್ದರಾಮಯ್ಯ ಅವರು ಪುತ್ರ ಯತೀಂದ್ರ ಸಿದ್ದರಾಮಯ್ಯನವರು ಇಂದೂ ಸಹ "ನನ್ನ ತಂದೆ ಸಿದ್ದರಾಮಯ್ಯನವರು ಮುಂದಿನ ಉಳಿದ ಅವಧಿಗೆ ಅವರೇ ಮುಖ್ಯಮಂತ್ರಿಯಾಗಿರುತ್ತಾರೆ" ಎಂದು ಮಾಧ್ಯಮಗಳಿಗೆ ಹೇಳಿಕೆ ಕೊಟ್ಟಿದ್ದಾರೆ. ಇದೇ ರೀತಿ ಅವರು 2–3 ಬಾರಿ ಹೇಳಿದ್ದಾರೆ. ಆದರೆ ಈ ವಿಚಾರದಲ್ಲಿ ಪಕ್ಷದ ಹೈಕಮಾಂಡ್ ಆಗಲಿ, ಸಿದ್ದರಾಮಯ್ಯನವರಾಗಲಿ ಯತೀಂದ್ರ ಅವರಿಗೆ ಬಾಯಿ ಮುಚ್ಚಿಕೊಂಡಿರುವಂತೆ ತಿಳುವಳಿಕೆ ಹೇಳುವುದಾಗಲಿ, ಪಕ್ಷದ ಶಿಸ್ತು ಉಲ್ಲಂಘನೆಯಾಗಿದೆ ಎಂದಾಗಲಿ ಹೇಳಲಿಲ್ಲ. ಇದನ್ನೆಲ್ಲ ಗಮನಿಸಿದರೆ ಯತೀಂದ್ರ ಅವರು ಸೂಪರ್ ಹೈಕಮಾಂಡ್ ಎಂದಂತಾಗುತ್ತದೆ ಎಂದು ಹೇಳಿದ್ದಾರೆ. ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯ ನಾಯಕ, ಈ ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮರ್ ಉತ್ತಮವಾಗಿ ಕೆಲಸ ಮಾಡುತತಿದ್ದಾರೆ. ಪಕ್ಷದ ಅಧ್ಯಕ್ಷರಾಗಿ 2023ರ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬರಲು ಕಾರಣಕರ್ತರಾಗಿದ್ದಾರೆ. ವಿರೋಧ ಪಕ್ಷಕ್ಕೆ ಸಿಂಹ ಸ್ವಪ್ನರಾಗಿದ್ದಾಋಎ. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಗಳಾಗಬೇಕು ಎಂಬುದು ಕಾರ್ಯಕರ್ತರು ಮತ್ತು ತಮ್ಮ ಆಸೆಯಾಗಿದೆ ಎಂದು ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷ ಸಮುದ್ರದಂತೆ, ಎಲ್ಲಾ ಜಾತಿ, ವರ್ಗದವರ ಬೆಂಬಲದಿಂದ ಡಿ. ಕೆ.ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದಿದೆ ಹೊರತು, ಒಂದೆರೆಡು ಜಾತಿ, ವರ್ಗದವರಿಂದ ಅಲ್ಲ ಎಂಬುದನ್ನು ಹೈಕಮಾಂಡ್ ಅರ್ಥಮಾಡಿಕೊಳ್ಳಬೇಕು. ಇಲ್ಲದಿದ್ದರೆ ಮುಂದಿನ ಚುನಾವಣೆಗಳಲ್ಲಿ ಮತದಾರರ ಅರ್ಥ ಮಾಡಿಸುತ್ತಾರೆ ಎಂದು ಕೆ. ರಾಜು ಸ್ಪಷ್ಟ ನುಡಿಗಳಲ್ಲಿ ಹೇಳಿದ್ದಾರೆ.

# ರಾಮನಗರ: ಗಜಗೌರಿ ವ್ರತಾಚರಣೆ

## 108 ದಂಪತಿಗಳಿಂದ ಕೈಂಕರ್ಯ । ಶೃಂಗೇರಿ ಋತ್ವಿಕರಿಂದ ಮಾರ್ಗದರ್ಶನ


ರಾಮನಗರ: ಧಾರ್ಮಿಕವಾಗಿ, ಪೌರಾಣಿಕವಾಗಿ ಮಹತ್ವ ಇರುವ ಗಜಗೌರಿ ವ್ರತ ರಾಮನಗರದಲ್ಲಿ ಶುಕ್ರವಾರ ಯಶಸ್ವಿಯಾಗಿ ನೆರವೇರಿತು.

ಶ್ರೀ ಸೀತಾರಾಮ ಸೇವಾ ಟ್ರಸ್ಟ್ ಪದಾಧಿಕಾರಿಗಳ ನೇತೃತ್ವದಲ್ಲಿ ಶ್ರೀ ಬಲಮುರಿ ಗಣಪತಿ ದೇವಸ್ಥಾನ ಟ್ರಸ್ಟ್, ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿಗಳ ಸಹಕಾರದಲ್ಲಿ ನಗರದಲ್ಲಿ ಹಮ್ಮಿಕೊಂಡಿದ್ದ ಗಜಗೌರಿ ಸಾಮೂಹಿಕ ವ್ರತಾಚರಣೆ ಯಶಸ್ವಿಯಾಗಿ ನೆರವೇರಿತು.

ನಾರದ ಮುನಿಯ ಸಲಹೆಯ ಮೇರೆಗೆ ಕೌರ ವರ ತಾಯಿ ಗಾಂಧಾರಿ ಮತ್ತು ಪಾಂಡವರು ಗಜ ಗೌರಿ ವ್ರತವನ್ನು ಆಚರಿಸಿದ್ದು ಮಹಾಭಾರತದಲ್ಲಿ ಉಲ್ಲೇಖವಿದೆ. ಮಕ್ಕಳ ಶ್ರೇಯಕ್ಕಾಗಿ ಕೌರವರು ಮತ್ತು ಪಾಂಡವರ ತಾಯಂದಿರು ಈ ವ್ರತವನ್ನು ಆಚರಿಸಿದ್ದರು. ಗಾಂಧಾರಿ ಮಣ್ಣಿನ ಆನೆಯ ಮೇಲೆ ಗೌರಿಯ ಮೂರ್ತಿಯನ್ನು ಕೂರಿಸಿ ವ್ರತವನ್ನು ಆಚರಿಸಿದರೆ, ಪಾಂಡವರು ಇಂದ್ರಲೋಕದಿಂದ ಸ್ವತಃ ಐರಾವತವನ್ನು ತಂದು ಅದರ ಮೇಲೆ ಗೌರಿ ಯನ್ನು ಕೂರಿಸಿ ವ್ರತವನ್ನು ಆಚರಿಸುತ್ತಾರೆ. ಹೀಗಾಗಿ ಗೌರಿಗೆ ಗಜಗೌರಿ ಅಂತ ಹೆಸರು ವಾಡಿಕೆಯಾಗಿದೆ. ಧಾರ್ಮಿಕ ಮಹತ್ವ ಇರುವ ಗಜಗೌರಿ ಪೂಜೆಯನ್ನು ಅತ್ಯಂತ ನಿಷ್ಠೆ, ಶ್ರದ್ಧೆ, ಭಕ್ತಿಯಿಂದ ಆಚರಿಸಬೇಕಾ ಗುತ್ತದೆ. ಲೋಕಕಲ್ಯಾ ಣಾರ್ಥ ರಾಮನಗರದಲ್ಲಿ ಆಯೋಜನೆಯಾಗಿರುವ ಗಜಗೌರಿ ವ್ರತದಲ್ಲಿ ಭಾಗ ವಹಿಸಲು ಶುಕ್ರವಾರ 108 ದಂಪತಿಗಳಿಗೆ ಈ ಅವಕಾಶ ದೊರೆಯಿತು.

**ಯಶಸ್ವಿಯಾಗಿ ನೆರವೇರಿದ ವ್ರತಾಚರಣೆ**

ಅಗ್ರಹಾರದ ವ್ಯಾಸರಾಯರ ರಸ್ತೆಯಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯ ನಿರ್ಮಾಣದ ಭೂಮಿಯಲ್ಲಿ ಗಜಗೌರಿ ವ್ರತ ಆಯೋಜನೆಯಾಗಿತ್ತು. ಶುಕ್ರವಾರ ಬೆಳಿಗ್ಗೆ 108 ದಂಪತಿ ಪೂಜಾಕರ್ತರು ಕಳಸದೊಂದಿಗೆ ರಥಬೀದಿಯಲ್ಲಿ ಮೆರವಣಿಗೆ ನಡೆಸಿ ದರು. ನಂತರ ಪೂಜಾ ಮಂಟಪದಲ್ಲಿ ಋತ್ವಿಕರ ಶ್ಲೋಕಗಳು, ಸ್ತೋತ್ರಗಳು ಮತ್ತು ವೇದ ಘೋಷಗಳೊಂದಿಗೆ ಗಜಗೌರಿ ವ್ರತ ಸಂಜೆ 4.30ರ ವೇಳೆಗೆ ಪೂರ್ಣ ಗೊಂಡಿತು.



**ಗಜಗೌರಿ ವ್ರತಾಚರಣೆ – ಅಪರೂಪದ ವ್ರತ**

ವ್ರತ ಎಂಬುದು ಒಂದು ನಿಯಮ. ಗಜಗೌರಿಯನ್ನು ಆರಾಧಿಸುವ ನಿಯಮಕ್ಕೆ ಗಜಗೌರಿ ವ್ರತ ಎನ್ನುತ್ತಾರೆ. ಗಜಗೌರಿ ವ್ರತಾಚರಣೆ ಅಪರೂಪ. ಆಯಸ್ಸು, ಆರೋಗ್ಯ, ಐಶ್ವರ್ಯ, ಸಂತಾನ ಭಾಗ್ಯವನ್ನು ಕರುಣಿಸುವಂತೆ ಮತ್ತು ಮಕ್ಕಳ ಶ್ರೇಯಸ್ಸು ಬಯಸಿ ಈ ವ್ರತವನ್ನು ಆಚರಿಸುವುದುಂಟು. ಒಂಬತ್ತು ಗೌರಿಗಳನ್ನು ಪ್ರತಿಷ್ಠಾಪಿಸಿ ಶರೀರ ಮತ್ತು ಮನಸ್ಸನ್ನು ಒಂದೇ ಕಡೆ ಕೂರಿಸಿ ವ್ರತವನ್ನು ಆಚರಿಸುವುದರಿಂದ ದೇವಿ ಕೃಪೆ ಲಭ್ಯವಾಗುತ್ತದೆ. ಇದಕ್ಕೆ ಗುರು ಸಮಾನರಾದ ಋತ್ವಿಕರ ಮಾರ್ಗದರ್ಶನದ ಅವಶ್ಯಕತೆ ಇದೆ. ರಾಮನಗರ ಗಣೇಶ್ ಭಟ್ಟರ ಮಾರ್ಗದರ್ಶನದಲ್ಲಿ ಶ್ರೀ ಸೀತಾರಾಮ ಸೇವಾ ಟ್ರಸ್, ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಟ್ರಸ್ಟ್ ಮತ್ತು ಶ್ರೀ ಬಲಮುರಿ ಗಣಪತಿ ಸೇವಾ ಟ್ರಸ್ಟ್‌ಗಳ ಪದಾಧಿಕಾರಿಗಳ ನೇತೃತ್ವದಲ್ಲಿ ನಾಗರೀಕರು, ಜನಪ್ರತಿನಿಧಿಗಳ ಸಹಕಾರದಲ್ಲಿ ಗಜಗೌರಿ ವ್ರತಾಚರಣೆ ಯಶಸ್ವಿಯಗಿದೆ.

– ಟಿ ಶರತ್ ಭಟ್ ಋತ್ವಿಕರು, ಶೃಂಗೇರಿ

ಸ್ವರ್ಣಗೌರಿಯ ಜೊತೆಗೆ ಗಜಗೌರಿ, ಸೌಭಾಗ್ಯ ಗೌರಿ, ಸೋಮಾವತಿ ಗೌರಿ, ಹಸ್ತಗೌರಿ, ಸಂಪದ ಗೌರಿ, ಸ್ಕಂದಮಾತಾ ಗೌರಿ, ಕನಕ ಗೌರಿ ವಿಜಯ, ಬೃಹದಾ ಗೌರಿ ಗಳನ್ನು ಪ್ರತಿಷ್ಠಾಪಿಸಲಾಗಿದೆ. ಪೂಜಾ ಕರ್ತರು ಪ್ರತಿಯೊಂದು ಗೌರಿಯ ಮುಂದೆ ಕುಳಿತು ಋತ್ವಿಕರ ಸಲ ಹೆಯಂತೆ ಪೂಜೆ ಮತ್ತು ವ್ರತವನ್ನು ಆಚರಿಸಿದರು. ಬಗೆಬಗೆಯ ಹೂವು, ಕಾಡಿಗೆ, ಕನ್ನಡರಿ, ಬಲೆ ಬಿಚ್ಚೋಲೆ ಮುಂತಾದ ಪೂಜಾ ಸಾಮಾಗ್ರಿಗಳೊಂದಿಗೆ ಪೂಜೆ ಯನ್ನು ನೆರವೇರಿಸಿ ಲೋಕಕಲ್ಯಾ ಣಕ್ಕಾಗಿ ಪ್ರಾರ್ಥಿಸಿದರು.

**ಫೆ.8ರಂದು ವಿಸರ್ಜನೆ**

**ಫೆ.8ರ ಭಾನುವಾರ ಗಜಗೌರಿಗಳನ್ನು ಆನೆಯ ಮೇಲಿರಿಸಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ನಂತರ ರಂಗರಾಯರ ದೊಡ್ಡಿ ಕೆರೆಯಲ್ಲಿ ವಿಸರ್ಜಿಸಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.**

ಚನ್ನಪಟ್ಟಣ ಕುನ್ನೀರು ಕಟ್ಟೆ ಮಠದ ಶ್ರೀ ಶಿವರುದ್ರ ಸ್ವಾಮೀಜಿ, ಗೊರವನಪುರ ಮಠದ ಶ್ರೀ ಜಗದೀಶ ಸ್ವಾಮೀಜಿಗಳು ಆಗಮಿಸಿ ಭಕ್ತರಿಗೆ ಆಶೀವ ರ್ಚನ ನೀಡಿದರು. ಶೃಂಗೇರಿ ದೇವಾಲಯದ ಋತ್ವಿಕರಾದ ಶರತ್ ಭಟ್ ಪ್ರವಚನ ನೀಡಿ ಗಜಗೌರಿ ವ್ರತಾಚರಣೆಯ ಮಹತ್ವವನ್ನು ತಿಳಿಸಿ ಕೊಟ್ಟರು. ಇದೇ ದಿನ ಸಂಜೆ ಕಾಶಿ ಮಾದರಿಯಲ್ಲಿ ಗಂಗಾರತಿಯನ್ನು ಹಮ್ಮಿಕೊಳ್ಳಲಾಗಿತ್ತು. ವೀರಶೈವ ಮಂಡಳಿಯ ಮಕ್ಕಳಿಂದ ಕಂಸಾಳೆ ನೃತ್ಯ ಪ್ರದರ್ಶನ, ಆರ್ಯವೈಶ್ಯ ಸಮುದಾಯದ ಮಹಿಳಾ ಸದಸ್ಯರಿಂದ ಡೊಳ್ಳು ಕುಣಿತ ಪ್ರದರ್ಶನ ನಡೆಯಿತು.

ಗಜಗೌರಿ ಸಾಮೂಹಿಕ ವ್ರತವನ್ನು ಆಯೋಜಿ ಸಿದ್ದ ಟ್ರಸ್ಟ್‌ಗಳ ಪ್ರಮುಖರಾದ ಕೆ.ವಿ.ಉಮೇಶ್, ಆರ್.ಜೆ.ಕುಮಾರಸ್ವಾಮಿ, ಪಿ.ಶಿವಾನಂದ ಮತ್ತು ತಂಡ ವ್ರತಾಚರಣೆಗೆ ಸಕಲ ಸಿದ್ದತೆಗಳನ್ನು ಕೈಗೊಂಡಿದ್ದರು. ಶಾಸಕ ಇಕ್ಬಾಲ್ ಹುಸೇನ್, ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಮತ್ತು ನಗರದ ಇತರ ಪ್ರಮುಖರು ಗಜಗೌರಿ ಆಚರಣೆಗೆ ಸಹಕಾರ ನೀಡಿದ್ದಾರೆ.

# ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಸೂಚನೆ



**ಸಕಲೇಶಪುರ:** ಗುಣಮಟ್ಟದ ರಸ್ತೆ ಕಾಮಗಾರಿ ನಡೆಸುವಂತೆ ಅಧಿಕಾರಿ ಗಳನ್ನು ಶಾಸಕ ಸಿಮೆಂಟ್ ಮಂಜು ತರಾಟೆಗೆ ತೆಗೆದುಕೊಂಡರು.

ತಾಲೂಕಿನ ಬಾಳ್ಳುಪೇಟೆಯಲ್ಲಿ ರಸ್ತೆ ಕಾಮಗಾರಿ ಪರಿಶೀಲನೆ ವೇಳೆ ರಸ್ತೆ ಗುಣಮಟ್ಟದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಶಾಸ ಕರು, ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಕಾರ್ಯರೂಪಕ್ಕೆ ಬರಲು ಎಲ್ಲರೂ ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಬೇಕೆಂದು ಗುತ್ತಿಗೆದಾರರು, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಗುಣಮಟ್ಟವನ್ನು ಕಾಪಾಡಿಕೊಂಡು ನಿಗದಿತ ಅವಧಿಯೊಳಗೆ ರಸ್ತೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕೆಂದು ತಿಳಿಸಿದರು.

ತೀರ ಹದಗೆಟ್ಟು ಸಾರ್ವಜನಿಕರ ಸಂಚಾರಕ್ಕೆ ಅಸಾಧ್ಯವಾಗಿದ್ದ ರಾಜ್ಯ ಹೆದ್ದಾರಿ–112ರ ಬೇಲೂರು–ಸೋಮವಾರಪೇಟೆ ರಸ್ತೆಯನು ಬಾಳ್ಳುಪೇಟೆಯಿಂದ ಜಮ್ಮನಹಳ್ಳಿ ತನಕ 3 ಕಿ.ಮೀ. ರಸ್ತೆಯನ್ನು 10 ಕೋಟಿ ರೂ. ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.

7 ಮೀಟರ್ ಅಗಲದ ದ್ವಿಪಥ ರಸ್ತೆ, 5 ಮೋರಿಗಳ ನಿರ್ಮಾಣ, ಬಾಳ್ಳುಪೇಟೆ ಪಟ್ಟಣ ವ್ಯಾಪ್ತಿಯಲ್ಲಿ ಮೋರಿ ಹಾಗೂ ಆಯ್ದ ಭಾಗಗಳಲ್ಲಿ ಚರಂಡಿ ನಿರ್ಮಾಣ, ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.ಇಲಾಖೆಗಳ ನಡುವೆ ಸಮನ್ವಯ ಕೊರತೆ ಕಂಡುಬಂದಿದ್ದು, ಇದು ರಸ್ತೆ ನಿರ್ಮಾಣಕ್ಕೆ ಅಡ್ಡಿಯಾಗುವ ಸಾಧ್ಯತೆ ಇದೆ. ಲೋಕೋಪಯೋಗಿ ಇಲಾಖೆ ಹಾಗೂ ಸೆಸ್ಕ್ ಇಲಾಖೆ ಅಧಿಕಾರಿಗಳು ಪರಸ್ಪರ ಸಮನ್ವಯ ಸಾಧಿಸಿ ಕೊಂಡು ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿ ಸಿದರು. ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಮುರುಗೇಶ್, ಸೆಸ್ಕ್ ಸಹಾಯಕ ಕಾರ್ಯಪಾಲಕ ಅಭಿಯಂತರ ಹರೀಶ್, ಗುತ್ತಿಗೆದಾರರು, ಗ್ರಾಮಸ್ಥರು ಇದ್ದರು.

# 8ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ವಿದ್ಯುತ್ ಪ್ರಸರಣ ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಫೆಬ್ರವರಿ 8ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಹೆಗ್ಗವಾಡಿಪುರ, ದೇಶವಳ್ಳಿ, ಸಂತೇಮರಹಳ್ಳಿ, ಕುದೇರು, ದೇಮಹಳ್ಳಿ, ಕಮರವಾಡಿ, ಬಾಣಹಳ್ಳಿ, ತೆಳ್ಳನೂರು, ಬಸ ವಟ್ಟಿ, ಕಾವುದವಾಡಿ, ಕೆಂಪನಪುರ, ಮಹಂತಾಳಪುರ, ಹುಲ್ಲೇಪುರ, ಹೊಸಮೋಳೆ, ಮೂಡಲಅಗ್ರಹಾರ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂ .ಸಂ 1912 ಸಂಪರ್ಕಿಸುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾರಿಗೆ ಲಾರಿ ಡಿಕ್ಕಿ: ತಪ್ಪಿದ ಅನಾಹುತ

**ಮಂಡ್ಯ:** ಬೆಂಗಳೂರು–ಮೈಸೂರು ರಾಷ್ಟ್ರೀಯ ಹದ್ದಾರಿಯಲ್ಲಿ ಕ್ಯಾಂಟರ್ ಲಾರಿಯೊಂದು ಕಾರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನ ಲ್ಲಿದ್ದ ಯುವಕ–ಯುವತಿಗೆ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲೂಕಿನ ರಕ್ಷಿತ್ ಹಾಗೂ ಲಿಖಿತ ಗಾಯಗೊಂಡವರು. ಇವರು ಮೈಸೂರಿನ ದೇವಸ್ಥಾನಕ್ಕೆ ತೆರಳುತ್ತಿದ್ದರು. ಮಂಡ್ಯ ತಾಲೂಕಿನ ಚಿನ್ನಗಿರಿ ದೊಡ್ಡಿ ಸಮೀಪ ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹಿಂಬಂದಿಯಿಂದ ಬಂದ ಕ್ಯಾಂಟರ್ ಲಾರಿ, ಕಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ.

ಕಾರಿನಲ್ಲಿದ್ದ ರಕ್ಷಿತ್ ಹಾಗೂ ಲಿಖಿತ ಅವ ರಿಗೆ ಪೆಟ್ಟಾಗಿದೆ. ಕೂಡಲೇ ಸಾರ್ವಜನಿಕರು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದಾರೆ. ಇಬ್ಬರಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದಾರೆ ಎಂದು ಸೆಂಟ್ರಲ್ ಪೊಲೀಸ್ ಠಾಣೆ ಪಿಎಸ್ಐ ಸುನೀಲ್ ಕುಮಾರ್ ತಿಳಿಸಿದ್ದಾರೆ. ಲಾರಿ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದು, ವಿಚಾರಣೆಗೊಳ ಪಡಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಮಂಡ್ಯ ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ವಾರದಲ್ಲಿ ಇದು ಎರಡನೇ ಅಪಘಾತವಾಗಿದ್ದು, ರಾಷ್ಟ್ರೀಯ ಹೆದ್ದಾರಿಯಲ್ಲಿ ಅತಿ ವೇಗವೇ ಅಪಘಾತಗಳ ಸಂಖ್ಯೆ ಹೆಚ್ಚಳಕ್ಕೆ ಕಾರಣ ಎಂದು ಹೇಳಲಾಗಿದೆ.

# ಪ್ರೀತಂ ವಿರುದ್ಧ ನಾಯಕರಿಗೆ ದೂರು

**ಹಾಸನ:** ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಅವರ ನಡೆ–ನುಡಿ, ವರ್ತನೆ ಹಾಗೂ ರಾಜ ಕೀಯ ಕಾರ್ಯವೈಖರಿಯ ನ್ಯೂನ್ಯತೆಗಳ ಬಗ್ಗೆ ಈಗಾ ಗಲೇ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಬಿಜೆಪಿ ನಾಯಕರ ಗಮನಕ್ಕೆ ತಂದಿದ್ದೇನೆ ಎಂದು ಬಿಜೆಪಿ ಮುಖಂಡ ಜಿ. ದೇವರಾಜೇಗೌಡ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಪ್ರೀತಂ ಗೌಡ ಎಷ್ಟರ ಮಟ್ಟಿಗೆ ಭ್ರಷ್ಟಾಚಾ ರದಲ್ಲಿ ತೊಡಗಿದ್ದಾರೆ? ಅವರು ಕೈಹಾಕಿರುವ ಗಂಭೀರ ಕೃತ್ಯಗಳು ಯಾವುವು? ಅವರಿಂದ ಎಷ್ಟು ಮನೆಗಳು ಹಾಳಾಗಿವೆ? ಯಾರ್ಯಾರ ಮನೆಗಳಿಗೆ ಅನ್ಯಾಯವಾಗಿದೆ? ರಾಜಕಾರಣದಲ್ಲಿ ಅವರು ಯೋಗ್ಯರೋ ಅಯೋಗ್ಯರೋ ಎಂಬುದನ್ನು ವಿವರಿಸಿ ದಾಖಲೆ ಸಮೇತ ಪಕ್ಷದ ಉನ್ನತ ನಾಯಕರಿಗೆ ಪತ್ರ ಬರೆಯಲಾಗಿದೆ. ಇದರಲ್ಲಿ ನನಗೆ ಯಾವುದೇ ಭಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ಹಿಂದೆ ಪ್ರಜ್ವಲ್ ರೇವಣ್ಣ ಕುರಿತು ಕೂಡ ಕೇಂದ್ರ ಮತ್ತು ರಾಜ್ಯ ನಾಯಕರಿಗೆ ಪತ್ರ ಬರೆದಿದ್ದೇನೆ. ಯೋಗ್ಯತೆ ಕಳೆದುಕೊಂಡ ವ್ಯಕ್ತಿಗಳಿಗೆ ಪಕ್ಷದಲ್ಲಿ ಜವಾಬ್ದಾರಿ ನೀಡಿದರೆ, ಕೊನೆಗೆ ಪಕ್ಷವೇ ತಲೆಬಾಗಬೇಕಾಗುತ್ತದೆ ಎಂದು ಆಗಲೇ ಎಚ್ಚರಿಸಿದ್ದೆ. ಆದರೆ ಆ ವೇಳೆ ನನ್ನ ಮಾತನ್ನು ಪರಿಗಣಿಸಲಿಲ್ಲ. ಈಗ ಅದರ ಪರಿಣಾಮ ಎಲ್ಲರಿಗೂ ಕಾಣಿಸಿದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಪ್ರೀತಂ ಗೌಡ ಅವರಿಗೆ ಪಕ್ಷದಿಂದ ಯಾವುದೇ ಹುದ್ದೆ ಅಥವಾ ಜವಾಬ್ದಾರಿ ನೀಡಿದರೆ, ಪಕ್ಷ ಯಾವ ರೀತಿ ಹೀನಾಯ ಸ್ಥಿತಿಗೆ ಹೋಗಬಹುದು ಎಂಬುದನ್ನು ದಾಖಲೆಗಳೊಂದಿಗೆ ವಿವರಿಸಿ ಪಕ್ಷಕ್ಕೆ ನೀಡಿದ್ದೇನೆ ಎಂದು ದೇವರಾಜೇಗೌಡ ತಿಳಿಸಿದರು.

# ಕಾಶಿಯಾತ್ರೆ ಸೌಲಭ್ಯ ಸದುಪಯೋಗಕ್ಕೆ ಕರೆ




ಮೈಸೂರು: ಸರ್ಕಾರ ಕಾಶಿ ಧಾರ್ಮಿಕ ಯಾತ್ರೆ ಕೈಗೊಳ್ಳುವವರಿಗಾಗಿ ನೆರವು ನೀಡುವ ಸೌಲಭ್ಯ ನೀಡಿದ್ದು, ಇದನ್ನು ಸದ ುಪಯೋಗ ಪಡಿಸಿಕೊಳ್ಳಬಯಸುವವರಿಗೆ ಕರ್ನಾಟಕ ರಾಜ್ಯ ಅಭಿವೃದ್ಧಿ ಪರಿಷತ್ ನೆರವಾಗಲಿದೆ ಎಂದು ಖಜಾಂಚಿ ಬಿ. ಮಂಜುಳಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತ ನಾಡಿ, ಇದು ಬೆಂಗಳೂರಿನಿಂದ ಕರ 'ದೊಯ್ದು ಮತ್ತೆ ಅಲ್ಲಿಗೇ ಕರೆತರುವ ಒಟ್ಟು 5 ದಿನಗಳ ಪ್ರಯಾಣವಾಗಿದೆ. 5,500 ರೂ., ಶುಲ್ಕ ಪಾವತಿಸಿ ಪ್ರಯಾಣಿಸಿದಲ್ಲಿ ಸರ್ಕಾರ 5 ಸಾವಿರ ಅವರ ಖಾತೆಗೇ ಮರಳಿ ಜಮಾ ಮಾಡಲಿದೆ. ಈ ಯಾತ್ರೆ ಯಲ್ಲಿ ಪಾಲ್ಗೊಳ್ಳುವವರಿಗೆ ನಿತ್ಯ ಮೂರು ಲೀಟರ್ ನೀರು, ಬೆಳಗಿನ ಉಪಹಾರ, ಟೀ ಅಥವಾ ಕಾಫಿ, ಮಧ್ಯಾಹ್ನದ ಊಟ, ಸಂಜೆ ಸ್ನಾ?ಯಕ್ಸ್, ರಾತ್ರಿ ತಿಂಡಿ, ಊಟ, ಪ್ರೇಕ್ಷಣೀಯ ಸ್ಥಳ ಮತ್ತು ದೇವಾಲಯ ದರ್ಶನ, ಸಾಮಾನ್ಯ ಕೊಠಡಿ, ವಾಹನ ಪ್ರಯಾಣ, ಯಾತ್ರಿಕರಿಗೆ ಟೋಪಿ, ಕನ್ನಡ ಮಾತನಾಡುವ ಮಾರ್ಗದರ್ಶಿ, ಪ್ರಯಾಣ ವಿಮೆ ಸೌಲಭ್ಯವಿರಲಿದೆ ಎಂದು ಮಾಹಿತಿ ನೀಡಿದರು. ಹೆಚ್ಚಿನ ಮಾಹಿತಿಗೆ ಕೆ.ಆರ್. ಮೊಹಲ್ಲಾ ವೀಣೆ ಶೇಷಣ್ಣ ರಸ್ತೆ, 7 ನೇ ಅಡ್ಡ ರಸ್ತೆ 544 ಸಂಖ್ಯೆ ಸಂಸ್ಥೆಯ ವಿಳಾಸ ಅಥವಾ ದೂ. 9964683183, ಇಲ್ಲವೇ 8147823336 ನ್ನು ಸಂಪರ್ಕಿಸಲು ಕೋರಿ ದರು. ಶ್ರೀನಿವಾಸ ಕುಮಾರ್, ಸಿಂಧುವಳ್ಳಿ ಶಿವಕುಮಾರ್, ರಾಜೇಶ್ ಇದ್ದರು.

**ಪ್ರವಾಸೋದ್ಯಮ, ಗಣಿಗಾರಿಕೆ ಸ್ಥಗಿತಗೊಳಿಸದಿದ್ದರೆ ವಿಧಾನಸೌಧಕ್ಕೆ ಕಾಡಾಪ್ರಾಣಿಗಳೊಂದಿಗೆ ಮುತ್ತಿಗೆ ಎಚ್ಚರಿಕೆ**

# ಅರಣ್ಯ ಪ್ರವಾಸೋದ್ಯಮ ನಿಲ್ಲಿಸಲು ಮಹೇಶ್‌ಕುಮಾರ್ ಆಗ್ರಹ

ಚಾಮರಾಜನಗರ :ಅರಣ್ಯದೊಳಗೆ ಪ್ರವಾಸೋದ್ಯಮ ಸ್ಥಗಿತಗೊಳಿಸಿ ಕೃಷಿ ಪ್ರವಾಸೋದ್ಯಮ ಮಾಡುವ ಮೂಲಕ ರೈತರಿಗೆ ಲಾಭ ತಂದು ಕೊಡುವ ಕೆಲ ಸವನ್ನು ಮಾಡಬೇಕು ಎಂದು ವಿಶ್ವ ರೈತ ಸಂಘ ಟನೆಯ ಸದಸ್ಯರು ಹಾಗೂ ಪಾರಂಪರಿಕ ನಾಟಿ ವೈದ್ಯರಾದ ಹೆಗ್ಗವಾಡಿಪುರ ಮಹೇಶ್ ಕುಮಾರ್ ಒತ್ತಾಯಿಸಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ರೈತರ ತೋಟವೇ ಒಂದು ವಿಶ್ವವಿದ್ಯಾ ನಿಲಯವಾಗಿದ್ದು ಅಲ್ಲಿ ಹೊಸ ಅನ್ವೇಷಣೆ ಆಗಬೇಕು. ಹಣ್ಣು, ತರಕಾರಿ, ಸಿರಿಧಾನ್ಯ ಬಗ್ಗೆ ಅರಿವು ಮೂಡಿಸಬೇಕು. ಅದನ್ನು ಬಿಟ್ಟು ಕಾಡಿನೊಳಗೆ, ಕಾಡಿನ ಸಮೀಪದಲ್ಲಿ ರೆಸಾರ್ಟ್ ಮಾಡಿ ಮೋಜು, ಮಸ್ತಿ ಮಾಡುವುದರಿಂದ ಕಾಡುಪ್ರಾಣಿಗಳಿಗೆ ತೊಂದರೆ ಉಂಟಾಗಿ ಅವು ನಾಡಿನತ್ತ ಬರುತ್ತಿವೆ. ವೀರಪ್ಪನ್ ಇದ್ದಂತಹ ಸಂದರ್ಭದಲ್ಲಿ ಒಂದು ಕಾಡುಪ್ರಾಣಿಗಳು ನಾಡಿನತ್ತ ಸುಳಿಯುತ್ತಿರಲಿಲ್ಲ. ಕಾಡುಪ್ರಾಣಿಗಳು ರಕ್ಷಣೆಗೆ ಇತ್ತು. ಆಗಾಗಿ ಕಾಡಿ ನೊಳಗೆ ರೆಸಾರ್ಟ್ ಮಾಡುವುದು ಬೇಡ. ಅನ್ನದಾ ತರ ಹೊಲದಲ್ಲಿ ಪ್ರವಾಸೋದ್ಯಮ ಮಾಡುವ ಮೂಲಕ ರೈತರಿಗೆ ಲಾಭ ತಂದು ಕೊಡುವ ಕೆಲಸವನ್ನು ಮಾಡಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ಉಪಟಳ ವಿಪರೀತ ವಾಗಿದ್ದು, ಪ್ರಾಣಿ–ಮಾನವ ಸಂಘರ್ಷ ಎದುರಾ ಗಿದ್ದು, ಜನ, ಜಾನುವಾರು ಪ್ರಾಣ ಕಳೆದುಕೊಂ ಡಿದ್ದಾರೆ. ಬೇಕಾದಷ್ಟು ರೈತರು ಬೆಳೆ ಬೆಳೆಯ ಆಗಿಲ್ಲ. ಕಾಡುಪ್ರಾಣಿ ಭಯದಿಂದ ಜನರು ತಮ್ಮ ಜಮೀನು ತೋಟಗಳಿಗೆ ಹೋಗಲು ಆಗುತ್ತಿಲ್ಲ. ಜಿಲ್ಲೆಗೆ ಅರಣ್ಯ ಸಚಿವರು, ರಾಜ್ಯ ಮಟ್ಟದ ಅಧಿಕಾರಿಗಳು ಜಿಲ್ಲೆಗೆ ಭೇಟಿ ನೀಡಿದ್ದಾರೆ. ಆದರೂ ಕೂಡ ಸರ್ಕಾರಗಳು ಇದನ್ನು ತಡೆಗಟ್ಟುವ ಕೆಲಸ ಮಾಡಿಲ್ಲ ಎಂದು ಆರೋಪಿಸಿದರು.

ಕೂಡಲೇ ಪ್ರವಾಸೋದ್ಯಮ ಇಲಾಖೆ ಕಾಡಿನೊಳಗೆ ಪ್ರವಾಸೋದ್ಯಮ ನಿಲ್ಲಿಸಬೇಕು. ರೆಸಾರ್ಟ್ ನಿಲ್ಲಿಸಬೇಕು, ಗಣಿಗಾರಿಕೆ ನಿಲ್ಲಿಸಬೇಕು. ಆಗ ಮಾತ್ರ ಕಾಡುಪ್ರಾಣಿಗಳು ಅರಣ್ಯದಲ್ಲಿ ನೆಮ್ಮದಿಯಾಗಿ ಇರುತ್ತವೆ. ಇದರ ಬಗ್ಗೆ ಅರಣ್ಯ ಸಚಿವರು, ಮುಖ್ಯಮಂತ್ರಿಗಳು ಗಮನಹರಿಸಬೇಕು. ಇಲ್ಲದಿದ್ದರೆ ಕಾಡುಪ್ರಾಣಿ ಗಳೊಂದಿಗೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಬೇಕಾಗುತ್ತದೆ' ಎಂದು ಎಚ್ಚರಿಸಿದರು.

**ಕೂಡಲೇ ಹಸಿಕಡ್ಲೆ ಖರೀದಿ ಕೇಂದ್ರ ತೆರಯಲು ಆಗ್ರಹ:**

ಹಸಿಕಡ್ಲೆ ಖರೀದಿ ಕೇಂದ್ರವನ್ನು ಗ್ರಾಮ ಮಟ್ಟದಲ್ಲಿ ಈ ಕೂಡಲೇ ತೆರೆದು ದಳ್ಳಾಳಿಗಳು ಹಾವಳಿ ನಿಲ್ಲಿಸಬೇಕು. ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಾಲ್ ಹಸಿಕಡ್ಲೆ ಗೆ 5875 ರೂ ಬೆಂಬಲ ಬೆಲೆ ನೀಡಿದ್ದು, ರಾಜ್ಯ ಸರ್ಕಾರವು ಕೂಡ ಕನಿಷ್ಠ 2 ಸಾವಿರ ಬೆಂಬಲ ಬೆಲೆ ನಿಗದಿಪಡಿಸಬೇಕು. ಜನರಿಗೆ ಮಾರಕವಾಗಿರುವ ಡೆಡ್ಲಿ ಆನ್ ಲೈನ್ ಗೇಮ್ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.ಪತ್ರಿಕಾಗೋಷ್ಠಿಯಲ್ಲಿ ಮಹದೇವಸ್ವಾಮಿ ಹಾಜರಿದ್ದರು.

# ಆರೋಗ್ಯ ತಪಾಸಣಾ ಶಿಬಿರದಿಂದ ಜನರಿಗೆ ಅನುಕೂಲ

### ಸಿ.ಮಂಜುನಾಥ್ ಪ್ರಸನ್ನ ಅಭಿಮತ




ಚಾಮರಾಜನಗರ, ಉಚಿತ ಆರೋಗ್ಯ ತಪಾಸಣಾ ಶಿಬಿರದಿಂದ ಜನರಿಗೆ ಅನುಕೂಲಕರವಾಗಿದೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕ ಸಿ.ಮಂಜುನಾಥ ಪ್ರಸನ್ನ ಹೇಳಿದರು.

ನಗರದ ರೋಟರಿ ಭವನದಲ್ಲಿ ಅಖಿಲ ಭಾರತೀಯ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್ ಅವರ ಹುಟ್ಟುಹಬ್ಬದ ಅಂಗವಾಗಿ ನಂದಿಬ್ರಿಗೇಡ್, ಜೆಎಸ್‌ಎಸ್ ವೈದ್ಯಕೀಯ ಸಂಸ್ಥೆ, ಜೆಎಸ್ ಎಸ್ ನರ್ಸಿಂಗ್ ಕಾಲೇಜು, ರೋಟರಿ ಸಂಸ್ಥೆ ವತಿಯಿಂದ ಅಯೋಜಿಸಿದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಆರೋಗ್ಯ ಸೇವೆ ಒಂದು ಅತ್ಯುತ್ತಮವಾದ ಸೇವೆಯಾಗಿದೆ. ಪವಿತ್ರಕ್ಕೆ ಹೆಸರಾದ ಒಂದು ಸೇವೆಯಾಗಿದೆ. ಯುಳ್ಳವರು ದೊಡ್ಡದೊಡ್ಡ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಆದರೆ ಸಾಮಾನ್ಯ ಜನರು ಬಡವರಿಗೆ ಇಂತಹ ಉಚಿತ ಆರೋಗ್ಯ ಶಿಬಿರಗಳು ತುಂಬಾ ಪರಿಣಾಮಕಾರಿಯಾಗಿ ಉಪಯೋಗ ಆಗುತ್ತದೆ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷರಾದ ಮೂಡ್ಲು ಪುರ ನಂದೀಶ್ ಅವರು ಎಲ್ಲ ಸಮಾಜದ ಮುಖಂಡರೊಂದಿಗೆ ಪ್ರೀತಿ,ವಿಶ್ವಾಸದಿಂದ ಇದ್ದು ಅನೇಕ ಸಮಾಜಮುಖಿ ಸೇವಾ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅವರ ಹುಟ್ಟುಹಬ್ಬದ ಅಂಗವಾಗಿ ನಂದಿ ಬ್ರಿಗೇಡ್ ಆರೋಗ್ಯ ಶಿಬಿರ ಹಮ್ಮಿಕೊಂಡು ಜನರಿಗೆ ಅನುಕೂಲ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ ವಿಚಾರ. ನಂದೀಶ್ ಮೂಡ್ಲು ಪುರ ಅವರಿಗೆ ಒಳಿತಾಗಲಿ ಎಂದು ಶುಭ ಕೋರಿದರು.

ಅಧ್ಯಕ್ಷತೆ ವಹಿಸಿದ್ದ ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಹುಟ್ಟಹಬ್ಬವನ್ನು ಸಡಗರದಲ್ಲಿ ಆಚರಣೆ ಮಾಡಿಕೊಳ್ಳುವುದು ಅಲ್ಲ. ಜನೋಪಯೋಗಿಯೊಂದಿಗೆ ಹುಟ್ಟುಹಬ್ಬ ಆಚರಣೆ ಮಾಡಿಕೊಳ್ಳುವುದಿಂದ ನೂರಾರು ವರ್ಷಗಳ ಕಾಲ ಅವರ ನೆನಪು ಉಳಿಯುತ್ತದೆ. ಅಂತಹ ಕಾರ್ಯಕ್ರಮವನ್ನು ಮೂಡ್ಡು ಪುರ ನಂದೀಶ್ ಅವರ ಹುಟ್ಟುಹಬ್ಬದ ಅಂಗವಾಗಿ ನಂದಿ ಬ್ರಿಗೇಡ್ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿರುವುದು ಒಂದು ಅರ್ಥಪೂರ್ಣ ಕಾರ್ಯಕ್ರಮವಾಗಿದೆ. ಭಗವಂತ ಮೂಡ್ಲು ಪುರನಂದೀಶ್ ಅವರಿಗೆ ಹೆಚ್ಚಿನ ಆರೋಗ್ಯ, ಆಯಸ್ಸು ಕರುಣಿಸಲಿ ಎಂದು ಶುಭ ಕೋರಿದರು. ಪರಿಸರಪ್ರೇಮಿ ಸಿ.ಎಂ.ವೆಂಕಟೇಶ್ ಮಾತನಾಡಿ, ರಕ್ತದೊತ್ತಡ, ಮಧುಮೇಹ, ಇಸಿಜಿ, ಹಾಗೂ ಇನ್ನಿತರ ತಪಾಸಣೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಡಾ.ಅಜಯ್, ಅರುಷಿ, ರಾಧಿಕ, ನಿವೃತ್ತ ಶಿಕ್ಷಕ ಶಿವಕುಮಾರ್, ನಂದಿ ಬಿಗ್ರೇಡ್ ಮುಖ್ಯಸ್ಥ ಶಿವರಾಜ್ ಸಿದ್ದಯ್ಯನಪುರ, ಗುರುಪ್ರಸಾದ್, ಹರಿಪ್ರಸಾದ್, ಮಂಜೇಶ್, ಅಶೋಕ, ಭೂಮಿಕ ಮಂಜು, ರವಿ, ನಂದೀಶ್, ಅರ್ಜುನ, ಗಿರೀಶ್ ಪುಣಜನೂರು, ಆಟೋ ನಾಗೇಂದ್ರ ಇತರರು ಭಾಗವಹಿಸಿದ್ದರು.

## ಹೆಸರಿಗೆ ತಕ್ಕಂತೆ ಶ್ರೀಕ್ಷೇತ್ರ ಧರ್ಮದ ಕಾರ್ಯಗಳನ್ನು ಮಾಡುತ್ತಿದೆ


ಕೆ.ಆರ್.ಪೇಟೆ– ಜೀವನ ನಡೆಸಲು ಕಷ್ಟಪಡುತ್ತಿರುವ ಅನಾಥರು, ವೃದ್ದರಿಗೆ ಪ್ರತಿತಿಂಗಳು ಹಣ ನೀಡುವ ಜೊತೆಗೆ ಜೀವನೋಪಾಯಕ್ಕೆ ವಸ್ತುಗಳನ್ನು ನೀಡುತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳದ ಕರ?ಯಕ್ಕೆ ಸರಿಸಮನಾದ ಮತ್ತೊಂದು ಧರ್ಮಕರ?ಯ ಇಲ್ಲಾ ಎಂದು ಮಾಜಿ ಪ್ರಧಾನರಾದ ಸಾಕ್ಷೀಬೀಡು ರಾಮಕೃಷ್ಣೇಗೌಡ ತಿಳಿಸಿದರು.

ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿ ಸಾಕ್ಷೀಬೀಡು ಗ್ರಾಮದಲ್ಲಿ ಅಗತ್ಯ ಇರುವ ವಿಶೇಷಚೇನತ ವ್ಯಕ್ತಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಬಂದಿರುವ ವಾತ್ಸಲ್ಯ ಕಿಟ್ ವಿತರಿಸಿ ಮಾತನಾಡಿದರು. ನಮ್ಮ ಜನರು ನ್ಯಾಯಭದ್ದವಾಗಿ ತಮ್ಮ ಹಕ್ಕಿನ ಆದಾರದಂತೆಯೆ ತಮ್ಮ ತೆರಿಗೆ ಹಣದಿಂದಲೆ ಕೊಡಮಾಡುವ ಯಾವುದಾರೂ ಸರ್ಕಾರ ಯೋಜನೆಗಳನ್ನು ಪಡೆದುಕೊಳ್ಳಲು ಹತ್ತಾರುಬಾರಿ ಸರ್ಕಾರಿ ಕಚೇರಿಯಬಾಗಿಲನ್ನು ಸವೆಸುವಂತಃ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಮಯದಲ್ಲಿ ಕಷ್ಟದ ಸ್ಥಿತಿಯಲ್ಲಿ ಜೀವನ ನಡೆಸುತ್ತಿರುವ ಅನಾಥರು ಅಭಲೆಯರನ್ನು ಗುರುತಿಸಿ ಅವರ ಮನೆಯ ಬಾಗಿಲಿಗೆ ಸೌಲಭ್ಯವನ್ನು ತಲುಪಿಸುವ ಕೆಲಸಮಾಡುತ್ತಿರುವ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ವಿಶ್ವದಲ್ಲಿಯೇ ಮಾದರಿ ಯೋಜನೆಯಾಗಿದೆ ಎಂದರೆ ತಪ್ಪಾಗಲಾರದು ಎಂದರು.

ಅಕ್ಕಿಹೆಬ್ಬಾಳು ವಲಯದ ಮೇಲ್ವಿಚಾರಕಿ ಶ್ರೀಲ್ಪಶ್ರೀ ಮಾತನಾಡಿ ಪೂಜ್ಯ ವೀರೇಂದ್ರಹೆಗ್ಗಡೆಯವರು ಮತ್ತು ಮಾತೃಶ್ರೀ ಹೇಮಾವತಿ ಅಮ್ಮನವರು ನಿರಾಶ್ರಿತರಿಗೆ ನೆರವಾಗಬೇಕು ಅವರ ನೋವಿನೊಂದಿಗೆ ನಾವು ಇರಬೇಕು ಎನ್ನುವ ಸದುದ್ದೇದಿಂದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕವೆ ಹತ್ತಾರು ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದು ಅದರಲ್ಲಿ ಮಾಸಾಶನ ಮತ್ತು ವಾಸ್ತಲ್ಯ ಕಿಟ್ ವಿತರಣೆಗಳು ಸೇರಿವೆ. ಎಂದು ತಿಳಿಸಿದರು. ವಾತ್ಸಲ್ಯ ಕಿಟ್ ವಿತರಣಾ ಕರ?ಯಕ್ರಮದಲ್ಲಿ ಗ್ರಾ.ಪಂ ಮಾಜಿ ಅಧ್ಯಕ್ಷ ನಾಗರಾಜು, ಸದಸ್ಯ ಮಹೇಶ್, ನಿವೃತ ಶಿಕ್ಷಕ ನಿಂಗರಾಜು, ಮುಖಂಡರಾದ ಉದಯ್‌ಶಂಕರ್, ಹನುಮಂತೇಗೌಡ, ಮೋಹನ್, ಹರೀಶ್, ಸಣ್ಣಪ್ಪ, ವಾತ್ಸಲ್ಯ ಸದಸ್ಯರಾದ ರಂಗಸ್ವಾಮಿ, ಸೇವಾಪ್ರತಿನಿಧಿ ನಂದಿನಿ ಹಾಜರಿದದ್ದರು.



# ಚಾಮುಂಡಿ ಮೊರೆ ಹೋದ ಭವಾನಿ





ಮೈಸೂರು: ಸೂರಜ್ ರೇವಣ್ಣ, ರೇವಣ್ಣರ ಮೇಲಿನ ಪ್ರಕರಣಗಳ ಬಳಿಕ ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಭವಾನಿ ರೇವಣ್ಣ ಶುಕ್ರವಾರ ಚಾಮುಂಡಿ ಬೆಟ್ಟಕ್ಕೆ ಆಗಮಿಸಿ ರಥೋತ್ಸವ ಹರಕೆ ಸಲ್ಲಿಸಿದರು.

ಸೂರಜ್, ರೇವಣ್ಣ ಪ್ರಕರಣದ ಬಳಿಕ ಭವಾನಿ ರೇವಣ್ಣ ಸಾರ್ವಜನಿಕ ಕಾರ್ಯಕ್ರಮದಿಂದ ದೂರ ಉಳಿದಿದ್ದರು. ಮಾತ್ರವಲ್ಲದೆ, ಕ್ಯಾನ್ಸರ್ ನಿಂದಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಇದೆಲ್ಲದರ ಬೆನ್ನಲ್ಲೇ ಇಂದು ಬೆಳಿಗ್ಗೆಯೇ ಚಾಮುಂಡಿ ಬೆಟ್ಟಕ್ಕೆ ಆಗಮಿಸಿ ರಥೋತ್ಸವ ಸೇವೆ ಸಲ್ಲಿಸಿದರು. ಮೊದಲ ಗಣಪತಿ ಪೂಜೆ ಯೊಂದಿಗೆ ಪ್ರಾರಂಭಿಸಿ ಅನಂತರ ಚಾಮುಂಡೇಶ್ವರಿ ಉತ್ಸವ ಮೂರ್ತಿಯ ರಥವನ್ನು ಒಂದು ಸುತ್ತು ಎಳೆಯುವ ಮೂಲಕ ವಿಶೇಷ ಸೇವೆ ಸಲ್ಲಿಸಿದರು. ಈ ವೇಳೆ ಕುಟುಂಬಕ್ಕೆ ಎದುರಾಗಿರುವ ಕಷ್ಟ ಪಾರಾಗಲಿ ಹಾಗೂ ನಾಡಿನ ಜನರಿಗೂ ಒಳಿತಾಗಲಿ ಎಂದು ಪ್ರಾರ್ಥಿಸಿದ್ದಾರೆಂದು ತಿಳಿದು ಬಂದಿತು.

# ಜಮೀನಿನಲ್ಲಿ ಹುಲಿ ಪ್ರತ್ಯಕ್ಷ



ಗುಂಡ್ಲುಪೇಟೆ: ಹಾಡಹಗಲೇ ಜಮೀನಿನಲ್ಲಿ ಪ್ರತ್ಯಕ್ಷವಾದ ಬಾರಿ ಗಾತ್ರದ ಹುಲಿಯನ್ನ ಕಂಡ ರೈತರು ಬೆಚ್ಚಿಬಿದ್ದಿರುವ ಘಟನೆ ತಾಲೂಕಿನ ಪುತ್ತನಪುರ ಗ್ರಾಮದ ರೈತರೊಬ್ಬರ ಜಮೀನಿನಲ್ಲಿ ನಡೆದಿದೆ. ಮಧ್ಯಾಹ್ನದ ವೇಳೆಯಲ್ಲೇ ಅರಿಶಿನ ಬೇಯಿಸುತ್ತಿದ್ದ ರೈತರಿದ್ದ ಕಡೆ ಧಾವಿಸಿ ಬಂದ ವ್ಯಾಘ್ರನನ್ನ ಕಂಡು ದಿಕ್ಕಾಪಾಲಾಗಿ ಓಡಿ ಜೀವ ಉಳಿಸಿಕೊಂಡಿರುವ ಬಗ್ಗೆ ರೈತರೊಬ್ಬರು ತಮಗಾದ ಅನುಭವ ಬಿಚ್ಚಿಟ್ಟಿದ್ದಾರೆ.

ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಗುಂಡ್ಲು ಪೇಟೆ ಬಫರ್ ಜೋನ್ ವಲಯಕ್ಕೆ ಸೇರಿದ ಪುತ್ತನ ಪುರ ಗ್ರಾಮದ ಸುರೇಶ್ ಎಂಬ ರೈತರ ಜಮೀನಿನಲ್ಲಿ ದಿಢೀರ್ ಪ್ರತ್ಯಕ್ಷವಾದ ವ್ಯಾಘ್ರ ಆತಂಕ ಸೃಷ್ಟಿಸಿದೆ, ಇನ್ನೇನು ಅರಿಶಿನ ಬೇಯಿಸುತ್ತಿದ್ದವರ ಬಳಿ ಬರುವಷ್ಟರಲ್ಲಿಯೇ ಅಲ್ಲಿದ್ದವರೂ ಸ್ಥಳದಿಂದ ಕಾಲ್ಕಿತ್ತಿದ್ದಾರೆ. ಹುಲಿ ಬರುವುದನ್ನ ಗಮನಿಸಿದ ಸ್ಥಳೀಯರು ದಿಕ್ಕಾಪಾಲಾಗಿ ಓಡಿ ಹೋದ ಹಿನ್ನೆಲೆ ಬಾರಿ ಅನಾಹುತ ತಪ್ಪಿದಂತಾಗಿದೆ. ಗ್ರಾಮದ ಸನಿಹದಲ್ಲೇ ವ್ಯಾಘ್ರನ ಚಲನವಲನ ನೋಡಿದ ಜನರು ಹಗಲಿನ ವೇಳೆಯಲ್ಲೇ ಹೊರಬರಲು ಹಿಂಜರಿಯುತ್ತಿದ್ದಾರೆ, ಅರಿಶಿನ ಕೊಯ್ಲು ಮುಗಿದಿದ್ದು ಬೇಯಿಸಿ ಒಣಗಲು ಬಿಟ್ಟಿರುವ ರೈತರು ರಾತ್ರಿ ವೇಳೆ ಕಾವಲಿಗೆ ಹೋಗಲೇಬೇಕಾದ ಅನಿವಾರ್ಯತೆಯಿದೆ ಆದರೆ ಇಲ್ಲಿಯೇ ಸಂಚರಿಸುತ್ತಿರುವ ಹುಲಿಯಿಂದ ಪ್ರಾಣ ಭೀತಿ ಎದುರಾಗಿದೆ ಎಂದು ಸುರೇಶ್ ಕಳವಳ ವ್ಯಕ್ತಪಡಿಸಿದ್ದಾರೆ.

ಹಗಲಿನಲ್ಲೇ ಹುಲಿ ಕಾಣಿಸಿಕೊಂಡಿರುವುದರಿಂದ ಸುತ್ತಮುತ್ತಲ ಗ್ರಾಮಸ್ಥರು ಜಮೀನುಗಳಿಗೆ ಕೆಲಸಕ್ಕೆ ತೆರಳಲು ಭಯಪಡುವಂತಹ ವಾತಾವರಣ ನಿರ್ಮಾಣವಾಗಿದೆ ಆದುದರಿಂದ ಅರಣ್ಯ ಇಲಾಖೆ ಕೂಂಬಿಂಗ್ ಕಾರ್ಯಚರಣೆ ನಡೆಸಿ ಹುಲಿಯನ್ನ ಸೆರೆಹಿಡಿದು ಬೇರೆಡೆ ಸ್ಥಳಾಂತರಿಸಬೇಕು ಎಂದು ರೈತ ಮುಖಂಡರು ಆಗ್ರಹಿಸಿದ್ದಾರೆ.

# ಸುವರ್ಣಾವತಿದಲ್ಲಿ ಜಲಸಾಹಸ

## ಕ್ರೀಡೋತ್ಸವಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ

ಚಾಮರಾಜನಗರ,– ಯುವಕರು ಹಾಗೂ ಸಾರ್ವಜನಿಕರನ್ನು ಕ್ರೀಡೆಗೆ ಉತ್ತೇಜಿಸುವ ಸಲುವಾಗಿ ಸುವರ್ಣಾವತಿ ಜಲಾಶಯದಲ್ಲಿಂದು ಆರಂಭವಾದ ಜಲ ಸಾಹಸ ಕ್ರೀಡೋತ್ಸವಕ್ಕೆ ಎಂ.ಎಸ್.ಐ.ಎಲ್. ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಚಾಲನೆ ನೀಡಿದರು.

ತಾಲೂಕಿನ ಅಟ್ಟುಗೂಳಿಪುರ ಗ್ರಾಮದಲ್ಲಿರುವ ಸುವರ್ಣಾವತಿ ಜಲಾಶಯದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಬೆಂಗಳೂರಿನ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿರುವ 2 ದಿನಗಳ ಜಲ ಸಾಹಸ ಕ್ರೀಡೋತ್ಸವವನ್ನು ಜಲಾಶಯಕ್ಕೆ ದೀಪಾರತಿ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಎಂ.ಎಸ್.ಐ.ಎಲ್. ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಜಾನಪದ ಕಲೆಗಳ ತವರೂರು ಚಾಮರಾಜನಗರ ಜಿಲ್ಲೆ ಪ್ರವಾಸಿ ತಾಣವಾಗಿಯೂ ಹೆಸರುವಾಸಿಯಾಗಿದೆ. ವಿಶೇಷ ಅನುದಾನ ಬಳಸಿ ಸುವರ್ಣಾವತಿ ಜಲಾಶಯವನ್ನು ಅಭಿವೃದ್ಧಿಪಡಿಸಲು 2008ರಿಂದಲೂ ಬೇಡಿಕೆ ಇಡುತ್ತಿದ್ದೇನೆ. ಜಲಾಶಯವನ್ನು ಉತ್ತಮ ಪ್ರವಾಸಿ ತಾಣವಾಗಿ ಮಾರ್ಪಡಿಸಲು 43 ಕೋಟಿ ರೂ.ಗಳ ಅಂದಾಜು ಪಟ್ಟಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅನುದಾನ ಬಿಡುಗಡೆಯಾಗುವ ನಿರೀಕ್ಷೆ ಇದೆ ಎಂದರು.

ಜಿಲ್ಲಾಧಿಕಾರಿ ಶ್ರೀರೂಪ ಅವರು ಮಾತನಾಡಿ ಎರಡು ದಿನಗಳ ಕಾಲ ಆಯೋಜನೆಯಾಗಿರುವ ಜಲಸಾಹಸ ಕ್ರೀಡೋತ್ಸವದಲ್ಲಿ ಮೊದಲ ದಿನ ಯುವಕರು, ವಿವಿಧ ಕಾಲೇಜು ವಿದ್ಯಾರ್ಥಿಗಳು ಮತ್ತು ಎರಡನೇ ದಿನ ಸಾರ್ವಜನಿಕರು ಪಾಲ್ಗೊಳ್ಳಬಹುದಾಗಿದೆ. ಜಲಸಾಹಸ ಕ್ರೀಡೆ ಆಯೋಜನೆ ಕ್ರೀಡಾಪಟುಗಳು ಹೊರಹೊಮ್ಮಲು ಉತ್ತಮ ವೇದಿಕೆಯಾಗಲಿದೆ. ಕ್ರೀಡೆಯಲ್ಲಿ ಭಾಗವಹಿಸಲು ತರಬೇತಿಯೂ ಅಗತ್ಯವಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ. ಸುರೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡಮಿಯ ಪ್ರಶಿಕ್ಷಕರಾದ ಶಬ್ಬೀರ್, ದಿನೇಶ್ ಎಸ್. ಸುವರ್ಣಾ, ಅಟ್ಟುಗೂಳಿಪುರ ಗ್ರಾಮ ಪಂಚಾಯತ್ ಕಾರ್ಯದರ್ಶಿ ಧರ್ಮರಾಜ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



### ರಾಜ್ಯಮಟ್ಟದಲ್ಲಿ ಜಲಸಾಹಸ ಕ್ರೀಡೆ ಪ್ರಚಲಿತವಾಗಲಿ

**ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ ಅವರು ಮಾತನಾಡಿ ಜಿಲ್ಲೆಯಲ್ಲಿ ಸಾಕಷ್ಟು ಕ್ರೀಡಾಪಟುಗಳಿದ್ದು, ಕ್ರೀಡೆಗೆ ಪ್ರೇರೇಪಿಸಲು ಜಲಸಾಹಸ ಕ್ರೀಡೆ ಸಹಕಾರಿಯಾಗಿದೆ. ರಾಜ್ಯಮಟ್ಟದಲ್ಲಿ ಜಲಸಾಹಸ ಕ್ರೀಡೆ ಪ್ರಚಲಿತವಾಗಬೇಕು. ಜಲ ಸಾಹಸ ಕ್ರೀಡೆಯನ್ನು ಜಿಲ್ಲೆಯಲ್ಲಿ ಹೆಚ್ಚಾಗಿ ಆಯೋಜಿಸಬೇಕು. ಜಿಲ್ಲೆಯ ಯುವಕರು ಹಾಗೂ ಸಾರ್ವಜನಿಕರು ಜಲಸಾಹಸ ಕ್ರೀಡೆಯ ಸದುಪಯೋಗ ಪಡೆಯುವಂತೆ ಸಲಹೆ ಮಾಡಿದರು.**

### ಜಲ ಸಾಹಸ ಕ್ರೀಡೆಗೆ ಉತ್ತಮ ವಾತಾವರಣ

**ಜಲ ಸಾಹಸ ಕ್ರೀಡೆಗೆ ಜಿಲ್ಲೆಯಲ್ಲಿ ಉತ್ತಮ ವಾತಾವರಣವಿದೆ. ಸುವರ್ಣಾವತಿ ಜಲಾಶಯ ಸೇರಿದಂತೆ ಸುತ್ತಮುತ್ತಲಿನ ಕೆರೆಗಳು ತುಂಬಿದರೆ ಜಲ ಸಾಹಸ ಕ್ರೀಡೆಗೆ ಅನುಕೂಲವಾಗಲಿದೆ. ಕ್ರೀಡೋತ್ಸವದಲ್ಲಿ ಸಾರ್ವಜನಿಕರು, ಯುವಜನರು ಹೆಚ್ಚಾಗಿ ಪಾಲ್ಗೊಂಡು ಮುಂದಿನ ದಿನಗಳಲ್ಲಿ ಜಲಸಾಹಸ ಕ್ರೀಡೆ ಜಿಲ್ಲೆಯಲ್ಲಿ ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಈಜುಕೊಳ (ಸ್ವಿಮ್ಮಿಂಗ್ ಫೂಲ್) ನಿರ್ಮಾಣಕ್ಕಾಗಿ 15 ಕೋಟಿ ಅಂದಾಜುಪಟ್ಟಿ ತಯಾರಿಸಲಾಗಿದೆ ಎಂದು ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಇದೇ ವೇಳೆ ತಿಳಿಸಿದರು.**

## ನಾಳೆ ಎಸ್.ಸಿ. ಎಸ್.ಟಿ ಮುಖಂಡರ ಕುಂದು ಕೊರತೆ ಸಭೆ



ಚಾಮರಾಜನಗರ: ಪೊಲೀಸ್ ಇಲಾಖೆ ವತಿಯಿಂದ ಎಸ್.ಸಿ, ಎಸ್.ಟಿ. ಮುಖಂಡರ ಕುಂದು ಕೊರತೆ ಸಭೆಯನ್ನು ಫೆ. 8ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲೆಯ ಎಲ್ಲಾ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ (ಎಸ್.ಸಿ. ಎಸ್.ಟಿ) ಜನಾಂಗದವರು ಈ ಸಭೆಯನ್ನು ಸದುಪಯೋಪಡಿಸಿಕೊಳ್ಳಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ ಎಂ.ಮುತ್ತುರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಿರತೆ ಸೆರೆ



**ಅಂತರಸಂತೆ:** ಕಾಡಂಚಿನ ಗ್ರಾಮಗಳಲ್ಲಿ ಜಾನುವಾರುಗಳನ್ನು ಬಲಿಪಡೆದು ರೈತರ ಆತಂಕಕ್ಕೆ ಕಾರಣವಾಗಿದ್ದ ಚಿರತೆಯನ್ನು ಅರಣ್ಯ ಇಲಾಖೆ ಸೆರೆ ಹಿಡಿದಿದೆ.

ಎಚ್.ಡಿ.ಕೋಟೆ ತಾಲೂಕಿನ ಎನ್.ಬೆಳತ್ತೂರು ಗ್ರಾಮದ ಹಳೆ ಗೇಟ್ ಬಳಿ ರೈತ ಯೋಗೇಶ್ ಎಂಬವರ ತೋಟದಲ್ಲಿ 4 ವರ್ಷದ ಗಂಡು ಚಿರತೆ ಸೆರೆಯಾಗಿದೆ.

ಕಳೆದ 20 ದಿನಗಳ ಹಿಂದೆ ಅರಣ್ಯ ಇಲಾಖೆಯ ರೈತರ ಜಾನುವಾರುಗಳನ್ನು ಬಲಿಪಡೆದು ಉಪಟಳ ನೀಡುತ್ತಿದ್ದ ಚಿರತೆ ಸೆರಿಗಾಗಿ ಯೋಗೇಶ್ ಅವರ ಜಮೀನಿನಲ್ಲಿ ಬೋನು ಇರಿಸಿದ್ದರು. ಈ ಬೋನಿಗೆ ಮಂಗಳವಾರ ರಾತ್ರಿ ಚಿರತೆ ಸೆರೆಯಾಗಿದೆ. ಸೆರೆಯಾದ ಚಿರತೆಯನ್ನು ಪಶು ವೈದ್ಯಾಧಿಕಾರಿ ಡಾ.ರಮೇಶ್ ಅರವಳಿಕೆ ಚುಚ್ಚು ಮದ್ದು ನೀಡಿ, ಬೋನಿನಿಂದ ಹೊರತಂದು ಚಿರತೆಗೆ ರೆಡಿಯೊ ಕಾಲರ್ ಅಳವಡಿಸಿದ್ದು, ಚಿರತೆಯನ್ನು ಸುರಕ್ಷಿತವಾಗಿ ಅರಣ್ಯಕ್ಕೆ ಬಿಡುಗಡೆ ಮಾಡಲಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

## ಸಹಕಾರ ವಿಭಾಗಕ್ಕೆ ಟಿ. ಎಲ್.ಸ್ವಾಮಿ ಅಧ್ಯಕ್ಷ



ಎಚ್.ಡಿ.ಕೋಟೆ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆದೇಶದ ಮೇರೆಗೆ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ಎಚ್.ಡಿ.ಕೋಟೆ ಬ್ಲಾಕ್ ಕಾಂಗ್ರೆಸ್ ಸಹಕಾರ ಘಟಕದ ಅಧ್ಯಕ್ಷರಾಗಿ ತೊರವಳ್ಳಿ ಗ್ರಾಮದ ಟಿ. ಎಲ್.ಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಅನಿಲ್ ಚಿಕ್ಕಮಾದು, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ನೇತೃತ್ವದಲ್ಲಿ ಮುಂಬರುವ ಚುನಾವಣೆಗಳಲ್ಲಿ ಪಕ್ಷದ ಬಲವರ್ಧನೆಗೆ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಸಹಕಾರ ವಿಭಾಗದ ರಾಜ್ಯಾಧ್ಯಕ್ಷ ಧನರಾಜ್ ಎಸ್ ತಾಳಮ್ ಪಳ್ಳಿ, ಮೈಸೂರು ಜಿಲ್ಲಾಧ್ಯಕ್ಷ ಸಿದ್ದಯ್ಯ ಆದೇಶಿಸಿದ್ದಾರೆ.

# ಶರಣ ಸಾಹಿತ್ಯ ಪರಿಷತ್ ಒಂದು ಸೇವಾ ಸಂಸ್ಥೆ



ಚಾಮರಾಜನಗರ: ರೋಟರಿ ಸಂಸ್ಥೆಯ ತರವೇ ಶರಣ ಸಾಹಿತ್ಯ ಪರಿಷತ್ ಒಂದು ಸೇವಾ ಸಂಸ್ಥೆಯಂತೆ ಕಾರ್ಯನಿರ್ವಹಿತ್ತಿದೆ ಎಂದು ಬಿ.ಕೆ. ರವಿಕುಮಾರ್ ಹೇಳಿದರು.

ನಗರದ ರೋಟರಿ ಭವನದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ರೋಟರಿ ಸಂಸ್ಥೆ ಸಹಯೋಗದಲ್ಲಿ ನಡೆದ ಶ್ರೀಮಲ್ಲಪ್ಪ ಸ್ಮರಣಾರ್ಥ ದತ್ತಿ ಉಪನ್ಯಾಸ ಸೇವೆ ಮತ್ತು ಶರಣರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಮಾನವ ಹಣದಿಂದ ಏನೆಲ್ಲ ಸಂಪಾದಿಸಿದರೂ ಸುಖ ಶಾಂತಿ ನೆಮ್ಮದಿಯನ್ನು ಸಂಪಾದಿಸಲು ಸಾಧ್ಯವಿಲ್ಲ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿಕೆರವಿಕುಮಾರ್ ಅಭಿಪ್ರಾಯಪಟ್ಟರು. ಅವರು ಅಖಿಲ ಭಾರತ ಶರಣ ಸಾಹಿತ್ಯಪರಿಷತ್ ಹಾಗೂ ರೋಟರಿ ಸಂಸ್ಥೆ ಸಹಯೋಗ ದಲ್ಲಿ ಹಮ್ಮಿಕೊಂಡಿದ್ದ ಸೇವೆ ಮತ್ತು ಶರಣರು ಎಂಬ ದತ್ತಿ ಉಪನ್ಯಾಸ ಕಾರ್ಯ ಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು ಹಣ ಇದ್ದ ರೆ ಎಲ್ಲವೂ ಎಂಬ ಭಾವನೆ ಇದೆ ಮನಸ್ಸಿಗೆ ಅಗತ್ಯವಾದ ಸುಖ ಶಾಂತಿ ನೆಮ್ಮದಿಯನ್ನು ಶ್ರೀಮಂತಿಕೆಯಿಂದ ಸಂಪಾದಿಸಲು ಆಗದು ನಾವು ಮಾಡುವ ಕಾಯಕ ದಾನ ಧರ್ಮ ಗಳ ಸೇವೆಯ ಮೂಲಕ ನೆಮ್ಮದಿಯ ಬದುಕು ಕಟ್ಟಾ ಬಹುದು ಶರಣರು ತಮ್ಮ ಕಾಯಕದ ಮೂಲಕವೇ ಸಮ ಸಮಾಜ ಕಟ್ಟಿ ಆದರ್ಶಪ್ರಾಯ ರಾದರು ಎಂದು ಹೇಳಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಒಂದು ಸಮಾಜಕ್ಕೆ ಸೀಮಿತವಾಗಿಲ್ಲ. ಮಡಿವಂತಿಕೆ' ಸಂಘ ಸಂಸ್ಥೆ ಅಲ್ಲ . ಎಲ್ಲ ಸಮಾಜದ ಶರಣರು ಬಿತ್ತಿದ . ಚಿಂತನೆಗಳು, ಆದರ್ಶಗಳನ್ನು ಇಂದಿನ ಯುವಪೀಳಿಗೆಗೆ ವರ್ಗಾಯಿಸಬೇಕು. ಅವರಲ್ಲಿ ಪ್ರಚುರಪಡಿಸಬೇಕು. ಇಂತಹ ಜಂಜಾಟಗಳ ನಡುವೆ ಶಾಂತಿ, ಸೌಹಾರ್ದತೆ, ಪ್ರೀತಿ, ವಿಶ್ವಾಸ ಇಂತಹ ಗುಣಗಳನ್ನು ಗಳಿಸಬೇಕು ಎಂಬ ಸದುದ್ದೇಶದಿಂದ ಕೆಲಸ ಮಾಡುತಿದೆ ಎಂದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಿಕಟಪೂರ್ವ ಅಧ್ಯಕ್ಷ ಬಿ ಎಸ್ ವಿನಯ್ ಮಾತನಾಡಿದರು. ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ರೋಟರಿ ಕಾರ್ಯದರ್ಶಿ ಕೆಂಪನಪುರ ಸಿದ್ದರಾಜು, ಖಜಾಂಚಿ ಆರ್ . ಎಂ.ಸ್ವಾಮಿ ಕದಳಿ ಮಹಿಳವೇದಿಕೆಯ ಅಧ್ಯಕ್ಷೆ ವಸಂತಮ್ಮ ಮಾಜಿ ಶರಣ ಸಾಹಿತ್ಯಪರಿಷತ್ ಅಧ್ಯಕ್ಷ ದುಗ್ಗಹಟ್ಟಿ ಮಲ್ಲಿಕಾರ್ಜುನ ತಾಲ್ಲೂಕು ಅಧ್ಯಕ್ಷ ಆರ್ ಎಸ್ ಲಿಂಗರಾಜು ವೀರಶೈವ ಲಿಂಗಾಯತ ನೌಕರರ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ ಆರ್ ಎಸ್ ನಾಗಾರ್ಜುನ ಉಡಿಗಾಲ ಕುಮಾರಸ್ವಾಮಿ ಮೂಡ್ಲುಪುರ ನಂದೀಶ್ ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಶಮಿತ್ ಕುಮಾರ್ ಎಪಿ ಎಂಸಿ ಮಾಜಿ ಅಧ್ಯಕ್ಷ ಸೋಮೇಶ್ ಸೇರಿದಂತೆ ಅನೇಕರು ಹಾಜರಿದ್ದರು

# ಹನುಮಾನ್ ಚಾಲೀಸ್ ಪಾರಾಯಣ ರಥಯಾತ್ರೆ



ಮೈಸೂರು: ಶ್ರೀ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞ ಇದೇ ತಿಂಗಳು 14 ರಂದು ಮಹಾರಾಜ ಮೈದಾನದಲ್ಲಿ ನಡೆಯಲಿರುವ ಹಿನ್ನೆಲೆಯಲ್ಲಿ ಪ್ರಚಾರ ರಥಕ್ಕೆ ಕೃಷ್ಣಮೂರ್ತಿಪುರಂ ಶ್ರೀ ರಾಘವೇಂದ್ರ ಸ್ವಾಮಿ ಮಠದ ಮುಂದೆ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ಕೃಷ್ಣರಾಜ ಕ್ಷೇತ್ರದ ಶಾಸಕರಾದ ಟಿ.ಎಸ್ ಶ್ರೀವತ್ಸ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು ಆಶ್ರಮವು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಹೆಸರುವಾಸಿಯಾಗಿದೆ, ಹಾಗೆ 14ರಂದು ನಡೆಯುವ ಶ್ರೀ ಹನುಮಾನ್ ಚಾಲೀಸ್ ಕಾರ್ಯಕ್ರಮ ಮೈಸೂರಿನಲ್ಲಿ ನಡೆಯುತ್ತಿರುವುದು ಒಂದು ಹೆಮ್ಮೆಯ ಸಂಗತಿ ಹಾಗೂ ಕೃಷ್ಣರಾಜ ಕ್ಷೇತ್ರದ ನಾಗರಿಕರು ಎಲ್ಲರೂ ಪಾರಾಯಣದಲ್ಲಿ ಪಾಲ್ಗೊಂಡು ಹನುಮಂತನ ಕೃಪೆಗೆ ಪಾತ್ರರಾಗಬೇಕೆಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಉತ್ತರಾದಿ ಮಠದ ಅನಿರುದ್ಧ ಆಚಾರ್, ರಾಜ್ಯ ಬಿಜೆಪಿ ಪ್ರಾಕೋಷ್ಟದ ಸಹ ಸಂಯೋಜಕ ಪ್ರಾಣೇಶ್, ಕಾಂಗ್ರೆಸ್ ಮುಖಂಡರಾದ ನವೀನ್ ಕುಮಾರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮೈಸೂರು ಪ್ರತಿನಿಧಿ ಡಾ. ಲಕ್ಷ್ಮಿ ದೇವಿ, ನಗರ ಸಂಚಾಲಕ ಸತ್ಯನಾರಾಯಣ

ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷರಾದ ಕೆ. ಆರ್ ಸತ್ಯನಾರಾಯಣ, ಮಹಾಸಭಾ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ರಘುರಾಮ್ ವಾಜಪೇಯಿ, ಟಿ.ಎಸ್ ಅರುಣ್, ಅಜಯ್ ಶಾಸ್ತ್ರೀ, ವಾಸುದೇವ ಮೂರ್ತಿ, ಸುಚಿಂದ್ರ, ಚಕ್ರಪಾಣಿ ಆಶ್ರಮದ ರಮೇಶ್ ಬಾಬು, ರವಿ, ಸಂತೋಷ್ ಇನ್ನಿತರರು ಉಪಸ್ಥಿತರಿದ್ದರು.

### 1,31,783 ಮಕ್ಕಳಿಗೆ ಮಾತ್ರೆ ವಿತರಣೆ

# 10ರಂದು ಜಂತುಹುಳು ನಿವಾರಣ ಕಾರ್ಯಕ್ರಮ



ಮಡಿಕೇರಿ:–ಮಕ್ಕಳಿಗೆ ಹುಟ್ಟಿನಿಂದ 16 ವ?ರ್ಗಗಳ ವರೆಗೆ ನೀಡುವ ವಿವಿಧ ಲಸಿಕೆಗಳನ್ನು ನೀಡಿರುವ ಬಗ್ಗೆ ಪ್ರಗತಿ ಪರಿಶೀಲನೆ ಮಾಡಲಾಯಿತು. ಈ ಸಂದರ್ಭದಲ್ಲಿ ವಿರಾಜಪೇಟೆ ಮತ್ತು ಮಡಿಕೇರಿ ತಾಲೂಕಿನಲ್ಲಿ ನಿಗದಿತ ಗುರಿ ತಲುಪಿರುವುದಿಲ್ಲ, ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿ ಎಲ್ಲಾ ಮಕ್ಕಳಿಗೂ ನಿಗದಿತ ಲಸಿಕೆಗಳನ್ನು ನೀಡಲು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಸೂಚಿಸಿದರು.

ನಂತರ ವಿಪಿಡಿ ಸರ್ವೇಕ್ಷಣಾ ಕಾರ್ಯಕರ್ಮದಲ್ಲಿ ನಿಗದಿತ ಗುರಿ ತಲುಪಿರುವುದಾಗಿ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಅವರು ಮಾಹಿತಿ ನೀಡಿದರು. ರಾಷ್ಟ್ರೀಯ ಜಂತುಹುಳು ನಿವಾರಣ ಕಾರ್ಯಕ್ರಮವು ಜಿಲ್ಲೆಯಲ್ಲಿ ಫೆಬ್ರವರಿ, 10 ರಂದು ನಡೆಯಲಿದ್ದು, 1 ರಿಂದ 19 ವ?ರ್ಗದೊಳಗಿನ ಎಲ್ಲಾ ಮಕ್ಕಳಿಗೆ ಜಂತುಹುಳು ನಿವಾರಣೆಯ ಅಲ್ಬೆಂಡಜೋಲ್ ಮಾತ್ರೆ ವಿತರಿಸಬೇಕು. ಅರ್ಹ ಮಕ್ಕಳು ಇದರಿಂದ ಹೊರಗುಳಿಯಬಾರದು ಎಂದು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸರ್ಕಾರದ ನಿರ್ದೇಶನದಂತೆ ಕಾರ್ಯಕ್ರಮ ಅನುಷ್ಠಾನಕ್ಕೆ ಕ್ರಮವಹಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಆರ್‌ಸಿಎಚ್ ಅಧಿಕಾರಿ ಡಾ. ಮಧುಸೂದನ್ ಅವರು ಮಾತನಾಡಿ, ಜಂತು ಹುಳು ಇರುವ ಮಕ್ಕಳು ಅಪೌಷ್ಠಿಕತೆ ಮತ್ತು ರಕ್ತಹೀನತೆಯಿಂದ ಬಳಲುತ್ತಾರೆ. ಆದರಿಂದ ಅವರ ದೈಹಿಕ, ಮಾನಸಿಕ ಬೆಳವಣಿಗೆ ಕುಂಠಿತವಾಗುವುದರೊಂದಿಗೆ ಶೈಕ್ಷಣಿಕ ಬೆಳವಣಿಗೆ ಸಹ ಕಡಿಮೆಯಾಗುವ ಕಾರಣದಿಂದ ಎಲ್ಲಾ 1 ರಿಂದ 19 ವ?ರ್ದ ಮಕ್ಕಳು ಜಂತು ಹುಳು ನಿವಾರಣೆ ಮಾತ್ರೆಗಳನ್ನು ತೆಗೆದುಕೊಳ್ಳಬೇಕು ಎಂದರು.

ರಾಷ್ಟ್ರೀಯ ಜಂತು ಹುಳು ನಿವಾರಣಾ ಕಾರ್ಯಕ್ರಮಕ್ಕೆ (ಎನ್‌ಡಿಡಿ) ಕೊಡಗು ಜಿಲ್ಲೆಯಲ್ಲಿ 1 ರಿಂದ 19 ವ?ರ್ದೊಳಗಿನ ಮಕ್ಕಳ ಗುರಿ 1,31,783 ಹೊಂದಿದ್ದು, ಇದರಲ್ಲಿ ಅಂಗನವಾಡಿ ಮಕ್ಕಳು 24,408, ಅಂಗನವಾಡಿಯಿಂದ ಹೊರಗುಳಿದ ಮಕ್ಕಳು 1,448, ಎಲ್ಲಾ ಸರಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಯಲ್ಲಿರುವ ಮಕ್ಕಳು 82,232 ಹಾಗೂ ಪದವಿ ಪೂರ್ವ ತರಗತಿಯಲ್ಲಿ 10,760, ಹಾಗೆಯೇ ಪದವಿ ಕಾಲೇಜಿನ 6,517, ಐಟಿಐ/ಡಿಪ್ಲೋಮಾ 2,916 ವಿದ್ಯಾರ್ಥಿಗಳಿಗೆ ಮಾತ್ರೆಗಳನ್ನು ವಿತರಿಸಲು ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಈಗಾಗಲೇ ನೀಡಲಾಗಿದೆ ಎಂದರು. ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ನಗರಸಭೆಯ ಅಧಿಕಾರಿಗಳು ಹಾಗೂ ಇತರೆ ಇಲಾಖಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಇದ್ದರು.

## ಸಂಕ್ಷಿಪ್ತ ಸುದ್ದಿ

### ಇಂದಿನಿಂದ ವಿದ್ಯಾರ್ಥಿ ಜಾನಪದ ಲೋಕೋತ್ಸವ



**ರಾಮನಗರ:** ಕರ್ನಾಟಕ ಜಾನಪದ ಪರಿಷತ್ತು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ವಿದ್ಯಾರ್ಥಿ ಜಾನಪದ ಲೋಕೋತ್ಸವ–2026 ಅನ್ನು ಫೆ.7 ಶನಿವಾರ ಹಾಗೂ ಫೆ.8ರ ಭಾನುವಾರ ರಾಮನಗರ ಜಾನಪದ ಲೋಕದಲ್ಲಿ ಆಯೋಜಿಸಲಾಗಿದೆ.

ಫೆ. 7ರ ಶನಿವಾರ ಬೆಳಿಗ್ಗೆ 10–30ಕ್ಕೆ ಶ್ರೀ ಆದಿಚುಂಚನಗಿರಿ ಶಾಖಾ ಮಠಾಧೀಶ ಶ್ರೀಅನ್ನದಾನೇಶ್ವರನಾಥ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಚಲನಚಿತ್ರ ಮತ್ತು ರಂಗಭೂಮಿಯ ಪ್ರಖ್ಯಾತ ನಿರ್ದೇಶಕ ಡಾ.ಟಿ.ಎಸ್. ನಾಗಾಭರಣ ಅವರು ಲೋಕೋತ್ಸವ ಉದ್ಘಾಟಿಸುವರು.

ಮುಖ್ಯಮಂತ್ರಿಗಳ ಪತ್ರಿಕಾ ಕಾರ್ಯದರ್ಶಿಗಳಾದ ಕೆ.ವಿ. ಪ್ರಭಾಕರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಕೆ. ರಾಜು ಅವರು ಕರಕುಶಲ ಮೇಳ ಉದ್ಘಾಟಿಸುವರು. ರಾಮನಗರ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಎಚ್.ಎ. ಇಕ್ಬಾಲ್ ಹುಸೇನ್ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡುವರು ಹಾಗೂ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಅವರು ಸ್ವಾಗತಿಸುವರು.

ಅಂದು ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 9.30ರ ವರೆಗೆ ಜನಪದ ಕಲಾಪ್ರದರ್ಶನ ಆಯೋಜಿಸಲಾಗಿದೆ. ರಾತ್ರಿ 8 ರಿಂದ 9 ಗಂಟೆಯವರೆಗೆ ಜನಪದ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಕೆರೆಗೆ ಹಾರ ಜನಪದ ರೂಪಕ ಏರ್ಪಡಿಸಲಾಗಿದೆ.

ಫೆ.08ರ ಭಾನುವಾರ ಬೆಳಿಗ್ಗೆ 10.30ಕ್ಕೆ ಯುವಜನರಲ್ಲಿ ಜನಪದ ಗಾಯನ ಮತ್ತು ಕಲೆಗಳ ಸಂವರ್ಧನೆ ಕುರಿತು ಚರ್ಚೆ–ಸಂವಾದ ಆಯೋಜಿಸಲಾಗಿದೆ.

ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡುವರು. ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಕೆ. ಚಿನ್ನಪ್ಪಗೌಡ ಅವರು ಆಶಯ ನುಡಿವರು. ಬೆಂಗಳೂರು ದಕ್ಷಿಣ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ. ಸತೀಶ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಹಿರಿಯ ರಂಗಕರ್ಮಿ ಹಾಗೂ ಜನಪದ ಸಂವರ್ಧಕರಾದ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಅಧ್ಯಕ್ಷತೆ ವಹಿಸುವರು.

ಅಂದು ಮಧ್ಯಾಹ್ನ 1.30ಕ್ಕೆ ಜನಪದ ಗೀತ ಗಾಯನೋತ್ಸವ–2026 ಆಯೋಜಿಸಲಾಗಿದೆ. ಸಂಜೆ 4 ರಿಂದ 4.30ರವರೆಗೆ ಬುಡಕಟ್ಟು ಕಲೆಗಳ ಆಕರ್ಷಣೆ ಆಯೋಜಿಸಲಾಗಿದೆ. ಸಂಜೆ 4.30 ರಿಂದ 5.30 ರವರೆಗೆ ಆಧುನಿಕ ಗಾಯಕರ ಜನಪದ ಗೀತ ಸಂಭ್ರಮ ಏರ್ಪಡಿಸಲಾಗಿದೆ.

ಫೆ.8ರ ಭಾನುವಾರ ಸಂಜೆ 5.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದ್ದು, ಕರ್ನಾಟಕ ಜಾನಪದ ಪರಿಷತ್ತಿನ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಹಾಗೂ ಮಹಾ ಪೋಷಕರು ಮತ್ತು ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಸಾರಿಗೆ ಮತ್ತು ಮುಜರಾಯಿ ಇಲಾಖೆ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಪ್ರಶಸ್ತಿ ಪ್ರದಾನ ಮಾಡುವರು. ಆಂಧ್ರಪ್ರದೇಶದ ವಾಣಿಜ್ಯ ತೆರಿಗೆ ಇಲಾಖೆಯ ಪ್ರಧಾನ ಆಯುಕ್ತರು ಹಾಗೂ ಲೇಖಕರಾದ ಜಯರಾಮ್ ರಾಯ್‌ಪುರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡುವರು. ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಅವರು ಸ್ವಾಗತಿಸುವರು.

ರಾತ್ರಿ 7.30 ರಿಂದ 9 ಗಂಟೆಯವರೆಗೆ ಮಂಡ್ಯ ಕರ್ನಾಟಕ ಸಂಘ ಪ್ರಸ್ತುತಪಡಿಸುವ ಮಕ್ಕಳ ಮೂಡಲಪಾಯ ಯಕ್ಷಗಾನ ಆಯೋಜಿಸಲಾಗಿದೆ.

## ಯುವ ಜನತೆಗೆ ಕಾನೂನಿನ ಜ್ಞಾನ ಬಹಳ ಮುಖ್ಯ: ಶಶಿಧರ್ ಶೆಟ್ಟಿ

# ಪೋಷಕರು ತಮ್ಮ ಮಕ್ಕಳ ಮೇಲೆ ನಿಗಾವಹಿಸಬೇಕು




**ಮಂಡ್ಯ:** ಯುವಜನತೆಯೂ ಕಾನೂನಿನ ಜ್ಞಾನ ಬಹಳ ಅಗತ್ಯವಾದುದು ಕಾನೂನಿನ ಮಾಹಿತಿಗಳನ್ನು ತಿಳಿದುಕೊಳ್ಳಬೇಕು. ಕಾನೂನಿನ ನಿಯಮಗಳ ಉಲ್ಲಂಘನೆಯ ಬಗ್ಗೆ ಅರಿವು ಮೂಡಿಸಬೇಕು ಎಂದು ಜಿಲ್ಲಾ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಹೆಚ್. ಶಶಿಧರ ಶೆಟ್ಟಿ ರವರು ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು, ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು ಬಾಲ ನ್ಯಾಯ ಸಮಿತಿ ಕರ್ನಾಟಕ ಉಚ್ಚ ನ್ಯಾಯಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಂಡ್ಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಕೀಲರ ಸಂಘ (ರಿ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ,ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯನ್ನು "ಬಾಲ್ಯವಿವಾಹ ಮುಕ್ತ ಮಾಡುವ ಸಂಕಲ್ಪ? ಅಭಿಯಾನದ ಅಂಗವಾಗಿ ಮಕ್ಕಳ ಸಂರಕ್ಷಣೆ ಮತ್ತು ಕಾನೂನು ಕುರಿತು ಬೃಹತ್ ತರಬೇತಿ ಕಾರ್ಯಾಗಾರ ಮಂಡ್ಯ ನಗರದ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಹೆಚ್. ಶಶಿಧರ ಶೆಟ್ಟಿ ರವರು ಕಾರ್ಯಕ್ರಮ ವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.

ಯುವಜನತೆಯು ದೇಶಕ್ಕೆ ಪ್ರೇರಣೆಯಾಗಬೇಕು ಹೊರತು ಮಾದಕ ವಸ್ತುಗಳಿಗೆ ಮೊರೆ ಹೋಗಬಾರದು.

ಇತ್ತೀಚಿನ ದಿನಗಳಲ್ಲಿ ಡ್ರಗ್ಸ್ ಗೆ ಮಕ್ಕಳು ಮೊರೆ ಹೋಗುತ್ತಿದ್ದಾರೆ ಪೋಷಕರು ಮತ್ತು ಅಧಿಕಾರಿಗಳು ಮಕ್ಕಳ ಬಗ್ಗೆ ನಿಗ ವಹಿಸಬೇಕು ಎಂದು ಹೇಳಿದರು.

ಸಾರ್ವಜನಿಕರಲ್ಲಿ ಕಾನೂನಿನ ಅರಿವಿನ ಬಗ್ಗೆ ಮಾಹಿತಿ ತಿ ಕಾನೂನಿನ ಜ್ಞಾನ ಬಹಳ ಮುಖ್ಯ ವಾಹನ ಚಲಾಯಿಸುವ ಹೆಲ್ಮೆಟ್, ಚಾಲನಾ ಪರವಾನಗಿ,ವಾಹನದ ಭದ್ರತಾ ವಿಮೆಯನ್ನು ಹೊಂದಿರಬೇಕು ಎಂದು ಹೇಳಿದರು

ಮಕ್ಕಳ ಮೇಲೆ ದೌರ್ಜನ್ಯ ನಡೆದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು. ದೇಶದಲ್ಲಿ 43% ಸಣ್ಣ ಹುಡುಗರ ಮೇಲೆ ಲೈಂಗಿಕ ದೌರ್ಜನ್ಯ ನಡೆಯುತ್ತಿದೆ. ಆದ್ದರಿಂದ ಪೋಷಕರು ಮಕ್ಕಳ ಮೇಲೆ ಜ್ಞಾನ ವಹಿಸಬೇಕು ಎಂದು ಹೇಳಿದರು.

ಬಾಲ್ಯ ವಿವಾಹ ಮುಕ್ತ ಜಿಲ್ಲೆಯನಾಗಿಸಲು ಪೋಷಕರ ಪಾತ್ರ ಬಹಳ ಮುಖ್ಯ.ಮಕ್ಕಳನ್ನು ದೇಶದ ಸಂಪತ್ತನ್ನಾಗಿ ಮಾಡಬೇಕೆ ಹೊರತು ಮಕ್ಕಳ ಆಸೆ,ಆಕಾಂಕ್ಷೆ,ಭಾವನೆಯನ್ನು ಮೊಟಕುಗೊಳಿಸಬಾರದು ಎಂದು ಹೇಳಿದರು

ಮಕ್ಕಳನ್ನು ಸಾಮಾಜಿಕ ಪಿಡುಗಿನಿಂದ ಹೊರ ತರಲು ಆಶಾ ಕಾರ್ಯಕರ್ತರ ಮಹತ್ವ ಬಹಳ ಮುಖ್ಯವಾಗಿದೆ ಹಿರಿಯರನ್ನು ಮತ್ತು ಮಕ್ಕಳನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು ಮತ್ತು ಗೌರವಿಸಬೇಕು ಎಂದು ತಿಳಿಸಿದರು

ಜಿಲ್ಲಾಧಿಕಾರಿಗಳಾದ ಡಾ. ಕುಮಾರ ರವರು ಕಾರ್ಯಕ್ರಮದ ಅಧ್ಯಕತೆಯನ್ನು ವಹಿಸಿ ಮಾತನಾಡಿ

ಪ್ರತಿ ವರ್ಷ ಸುಮಾರು 65 ರಿಂದ 70 ಬಾಲ್ಯ ವಿವಾಹ ಪ್ರಕರಣಗಳು ದಾಖಲಾಗಿದೆ ಆದರೆ ಕಳೆದ ವರ್ಷ ಕೇವಲ 14 ಪ್ರಕರಣಗಳು ಮಾತ್ರ ದಾಖಲಾಗಿವೆ ಜಿಲ್ಲೆಯಲ್ಲಿ ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಹಲವು ಕಾರ್ಯಕ್ರಮಗಳನ್ನು ಮಾಡಲಾಗಿದೆ ಎಂದು ಹೇಳಿದರು.

ಸರ್ಕಾರ, ಸಂಘ ಸಂಸ್ಥೆ, ಅಧಿಕಾರಿಗಳು, ಎಲ್ಲರೂ ಸಾರ್ವಜನಿಕರು ಜೊತೆಯಾಗಿ ಬಾಲ್ಯ ವಿವಾಹವನ್ನು ತೊಡೆದು ಹಾಕಬೇಕು ಎಂದು ಹೇಳಿದರು ಹೆಣ್ಣಿಗೆ ಸಿಗಬೇಕಾದಂತಹ ಗೌರವ, ಸ್ಥಾನಮಾನ ಎಲ್ಲವೂ ಕೂಡ ಸಿಗಬೇಕು. ಎಂದು ಹೇಳಿದರು.

ಜಿಲ್ಲಾ ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಪೋಷಕರು ಮತ್ತು ಸಮಾಜದ ಜವಾಬ್ದಾರಿ ಬಹಳ ಅಗತ್ಯ. ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಶಿಕ್ಷಣದಿಂದ ಮಾತ್ರ ಸಾಧ್ಯ. ಎಂದು ಹೇಳಿದರು.

ಬಾಲ್ಯ ವಿವಾಹ ಕುರಿತು ಅಂಗನವಾಡಿಕಾರ್ಯಕರ್ತರು ಹಾಗೂ ಆಶಾಕಾರ್ಯಕರ್ತೆಯರು ಗ್ರಾಮೀಣ ಪ್ರದೇಶಗಳಲ್ಲಿ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಮಾಡಬೇಕು ಎಂದು ಸೂಚಿಸಿದರು. ಬಾಲ್ಯ ವಿವಾಹ ಪದ್ಧತಿಯನ್ನು ಕಾನೂನಿನಿಂದ ಮಾತ್ರ ಹೋಗಲಾಡಿಸಲು ಸಾಧ್ಯವಿಲ್ಲ ಪೋಷಕರ ಮಾನವೀಯತೆ, ಹೃದಯವಂತಿಕೆದಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,ಪ್ರಭಾರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರಾದ ಶಿವಪ್ರಸಾದ್ ಮಾತನಾಡಿ ಎಲ್ಲರಿಗೂ ಸಮಾನವಾದ ಹಕ್ಕುಗಳು ಇವೆ. ಮಕ್ಕಳ ಪರಿಪೂರ್ಣ ಬೆಳವಣಿಗೆ ತುಂಬಾ ಮುಖ್ಯ, ಮಕ್ಕಳ ಭಾವನೆಗಳನ್ನು ಕಟ್ಟಿ ಹಾಕಬಾರದು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಕೆ.ಆರ್. ನಂದಿನಿ ಮಾತನಾಡಿ ಕಾನೂನಿನ ನಿಯಮಗಳನ್ನು ಪಾಲಿಸಬೇಕು. ಯುವಜನತೆ ಕಾನೂನಿನ ನಿಯಮಗಳನ್ನು ತಿಳಿದುಕೊಳ್ಳುವುದು ತುಂಬಾ ಅಗತ್ಯ ಎಂದು ಹೇಳಿದರು.

ಗ್ರಾಮೀಣ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯ ಪಾತ್ರ ಬಹಳ ಮುಖ್ಯ.ಸಾಮಾಜಿಕವಾಗಿ ಆರ್ಥಿಕವಾಗಿ,ಧಾರ್ಮಿಕವಾಗಿ ಜಿಲ್ಲೆಯು ಶ್ರೀಮಂತ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿ ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿಸಬೇಕು ಪೋಷಕರು ಮಕ್ಕಳ ಪ್ರತಿಭೆಯನ್ನು ಗುರುತಿಸಬೇಕು ಮತ್ತು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು.ಎಂದು ಹೇಳಿದರು.

ಗಂಡು – ಹೆಣ್ಣು ಎಂಬ ತಾರತಮ್ಯವಿಲ್ಲದೆ ಎಲ್ಲರಿಗೂ ಸಮಾನವಾದ ರೀತಿಯಲ್ಲಿ ನೋಡಬೇಕು ಹೆಣ್ಣು ಮಕ್ಕಳನ್ನ ದೇಶವನ್ನು ಪ್ರತಿನಿಧಿಸುವಂತಹ ಸ್ಥಾನಮಾನವನ್ನು ದೊರಕಿಸಬೇಕು ಎಂದು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಆನಂದ.ಎಂ ರವರು ಮಾತನಾಡಿ ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಜಿಲ್ಲಾಯಾಗಿ ಮಾಡಬೇಕು ಮತ್ತು ಭ್ರೂಣ ಹತ್ಯೆಯನ್ನು ತಡೆಯಬೇಕು.ಹೆಣ್ಣು ಮಕ್ಕಳ್ನನು ಗೌರವಿಸಬೇಕು ಮಕ್ಕಳನ್ನು ಪ್ರೇರಣೆ ಆಗುವಂತೆ ಮಾಡಬೇಕು.ವ್ಯಾಜ್ಯ ಮುಕ್ತ ಜಿಲ್ಲೆಯಾಗಿ ಮಾಡಬೇಕು ದೋರಣೆಯನ್ನು ತೊಲಗಿಸಬೇಕು ಸಾರ್ವಜನಿಕರು ಭಾರತ ಸಂವಿಧಾನ ಬದ್ಧವಾಗಿ ಕಾರ್ಯವನ್ನು ನಿರ್ವಹಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ವೆಂಕಟೇಶ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ ಜಂಟಿ ನಿರ್ದೇಶಕರಾದ ನಿಶ್ಚಲ್ ಬಿ.ಹೆಚ್, ಮಕ್ಕಳ ರಕ್ಷಣಾ ನಿರ್ದೇಶನಾಲಯ ನಿರ್ದೇಶಕರಾದ ಡಾ.ಸ್ನೇಹ ಸಿ.ವಿ ವಕೀಲರ ಸಂಘ,ಅಧ್ಯಕ್ಷರಾದ ಸತ್ಯಾನಂದ.ಟಿ.ಎಸ್. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಉಪ ನಿರ್ದೇಶಕರಾದ ಆಶಾ, ರಶ್ಮಿ ರವರು ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

# ಮೈತ್ರಿ–ಸಂಘರ್ಷಕ್ಕೀಡಾಗುವ ಹೇಳಿಕೆ ಬೇಡ



**ಮಂಡ್ಯ:** ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ಮೈತ್ರಿಯು ಸದೃಢವಾಗಿದ್ದು, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಗೌಡ ಅವರು ಎನ್‌ಡಿಎ ಮೈತ್ರಿಕೂಟದ ಸಂಘರ್ಷಕ್ಕೀಡಾಗುವ ಹೇಳಿಕೆ ನೀಡಬಾರದು ಎಂದು ಕೆ.ಆರ್.ಪೇಟೆ ಶಾಸಕ ಹೆಚ್.ಟಿ.ಮಂಜು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದಲ್ಲಿ ಬಿಜೆಪಿಯೊಂದಿಗಿನ ಮೈತ್ರಿ ಶಾಶ್ವತವಾಗಿ ಮುಂದುವರೆಯಲಿದೆ. ಇದಕ್ಕೆ ಧಕ್ಕಯಾಗುವಂತೆ ಯಾರಾದರೂ ಪ್ರಚೋಧಿಸಿದರೆ ಪ್ರತಿಕ್ರಿಯೆ ನೀಡದಂತೆ ಪಕ್ಷದ ವರಿಷ್ಠರು ಸೂಚನೆ ನೀಡಿದ್ದಾರೆ. ಆದರೆ ಇತ್ತೀಚೆಗೆ ಪಕ್ಷದ ನಾಯಕ ನಿಖಿಲ್ ಕುಮಾರಸ್ವಾಮಿ ಅವರ ವಿರುದ್ಧ ಕೆ.ಸಿ.ನಾರಾಯಣಗೌಡ ಅವರ ಹೇಳಿಕೆ ಸರಿಯಾದುದಲ್ಲ ಎಂದು ಹೇಳಿದರು.

ಅವರು ಮೈತ್ರಿ ಪಕ್ಷದ ಮುಖಂಡರು, 2013ರಲ್ಲಿ ಜೆಡಿಎಸ್‌ನಿಂದ ಮೊದಲ ಬಾರಿಗೆ ಸ್ಪರ್ಧಿಸಿ ಶಾಸಕರಾದರು, 2018ರಲ್ಲಿ ನಿಖಿಲ್ ಅವರು ರಾಜಕೀಯ ಪ್ರವೇಶ ಮಾಡದಿದ್ದರೂ ಕೆ.ಸಿ.ನಾರಾಯಣಗೌಡ ಅವರನ್ನು ಪಕ್ಷದ ಅಭ್ಯರ್ಥಿ ಎಂದು ಘೋಷಿಸಿದ್ದರು ಎಂಬುದನ್ನು ಮರೆಯಬಾರದು. ಹೆಚ್.ಡಿ.ದೇವೇಗೌಡರ ಕುಟುಂಬದ ನೆರವಿಲ್ಲದೇ ರಾಜಕೀಯವಾಗಿ ಬೆಳೆಯಲು ಸಾಧ್ಯವಿರಲಿಲ್ಲ. ಅವರು ನಡೆದುಬಂದ ಹಾದಿಯನ್ನು ಮರೆಯಬಾರದು. ಅವರು ಅನುಭವಿ ಹಿರಿಯ ರಾಜಕಾರಣಿಗಳು, ಪದೇ ಪದೇ ಈ ರೀತಿಯ ಹೇಳಿಕೆ ನೀಡಬಾರದು ಎಂದರು.

ಕಳೆದ ಜ.16 ರಂದು ಗವಿಗಂಗಾಧರಸ್ವಾಮಿ ದೇವಾಲಯದ ಬಳಿ ಕಲ್ಯಾಣಿ ಉದ್ಘಾಟನೆ ವೇಳೆ ತಾವು ತಂದ ಅನುದಾನದಿಂದ ಕಾಮಗಾರಿ ನಡೆದಿದೆ ಎಂದಿದ್ದರು. ಅದಕ್ಕೆ ಸಹಮತ ವ್ಯಕ್ತಪಡಿಸಿ ಕಾಂಗ್ರೆಸ್ ಸರಕಾರದಿಂದ ಅವರ ಅವಧಿಯ 37 ಕೋಟಿ ರೂ.ಗಳ ಅನುದಾನ ಹಿಂಪಡೆಯಲಾಗಿದೆ ಎಂಬುದನ್ನು ಸೂಕ್ಷ್ಮವಾಗಿ ಹೇಳಿದ್ದೆ. ಹಿಂದಿನ ಶಾಸಕರು ತಂದ ಅನುದಾನದ ಕಾಮಗಾರಿಗಳಿಗೆ ಹಾಲಿ ಶಾಸಕರು ಚಾಲನೆ ನೀಡುವುದು ವಾಡಿಕೆ ಅದನ್ನು ತಪ್ಪೆಂಬದಂತೆ ಬಿಂಬಿಸಬಾರದೆಂದು ಹೇಳಿದರು. ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ಮನು ಅವರೊಂದಿಗೆ 15ರಿಂದ 30 ಮಂದಿ ಜೆಡಿಎಸ್ ಸೇರ್ಪಡೆಗೊಂಡರು. ಬಿಜೆಪಿ ಪಕ್ಷದ ಮುಖಂಡರು ನನ್ನ ಮನೆಗೆ ಆಗಮಿಸಿದಾಗ ಸಾಧಾರಣ ಶಾಲು ಹಾಕಿ ಸ್ವಾಗತಿಸಿದೆ. ಇದನ್ನು ಮನೆಗೆ ಬಂದವರನ್ನೆಲ್ಲ ಪಕ್ಷಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ ಎಂಬ ತಪ್ಪು ಸಂದೇಶ ರವಾನಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಮಾತನಾಡಿ, ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ಮುಖಂಡರು ಎನ್‌ಡಿಎ ಮೈತ್ರಿಕೂಟದ ಸದಸ್ಯರಾಗಿ ಕೆಲಸ ಮಾಡಬೇಕು. ಯಾರಿಗಾದರೂ ಮನಸ್ಸಿಗೆ ನೋವಾಗಿದ್ದರೆ ಪಕ್ಷದ ಚೌಕಟ್ಟಿನಲ್ಲಿ ಚರ್ಚೆ ಮಾಡಬೇಕು. ಆದರೆ ಕೆ.ಸಿ.ನಾರಾಯಣಗೌಡ ಅವರು ಸಣ್ಣಪುಟ್ಟ ವಿಷಯವನ್ನು ದೊಡ್ಡದು ಮಾಡುತ್ತಿರುವುದು ಸರಿಯಲ್ಲ ಎಂದು ಕಾರವಾಗಿ ನುಡಿದರು.

2028ರ ಚುನಾವಣೆಯ ಸಂಬಂಧ ಅಭ್ಯರ್ಥಿಗಳನ್ನು ಎರಡೂ ಪಕ್ಷಗಳ ವರಿಷ್ಟರು ನಿರ್ಧಾರ ಮಾಡುತ್ತಾರೆ. ಇದನ್ನು ನಾವು ನಿರ್ಧರಿಸುವುದಕ್ಕೆ ಸಾಧ್ಯವಿಲ್ಲ. ಈ ಸಂಬಂಧ ನಿಖಿಲ್ ಕುಮಾರಸ್ವಾಮಿ ಹೇಳಿಕೆ ವಿರುದ್ಧ ಅವರ್‍ಯಾರು ಮಾತನಾಡಲು ಎಂದು ಪ್ರಶ್ನಿಸಿರುವುದು ಸರಿಯಲ್ಲ ಎಂದು ತಾಕೀತು ಮಾಡಿದರು. ನಿಖಿಲ್ ಕುಮಾರಸ್ವಾಮಿ ಅವರು ಜೆಡಿಎಸ್ ಪಕ್ಷದ ಯುವ ಘಟಕದ ರಾಜ್ಯಾಧ್ಯಕ್ಷ ಅವರು ನಿಮ್ಮನ್ನು ಒಮ್ಮೆ ಶಾಸಕ ಸ್ಥಾನದ ಅಭ್ಯರ್ಥಿ ಎಂದು ಘೋಷಿಸಿದ್ದನ್ನು ಮರೆಯಬಾರದು. ನಿಮಗೆ ಅವರು ಯಾರು ಅಲ್ಲದಿದ್ದರೂ ಜೆಡಿಎಸ್ ಪಕ್ಷಕ್ಕೆ ಅವರು ನಾಯಕರು. ಇದೇ ರೀತಿ ಉದ್ಧಟತನ ಮುಂದುವರೆದರೆ ಜೆಡಿಎಸ್ ಪಕ್ಷದಿಂದ ನಿರ್ಧಾರ ಕೈಗೊಂಡು ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ದೂರು ನೀಡಲಾಗುವುದು ಎಂದು ಎಚ್ಚರಿಸಿದರು.

ಗೋಷ್ಠಿಯಲ್ಲಿ ಕೆ.ಆರ್.ಪೇಟೆ ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ಜಿ.ಪಂ ಮಾಜಿ ಸದಸ್ಯ ಮೋಹನ್, ಜೆಡಿಎಸ್ ತಾಲೂಕು ಯುವ ಘಟಕದ ಅಧ್ಯಕ್ಷ ರವಿ, ಮಾದೇವು ಇದ್ದರು.

# ರೈತೋಪಯೋಗಿ ಸಲಕರಣೆಗಳ ವಿತರಣೆ

**ಕೋಲಾರ:** ಎಸ್‌ಸಿಎಸ್‌ಪಿ ಕಾರ್ಯಕ್ರಮದ ಅಡಿಯಲ್ಲಿ ತಾಲ್ಲೂಕಿನ ಲಕ್ಷ್ಮೀಸಾಗರ ಗ್ರಾಮದ ಚಾಮುಂಡೇಶ್ವರಿ ಆಲಯದ ಆವರಣದಲ್ಲಿ ಸಿರಿಧಾನ್ಯ ಪ್ರಚಾರ ಚಟುವಟಿಕೆಗಳ ಕಾರ್ಯಕ್ರಮದ ಅಂಗವಾಗಿ 50 ಮಂದಿ ಆಯ್ದ ರೈತರಿಗೆ ಟಾರ್ಪಲ್ ಸೆಟ್, ಹಾರೆ, ಗುದ್ದಲಿ, ಕುಡುಗೋಲು, ಪಿಕಾಸಿ ಮುಂತಾದ ರೈತೋಪಯೋಗಿ ಸಲಕರಣೆಗಳನ್ನು ಆಲ್ ಇಂಡಿಯಾ ಕೋ–ಆರ್ಡಿನೇಟೆಡ್ ರಿಸರ್ಚ್ ಪ್ರಾಜೆಕ್ಟ್ ಆನ್ ಸೊರ್ಘುಮ್ ಅಂಡ್ ಮಿಲೆಟ್ಸ್ ರಾಜೇಂದ್ರನಗರ ಹೈದರಾಬಾದ್ ಮತ್ತು ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ ಬೆಂಗಳೂರು ರವರ ವತಿಯಿಂದ ವಿತರಿಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿ ಸಂಸ್ಥೆಯ ಪ್ರೊಫೆಸರ್ ಡಾ.ಲಲಿತ, ಡಾ.ಪುಷ್ಪ, ಡಾ.ಮಮತಾ, ಕೆ. ಶ್ರೀನಿವಾಸ್, ಎಸ್. ಎನ್.ನಾರಾಯಣಸ್ವಾಮಿ, ಚಾಮುಂಡೇಶ್ವರಿ ದೇವಾಲಯದ ಧರ್ಮಾಧಿಕಾರಿ ಚಂದ್ರಣ್ಣ, ಡಿಎಲ್‌ಎಸ್ ವಕೀಲ ಸೋಮಶೇಖರ್ ಮುಂತಾದವರು ಸಲಕರಣೆಗಳನ್ನು ಫಲಾನುಭವಿಗಳಿಗೆ ವಿತರಿಸಿದರು.

ಡಾ.ಲಲಿತ ಮಾತನಾಡಿ, ಸಾವಯವ ಗೊಬ್ಬರಗಳು ಮಣ್ಣಿನ ಫಲವತ್ತತೆ, ರಚನೆ ಮತ್ತು ತೇವಾಂಶ ಹೆಚ್ಚಿಸಿ, ದೀರ್ಘಕಾಲಿಕ ಉತ್ಪಾದಕತೆ ಸುಧಾರಿಸುತ್ತವೆ. ಇವು ಸೂಕ್ಷ್ಮ ಜೀವಿಗಳ ಬೆಳವಣಿಗೆಯನ್ನು ಉತ್ತೇಜಿಸಿ, ಸಸ್ಯಗಳಿಗೆ ಅಗತ್ಯವಾದ ಪೋಷಕಾಂಶಗಳನ್ನು ನೈಸರ್ಗಿಕವಾಗಿ ಒದಗಿಸುತ್ತವೆ.ಅಲ್ಲದೆ, ರಾಸಾಯನಿಕಗಳಿಲ್ಲದೆ ಮಣ್ಣಿನ ಆರೋಗ್ಯವನ್ನು ಕಾಪಾಡಿ, ಪರಿಸರ ಮಾಲಿನ್ಯವನ್ನು ತಗ್ಗಿಸುತ್ತವೆ.

ಸಾವಯವ ಗೊಬ್ಬರದ ಮುಖ್ಯ ಅನುಕೂಲಗಳೆಂದರೆ ಮಣ್ಣಿನ ಫಲವತ್ತತೆ ಹೆಚ್ಚಳ ಸಾವಯವ ಗೊಬ್ಬರವು ಮಣ್ಣಿನಲ್ಲಿ ಇಂಗಾಲದ ಪ್ರಮಾಣ ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ಹೆಚ್ಚಿಸುವ ಮೂಲಕ ಮಣ್ಣಿನ ಜೀವವೈವಿಧ್ಯತೆ ಉತ್ತೇಜಿಸುತ್ತದೆ. ಮಣ್ಣಿನ ರಚನೆಯ ಸುಧಾರಣೆ ಇದು ಮಣ್ಣಿನ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ಮಣ್ಣಿನ ಸವೆತವನ್ನು ತಡೆಯುತ್ತದೆ ರಾಸಾಯನಿಕ ಗೊಬ್ಬರಗಳಿಗೆ ಹೋಲಿಸಿದರೆ, ಸಾವಯವ ಗೊಬ್ಬರಗಳು ಹಾನಿಕಾರಕ ನೈಟ್ರೇಟ್ ಸೋರಿಕೆಯನ್ನು ಕಡಿಮೆ ಮಾಡಿ, ಜಲಮೂಲಗಳನ್ನು ರಕ್ಷಿಸುತ್ತವೆ. ಮಣ್ಣಿನಲ್ಲಿರುವ ಹಾನಿಕಾರಕ ಬ್ಯಾಕ್ಟೀರಿಯಾಗಳನ್ನು ತಡೆದು, ಬೆಳೆಗಳ ಆರೋಗ್ಯಕರ ಬೆಳವಣಿಗೆಗೆ ಸಹಾಯ ಮಾಡುತ್ತದೆ .ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದರಿಂದ, ದೀರ್ಘಾವಧಿಯಲ್ಲಿ ಉತ್ಪಾದನಾ ವೆಚ್ಚವನ್ನು ತಗ್ಗಿಸುತ್ತದೆ.

ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳಬೇಕು ಇಲ್ಲವಾದರೆ ಮಣ್ಣು ತನ್ನ ಪೌಷ್ಟಿಕತೆಯನ್ನು ಕಳೆದುಕೊಳ್ಳುತ್ತದೆ. ಹಾಗಾಗಿ ಹೆಚ್ಚಾಗಿ ಸಾವಯವ ಗೊಬ್ಬರ ಬಳಿಸಿ ಮಣ್ಣಿನ ಫಲವತ್ತತೆಯನ್ನು ಪೋಷಿಸಿ. ಹೆಚ್ಚಿಗೆ ಕೊಟ್ಟಿಗೆ ಗೊಬ್ಬರ ಬಳಸಿ ಗೊಬ್ಬರಗಳನ್ನು ಕೊಳ್ಳುವಾಗ ಮಣ್ಣಿನ ಆರೋಗ್ಯಕ್ಕೆ ಹಾನಿಯಾಗದಂತಹ ಗೊಬ್ಬರವನ್ನು ಉಪಯೋಗಿಸಿ.



# ಸುದ್ದಿಮನೆಯ ಒತ್ತಡ–ಕುಗ್ಗುತ್ತಿರುವ ಪತ್ರಕರ್ತರ ಆಯಸ್ಸು: ಆತಂಕ

**ಅಗಲಿದ ಪತ್ರಕರ್ತರುಗಳಿಗೆ ಕೆಯುಡಬ್ಲ್ಯೂಜೆ ಶ್ರದ್ಧಾಂಜಲಿ**

**ಬೆಂಗಳೂರು:** ಸುದ್ದಿಮನೆಯ ಒತ್ತಡಗಳಿಗೆ ಪತ್ರಕರ್ತರ ಆಯಸ್ಸು ಕುಗ್ಗುತ್ತಿದೆ ಎಂದು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘವು(ಕೆಯುಡಬ್ಲೂ?ಜೆ) ಅಗಲಿದ ಪತ್ರಕರ್ತರಿಗೆ ಏರ್ಪಡಿಸಿದ್ದ ಸಂತಾಪ ಸೂಚಕ ಸಭೆಯಲ್ಲಿ ಆತಂಕ ವ್ಯಕ್ತಪಡಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಹಲವರು, ಪತ್ರಕರ್ತರ ಬದುಕು ಒತ್ತಡದ ಬದುಕು ಆಗಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಸರಿಯಾದ ಆಹಾರ ಪದ್ಧತಿ ಪರಿಪಾಲನೆ ಮಾಡದ ಕಾರಣಕ್ಕಾಗಿ

ಆರೋಗ್ಯದ ಮೇಲೂ ಅಡ್ಡ ಪರಿಣಾಮಗಳಾಗುತ್ತಿವೆ. ಧೀರ್ಘ ಕಾಲ ಬಾಳಬೇಕಾಗಿರುವ ಪತ್ರಕರ್ತರ ಆಯಸ್ಸು ಅಲ್ಪಯುಷ್ಯಕ್ಕೆ ಇಳಿಯುತ್ತಿರುವುದು ನೋವಿನ ಸಂಗತಿ ಎಂದು ಸಭೆ ವಿಷಾದ ವ್ಯಕ್ತಪಡಿಸಿತು.

ಇತ್ತೀಚೆಗೆ ಹಿರಿಯರಷ್ಟೆ ಅಲ್ಲ, ಕಿರಿಯ ಪತ್ರಕರ್ತರು ಸೇರಿದಂತೆ ಸರಣಿ ಸಾವು ಸಂಭವಿಸಿವೆ. ಆದುದರಿಂದ ಪತ್ರಕರ್ತರು ತಮ್ಮ ವೃತ್ತಿ ಒತ್ತಡ ನಿಭಾಯಿಸಿಕೊಳ್ಳಲು ಬೇರೆ ಮಾರ್ಗಗಳನ್ನು ಅನುಸರಿಸಬೇಕು. ಆಹಾರ ಪದ್ಧತಿಯನ್ನು ಸರಿಪಡಿಸಿಕೊಳ್ಳಬೇಕು ಎಂಬ ಸಲಹೆಗಳು ಸಭೆಯಲ್ಲಿ ವ್ಯಕ್ತವಾದವು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಕೆಯುಡಬ್ಲ್ಯೂಜೆ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಂತಾಪ ಸಭೆಯಲ್ಲಿ ಇತ್ತೀಚೆಗೆ ನಮ್ಮನ್ನು ಅಗಲಿದ ಪತ್ರಕರ್ತರಾದ ಬೀದರನ ನಾಗಶೆಟ್ಟಿ ಧರಂಪುರ, ಸಂಜೆವಾಣಿ ದೊಡ್ಡಬೊಮ್ಮಯ್ಯ, ಸಂಯುಕ್ತ ಕರ್ನಾಟಕದ ಭೀಮಸೇನ ಪದಕಿ, ಬೆಳಗಾವಿಯ ಎಂ.ಎನ್.ಪಾಟೀಲ, ಸಕಲೇಶಪುರದ







ಎಂ.ಎನ್.ಶಿವಕುಮಾರ್, ಪ್ರಜಾವಾಣಿಯ ಬಾವು ಪತ್ತಾರ, ಕಲಬುರ್ಗಿ ಪ್ರಭುಲಿಂಗ ನೀಲೂರೆ, ರಾಯಚೂರು ನಹೀಮ್ ಅಶ್ರ್, ಮೈಸೂರಿನ ಸೂರಜ್, ವಿಜಯಪುರದ ಧಾವಲ್ ಘೋರ್ಪಡೆ ಅವರುಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಒಂದು ನಿಮಿಷ ಮೌನಾಚರಣೆ ಮಾಡಿ ಸಂತಾಪ ಕೋರಲಾಯಿತು.

ಮಾಜಿ ಶಾಸಕ ಎಚ್.ಎಂ.ವಿಶ್ವನಾಥ್ ಮಾತನಾಡಿ, ನಾನು ಕೂಡ ಪತ್ರಕರ್ತನಾಗಿದ್ದೆ. ವೃತ್ತಿ ಒಳಹೊರಗು ವೃತ್ತಿ ಬದುಕು ಕಷ್ಟದ್ದು ಎನ್ನುವುದು ಎಲ್ಲರಿಗೂ ಗೊತ್ತು. ಕಡಿಮೆ ವಯಸ್ಸಿನಲ್ಲಿಯೇ ಬದುಕು ಅಂತ್ಯವಾಗುವುದು ನೋವಿನ ಸಂಗತಿ. ಇಂಥ ಸಂದರ್ಭದಲ್ಲಿ ನೊಂದ ಕುಟುಂಬಗಳಿಗೆ ಎಲ್ಲರೂ ಆಸರೆಯಾಗಿ ನಿಲ್ಲಬೇಕು ಎಂದರು. ತಮ್ಮ ನಿವೃತ್ತಿ ವೇತನದ ತಿಂಗಳ ಹಣವನ್ನು ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ ಕಳುಹಿಸಿಕೊಡುವುದಾಗಿ ಇದೇ ಸಂದರ್ಭದಲ್ಲಿ ಪ್ರಕಟಿಸಿದರು. ರಾಜ್ಯ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಮಾತನಾಡಿ ಸುದ್ದಿಮನೆಯಲ್ಲಿ ನಮ್ಮ ಒಡನಾಡಿಗಳಾಗಿದ್ದ ಪತ್ರಕರ್ತರಿಗೆ ಶ್ರದ್ಧಾಂಜಲಿ ಸಲ್ಲಿಸುವುದು ನೋವಿನ ಸಂಗತಿಯಾದರೂ, ನಮ್ಮ ಆದ್ಯ ಕರ್ತವ್ಯವಾಗಿದೆ. ಆ ಮೂಲಕ ಅವರ ಒಡನಾಡ ಮತ್ತು ಪತ್ರಕರ್ತ ವೃತ್ತಿ ಸೇವೆಯನ್ನು ಸ್ಮರಿಸುವ ಕೆಲಸವನ್ನು ಸಂಘ ಮಾಡುತ್ತಿದೆ ಎಂದು ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮಾಜಿ ಅಧ್ಯಕ್ಷ ವಿ.ವೆಂಕಟೇಶ್ ಮಾತನಾಡಿ, ನೊಂದ ಕುಟುಂಬಗಳಿಗೆ ನೆರವಾಗುವ ಕೆಲಸವನ್ನು ಶಿವಾನಂದ ತಗಡೂರು ನೇತೃತ್ವದ ತಂಡ ಕ್ರೀಯಾಶೀಲವಾಗಿ ಮಾಡುತ್ತಿದೆ ಎಂದರು.

ರಾಜ್ಯ ಸಂಘದ ಖಜಾಂಚಿ ಎಂ.ವಾಸುದೇವಹೊಳ್ಳ ಮತ್ತು ಕೋಲಾರವಾಣಿ ಪತ್ರಿಕೆ ಸಂಪಾದಕ ಮುರುಳಿಧರ್ ಅವರು ಹೊನ್ನುಡಿ ಪತ್ರಿಕೆಯ ಎಂ.ಜಿ.ಪ್ರಭಾಕರ್ ಅವರ ಬಗ್ಗೆ ಮಾತನಾಡಿ ಅವರ ಸೇವೆ ಮತ್ತು ನಿಷ್ಠೂರ ವೃತ್ತಿ ಬದುಕನ್ನು ಸ್ಮರಿಸಿದರು. ಹಿರಿಯ ಪತ್ರಕರ್ತರಾದ ಭಾಷ್ಯಂಗೂಳ್ಯ, ಶಿವರಾಜ ಅವರು, ಸ್ನೇಹಜೀವಿಯಾಗಿದ್ದ ದೊಡ್ಡಬೊಮ್ಮಯ್ಯ ಅವರ ಸೇವಾ ಹಿರಿತನ ಸ್ಮರಿಸಿದರು. ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ನಿರ್ದೇಶನಕ ಧ್ಯಾನ್ ಪೂಣಚ್ಚ, ಹಿರಿಯ ಪತ್ರಕರ್ತೆ ಶಶಿಕಲಾ ಮತ್ತಿತರರು ಮಾತನಾಡಿದರು. ನುಡಿನಮನ ಕಾರ್ಯಕ್ರಮದಲ್ಲಿ ಅಗಲಿದ ಪತ್ರಕರ್ತರ ಕೆಲ ಕುಟುಂಬದ ಸದಸ್ಯರು ಭಾಗವಹಿಸಿದ್ದರು.

# ಬಿಸಿಲಿನ ತಾಪಕ್ಕೆ ತಂಪು ಪಾನಿಯಾ ವರದಾನ



✍ಸೌಮ್ಯಸನತ್



ಸೂರ್ಯ ತನ್ನ ಪ್ರಖರತೆಯನ್ನು ಪ್ರದರ್ಶಿಸುತ್ತಿದ್ದಾನೆ. ಬಿಸಿಲಿನ ಝಳ ದಿನ ದಿನಕ್ಕೆ ಹೆಚ್ಚುತ್ತಲೇ ಇದೆ. ಬಿಸಿಲ ತಾಪ ಜೋರಾಗಿದ್ದಾಗ ತಣ್ಣಗೆ, ಬಾಯಿಗೆ ಹಿತ ಎನ್ನಿಸುವ ಜ್ಯೂಸ್ ಸಿಕ್ಕರೆ ಎಷ್ಟು ಚೆನ್ನ ಅಂದುಕೊಳ್ಳುತ್ತೇವೆ. ಬೇಸಿಗೆಯಲ್ಲಿ ತಂಪಾದ ಪಾನೀಯಗಳನ್ನು ಕುಡಿದರೆ ಅದರಲ್ಲಿರುವ ಆನಂದವೇ ಬೇರೆ. ಕೆಲ ಪಾನೀಯಗಳು ದೇಹಕ್ಕೆ ತಂಪು ನೀಡುವುದು ಮಾತ್ರವಲ್ಲದೆ ಆರೋಗ್ಯಕ್ಕೂ ಕೂಡ ತುಂಬಾ ಪ್ರಯೋಜನಕಾರಿಯಾಗಿವೆ. ಅಂತಹ ಪಾನೀಯಗಳ ವಿವರ ಹಾಗೂ ತಯಾರಿಸುವ ವಿಧಾನ ಇಲ್ಲಿದೆ.


**1. ಆಮ್ ಪನ್ನಾ:** ಇದು ಭಾರತದ ವಿಶಿಷ್ಟ ಬೇಸಿಗೆ ಪಾನೀಯವಾಗಿದ್ದು, ಇದನ್ನು ಹಸಿ ಮಾವಿನಿಂದ ತಯಾರಿಸಲಾಗುತ್ತದೆ. ಹಸಿ ಮಾವು ಶಾಖ–ನಿಯಂತ್ರಿಸುವ ಸಾಮರ್ಥ್ಯವನ್ನು ಹೊಂದಿದ್ದು ಅದು ದೇಹವನ್ನು ಶಾಖದ ಒತ್ತಡ ಮತ್ತು ಶಾಖದ ಹೊಡೆತದಿಂದ ರಕ್ಷಿಸುತ್ತದೆ. ಕಚ್ಚಾ ಮಾವಿನ ಹುಳಿಯನ್ನು ಸಕ್ಕರೆ ಮತ್ತು ಪುದೀನದೊಂದಿಗೆ ಬೆರೆಸಿದಾಗ, ಆಮ್ ಪನ್ನಾಕ್ಕೆ ತುಟಿಗೆ ಮುದ ನೀಡುವ ಪರಿಮಳವನ್ನು ನೀಡುತ್ತದೆ.

**2. ಲಾವಂಚದ ಪಾನೀಯ:** ಎಂಟರಿಂದ ಹತ್ತು ಲಾವಂಚದ ಬೇರುಗಳನ್ನು ಚೆನ್ನಾಗಿ ತೊಳೆದು ಅರ್ಧ ಲೀಟರ್ ನೀರಿನಲ್ಲಿ ಎರಡು ಗಂಟೆ ನೆನೆಸಬೇಕು. ಆ ನೀರನ್ನು ಶೋಧಿಸಿ. ಅದಕ್ಕೆ ಅರ್ಧಕಪ್ ಬೆಲ್ಲ, ನಿಂಬೆ ರಸ ಮತ್ತು ಏಲಕ್ಕಿ ಪುಡಿ ಹಾಕಬೇಕು. ಲಾವಂಚ ಪಾನೀಯ ಸಿದ್ಧ. ಇದು ದೇಹಕ್ಕೆ ತಂಪು ನೀಡುವ ಜೊತೆಗೆ, ರಕ್ತಶುದ್ಧಿ ಮಾಡುತ್ತದೆ.

**3. ಪುದೀನ ಜ್ಯೂಸ್:** ಐದಾರು ಪುದೀನ ಎಲೆಗಳನ್ನು ಸ್ವಚ್ಛವಾಗಿ ತೊಳೆದು, ಮಿಕ್ಸಿಯಲ್ಲಿ ರುಬ್ಬಿಕೊಳ್ಳಬೇಕು. ಅದಕ್ಕೆ ಸಾಕಷ್ಟು ನೀರು ಹಾಕಿ, ಬೆಲ್ಲ ಬೆರೆಸಬೇಕು. ಜೊತೆಗೆ ಚಿಟಿಕೆ ಏಲಕ್ಕಿ ಪುಡಿ ಬೆರೆಸಿದರೆ, ಇನ್ನೂ ಉತ್ತಮ. ಬೆಳಿಗ್ಗೆ ಖಾಲಿ ಹೊಟ್ಟೆಗೆ ಈ ಪಾನೀಯ ಸೇವಿಸಿದರೆ, ಅಜೀರ್ಣ, ಎದೆಯುರಿಯಂತಹವು ಬಾಧಿಸುವುದಿಲ್ಲ.



**4. ದಾಸವಾಳ ಹೂವಿನ ಷರಬತ್:** ಐದು ಅಥವಾ ಆರು ದಾಸವಾಳದ ಹೂವುಗಳನ್ನು ರುಬ್ಬಿ ರಸ ತೆಗೆದು ಅದಕ್ಕೆ ನೀರು, ಬೆಲ್ಲ ಬೆರೆಸಿದರೆ ಷರಬತ್ತು ರೆಡಿ. ಮತ್ತೊಂದು ವಿಧಾನದಲ್ಲಿ ಷರಬತ್ತು : ಒಂದು ಲೋಟ ಸಕ್ಕರೆಗೆ ನೀರು ಬೆರೆಸಿ, ಸಕ್ಕರೆ ಪಾಕ ತಯಾರಿಸಿಟ್ಟುಕೊಳ್ಳಿ. ಅದಕ್ಕೆ ಒಂದು ಬಟ್ಟಲು ದಾಸವಾಳದ ಹೂವಿನ ರಸ ಬೆರೆಸಿ. ಅದನ್ನು ಒಲೆಯ ಮೇಲಿಟ್ಟು ನೀರಿನಂಶ ಹೋಗುವವರೆಗೂ ಕಾಯಿಸಿ. ನಂತರ ಇಳಿಸಿ, ಶೋಧಿಸಿ. ಬಾಟಲಿಯಲ್ಲಿ ತುಂಬಿಟ್ಟುಕೊಳ್ಳಿ. ನಿಮಗೆ ಬೇಕೆನಿಸಿದಾಗ ಎರಡು ಚಮಚ ರಸಕ್ಕೆ ಒಂದು ಲೋಟ ನೀರು ಬೆರೆಸಿ ಕುಡಿಯಬಹುದು. ಚೀನಾ ಮತ್ತು ಜಪಾನ್ ದೇಶಗಳಲ್ಲಿ ಅತಿಥಿಗಳ ಸತ್ಕಾರಕ್ಕೆ ಇದೇ ಪಾನೀಯ ಬಳಸುತ್ತಾರೆ.



**5. ಕಬ್ಬಿನ ರಸ:** ಬೇಸಿಗೆಯಲ್ಲಿ ಕಬ್ಬಿನ ರಸವು ದೇಹವನ್ನು ತಂಪಾಗಿಡಲು ಅತ್ಯುತ್ತಮವಾದ ಪಾನೀಯವಾಗಿದೆ. ಆದಾಗ್ಯೂ, ಪುದೀನ, ಶುಂಠಿ ಮತ್ತು ನಿಂಬೆಯೊಂದಿಗೆ ಬೆರೆಸಿದಾಗ, ಅದು ದಿನವಿಡೀ ಚೈತನ್ಯಶೀಲವಾಗಿರುತ್ತದೆ. ಹೊಸದಾಗಿ ಪುಡಿಮಾಡಿದ ಕಬ್ಬಿನಲ್ಲಿ ಹೆಚ್ಚಿನ ಪ್ರಮಾಣದ ನೀರು ಮತ್ತು ತಂಪಾಗಿಸುವ ಗುಣಗಳಿವೆ.

**6. ಮೆಂತ್ಯೆ ಬೆಲ್ಲ ನೀರು:** ಬೇಸಿಗೆಗೆ ಹೇಳಿ ಮಾಡಿಸಿದ ಜ್ಯೂಸ್ ಇದು. ಸುಮಾರು ಒಂದೆರಡು ಗಂಟೆ ನೆನೆಸಿದ ಮೆಂತ್ಯೆಯನ್ನು ನುಣ್ಣಗೆ ರುಬ್ಬಬೇಕು. ಇದಕ್ಕೆ ಬೆಲ್ಲ ಬೆರೆಸಿ, ಅಗತ್ಯಕ್ಕೆ ತಕ್ಕಷ್ಟು ನೀರು ಬೆರೆಸಿ ಕುಡಿಯಬಹುದು. ಇದು ದೇಹಕ್ಕೆ ತಂಪು. ಇದನ್ನು ಮಾಡಿದ ಕೂಡಲೇ ಕುಡಿಬೇಕು. ರುಬ್ಬಿದಾಗ ಗಟ್ಟಿ ಇರುತ್ತದೆ. ನೀರು ಬೆರೆಸಿ ಮೇಲೆ ಕೆಳಗೆ ಎತ್ತಿಹಿಡಿದಾಗ ನೀರಾಗುತ್ತದೆ. ಸ್ವಲ್ಪ ಹೊತ್ತು ಹಾಗೇ ಇಟ್ಟರೆ ಮತ್ತೆ ಗಟ್ಟಿ ಆಗುತ್ತದೆ. ಹಾಗಾಗಿ ತಕ್ಷಣ ಕುಡಿಯುವುದು ಸೂಕ್ತ.

**7. ತೆಂಗಿನ ನೀರು:** ಎಳನೀರು ದೇಹಕ್ಕೆ ಬಹಳ ಒಳ್ಳೆಯದು. ಎಳನೀರು ಕುಡಿದರೆ ದೇಹವು ತಂಪಾಗಿರುತ್ತದೆ. ಅಷ್ಟೇ ಅಲ್ಲ ಎಳನೀರಿನ ಗಂಜಿ ಕೂಡ ಆರೋಗ್ಯಕರ ಗುಣ ಲಕ್ಷಣಗಳನ್ನು ಹೊಂದಿದ್ದು ದೇಹಕ್ಕೆ ಉತ್ತಮ ಆರೋಗ್ಯವನ್ನು ಒದಗಿಸುತ್ತದೆ. ಎಳನೀರನ್ನು ಕುಡಿಯುವುದರಿಂದ ರಕ್ತ ಸಂಚಲನ ಸುಲಭವಾಗಿ ಆಗುತ್ತದೆ. ದೇಹದ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ಇದು ದೇಹಕ್ಕೆ ಕಬ್ಬಿಣಾಂಶವನ್ನು ಕೂಡ ಒದಗಿಸುತ್ತದೆ. ಅದರಲ್ಲೂ ಬೇಸಿಗೆ ಕಾಲದಲ್ಲಿ ಎಳನೀರನ್ನು ಸೇವಿಸಿದರೆ ದೇಹವು ತಂಪಾಗಿರುತ್ತದೆ.



ಆರೋಗ್ಯ ಭಾಗ್ಯ

**8. ಬಾರ್ಲಿ ನೀರು:** ಒಳ್ಳೆಯ ಆರೋಗ್ಯಕ್ಕೆ ಬಾರ್ಲಿ ನೀರು ತುಂಬಾ ಒಳ್ಳೆಯ ಪಾನೀಯವಾಗಿದೆ. 1 ಕಪ್ ಬಾರ್ಲಿಯನ್ನು 3 ಕಪ್ ನೀರಿಗೆ ಸೇರಿಸಿ 20 ನಿಮಿಷಗಳ ಕಾಲ ಕುದಿಸಿದರೆ ಬಾರ್ಲಿ ನೀರು ಸಿದ್ಧ. ರುಚಿಯನ್ನು ಹೆಚ್ಚಿಸಲು ನಿಂಬೆ ರಸ, ಜೇನುತುಪ್ಪವನ್ನು ಸೇರಿಸಬಹುದು. ಅಥವಾ ಈ ನೀರಿಗೆ ಚಿಟಿಕೆ ಉಪ್ಪು ಸೇರಿಸಿ. ಬಳಿಕ ಈ ಬೇಸಿಗೆಯಲ್ಲಿ ಆಗಾಗ ಕುಡಿದರೆ ಆರೋಗ್ಯಕ್ಕೆ ತುಂಬಾ ಒಳ್ಳೆಯದು.


ಅದರ ಹೊರತಾಗಿ, ಉಪ್ಪು ಜೊತೆಗೆ ಕಾಲು ಲೋಟ ಮಜ್ಜಿಗೆಯನ್ನು ಬೆರೆಸಿ ಕುಡಿಯಬಹುದು. ಬಾರ್ಲಿಯಲ್ಲಿ ಯಥೇಚ್ಛವಾದ ವಿಟಮಿನ್ ಗಳು, ಖನಿಜಾಂಶಗಳು ಮತ್ತು ಕಾರ್ಬೋಹೈಡ್ರೇಟ್ ಅಂಶಗಳು ಅಡಗಿವೆ.



## ಪದ ಬಂಧ

ಜ್ಯೋತಿ ರಾಜೇಶ್





### ಎಡದಿಂದ ಬಲಕ್ಕೆ....

1. ಹತೋಟಿಯಲ್ಲಿಲ್ಲದ್ದನ್ನು ಹೀಗೂ ಹೇಳಬಹುದು.....(4)
3. ಕಾಂತ ತಂದ ಲೋಹ ಚುಂಬಕವೇ ಇದು?.....(4)
7. .......ಇದು ನಿಮ್ಮಿಷ್ಟದ ಪದ......(5)
8. ಎರೆಡಕ್ಷರದ ಮೂಗುತಿ.....(2)
10. ಕ್ಯಾರೇಟ್ ಗಿರುವ ದರವಿದು.....(2)
11. ಇದು ಕನ್ನಡದ 'ಪ್ರಿಸಮ್'......(3)
12. ಭರದಿಂದ ಓಡಿದ್ದನ್ನು ಹೀಗನ್ನೋಣವೇ.....(3)
13. ಹಬೆಯನ್ನು ಹೀಗೆ ಹೇಳಿ.....(2)
15. ನೇರವಾಗಿ ಎಳೆದ ಗೀಟು ಕೊನೆಯಲ್ಲಿ ದೀರ್ಘವಾಗಿದೆ.....(2)
17. ಹಿಂದುಮುಂದಾದ, ಪ್ರಾಚೀನ ಸಂಸ್ಕೃತ ಶಬ್ದಕೋಶವಿದು....(5)
19. ಚಿಕ್ಕದಾಗಿ ನಕ್ಕಿದ್ದನ್ನು ಹೀಗೆ ಹೇಳಬಹುದೆ.....(4)
20. ಜೀವದ ಗೆಳೆಯನನ್ನು ಹೀಗೆ ಕರೆಯಿರಿ.....(4)


### ಮೇಲಿನಿಂದ ಕೆಳಕ್ಕೆ.....

1. ವಾಸಕ್ಕೆ ಯೋಗ್ಯವಾದ ಮನೆಯಿದು.....(4)
2. ನೀಡಿದ ಈ ಗುರುತಿನಲ್ಲಿ ಕೋಗಿಲೆಯ ಧ್ವನಿಯಿದೆ.....(3)
4. ಅಡಿ ಮೇಲಾದ ಕ್ಷೇತ್ರ/ಸ್ಥಳವಿದು.....(3)
5. ತಲೆಮೇಲೆ ಹೊತ್ತು ತಂದ ಒಣಗಿದ ಎಲೆ.....(4)
6. ಮಾದ ಮಾಡಿದ್ದು ದೊಡ್ಡ ಅಪರಾಧವೆ?......(3)
9. ವಿಪರೀತವಾದ ಅಪಾಯ ಕೆಳಗಿನಿಂದ ಬಂದಿದೆ.(3)
10. ಬೇಸಿಗೆಯಲ್ಲಿ ಒಂದುಗೂಡಿಸಿದ್ದನ್ನು ಹೀಗೆ ಹೇಳಿ...(3)
13. ಪದೇಪದೇ ಅಥವ ಬಾರಿಬಾರಿಗೆ ಮಾಡುವುದನ್ನು ಹೀಗೆ ಹೇಳಿ......(4)
14. ಅಕಟಕಟ.....ಇದು ಬರೀ ಚಿಪ್ಪು.....(3)
16. ಗೆರೆಗಳಿಂದಲೇ ಮೂಡಿದ ಆಕೃತಿಯಿದು.....(4)
17. ಹಕ್ಕಿ ನುಡಿದ ಶುಭ ಸೂಚನೆಯೇ ಇದು.....(3)
18. ಸಂತೃಪ್ತಿಯಾಗದ ಆಪ್ತನಿವ....(3)

# ಒಬ್ಬರಿಗೆ "ಟೇಕನ್ ಫಾರ್ ಗ್ರಾಂಟೆಡ್" ಆಗುವ ಮುನ್ನ..!



✍ಹಿರಿಯೂರು ಪ್ರಕಾಶ್



ನೀವು ಯಾರಿಗಾದರೂ ಯಾವುದೇ ವಿಚಾರಕ್ಕೆ ಸುಲಭಕ್ಕೆ ಸಿಗುವಂತಿದ್ದರೆ, ಒಬ್ಬರು ಕೇಳಿದ ತಕ್ಷಣ ಹಿಂದೆ ಮುಂದೆ ಯೋಚಿಸದೇ ಸಹಾಯ ಮಾಡುವವರಾಗಿದ್ದರೆ, ಒಬ್ಬರ ಫೋನ್ ಕಾಲ್ ಬಂದ ಕೂಡಲೇ ಅದನ್ನು ಕೂಡಲೇ ರಿಸೀವ್ ಮಾಡುವಂತಿದ್ದರೆ, ಮತ್ತೊಬ್ಬರು ಯಾಚಿಸಿದ ಕೆಲಸವನ್ನು ಅದೆಷ್ಟೇ ಕಷ್ಟವಾಗಿರಲೀ ಅದನ್ನು ತೀರ ಸುಲಭ ಕಾಣಿಸುವಂತೆ ಮಾಡಿಕೊಟ್ಟರೆ, ಯಾರಾದರೂ ಅವರಾಗಿಯೇ ಎಂದೂ ಕರೆ ಮಾಡದೇ ಇದ್ದರೂ ನೀವಾಗಿಯೇ ಪದೇ ಪದೇ ಅವರಿಗೆ ಆತ್ಮೀಯವಾಗಿ ಮಾತನಾಡಲು ಬಯಸಿ ಫೋನ್ ಮಾಡುತ್ತಿದ್ದರೆ, ನಿಮ್ಮ ವೈಯಕ್ತಿಕ ಮತ್ತು ವೃತ್ತಿ ಬದುಕಿನ ಅಪ್ರೋಚ್ ನಲ್ಲಿ ನೀವು ತುಂಬಾ ಸರಳ ಮತ್ತು ವಿನೀತರಾಗಿ ಎಲ್ಲರ ಕೈಗೂ " ಈಸೀ ಅಕ್ಸೆಸ್ಸಬಲ್ " ಎನ್ನುವಂತಿದ್ದರೆ, ನಿಮ್ಮಲ್ಲಿ ಹಣ, ವಿದ್ಯೆ , ಅಧಿಕಾರ ಎಲ್ಲವೂ ಇದ್ದೂ ಏನೂ ಡೌಲು ಮಾಡದಂತೆ, ಏನೂ ಬಿಲ್ಡಪ್ ಕೊಡದಂತೆ ಸಮಾಜದ ಕಣ್ಣಿಗೆ ಕಾಣಿಸಿಕೊಳ್ಳುತ್ತಿದ್ದರೆ, ಯಾವುದೇ ಕಾರ್ಯಕ್ರಮಕ್ಕೆ ಅಥವಾ ಸಮಾರಂಭಕ್ಕೆ ಆಹ್ವಾನಿಸಿದ ತಕ್ಷಣ ಏನೊಂದೂ ಯೋಚಿಸದೇ ಒಳ್ಳೆಯ ಮನಸಿನಿಂದ ತಪ್ಪದೇ ಅಟೆಂಡ್ ಆಗುತ್ತಿದ್ದರೆ, ಒಬ್ಬರಿಗೆ ಅಗತ್ಯಕ್ಕಿಂತ ಹೆಚ್ಚಿಗೆ ಗೌರವ ಕೊಡುವ ಸ್ವಭಾವ ನಿಮ್ಮದಾಗಿದ್ದರೆ, ಮತ್ತೊಬ್ಬರು ನಿಮ್ಮನ್ನು ಹೇಗೆ ಟ್ರೀಟ್ ಮಾಡಿದರೂ " ಪರವಾಗಿಲ್ಲ ಚಲ್ತಾಹೈ ಕಣ್ರೀ " ಎಂಬ ಮನಃಸ್ಥಿತಿ ನಿರ್ಮಾಣವಾಗಲು ಕಾರಣರಾಗುವಂತೆ ನಿಮ್ಮ ಸ್ವಭಾವವಿದ್ದರೆ.....,

ಒಟ್ಟಾರೆಯಾಗಿ ಇತರರಿಗೆ ನೀವು ಯಾವ ವಿಷಯಕ್ಕಾಗಲೀ ಸಹಾಯಕ್ಕಾಗಲೀ ಸುಲಭಕ್ಕೆ ಸಿಗಬಹುದಾದ "ಟೇಕನ್ ಫಾರ್ ಗ್ರಾಂಟೆಡ್ " ಸ್ಟಫ್ ಅಂತ ಅನಿಸಿದ್ದೇ ಆದರೆ....

ಊಫ್......ಬರೆದಿಟ್ಟುಕೊಳ್ಳಿ....ಸಾಮಾನ್ಯವಾಗಿ ಈ ಸಮಾಜ ನಿಮ್ಮನ್ನು ನಿಮ್ಮ ಅರ್ಹತೆಗೆ ತಕ್ಕಂತೆ ನಡೆಸಿಕೊಳ್ಳುವುದಿಲ್ಲ ಎಂದೇ ಅರ್ಥ...! ಅಷ್ಟೇ ಅಲ್ಲ, ಜನ ನಿಮ್ಮನ್ನು ಸುಲಭಕ್ಕೆ ಟ್ರೀಟ್ ಮಾಡಲು ನಿಮ್ಮೊಳಗಿನ ಪಾಸಿಟಿವ್ ಆಗಿ ಕಾಣಿಸಲ್ಪಟ್ಟರೂ , ಅಸಲಿಗೆ ನೆಗೆಟೀವ್ ಆಗಿ ಕಾಡುವ ಈ ರೀತಿಯ ಅಂಶಗಳೇ ಕಾರಣವಾದರೂ ಅಚ್ಚರಿಯೇನಿಲ್ಲ .!

ಈ ಥರಾ ಹೇಳೋದೇ ಒಂಥರಾ ನೆಗೆಟೀವ್ ಆಗಿ ಕಾಣುತ್ತಲ್ಲಾ ಎಂದು ಅಚ್ಚರಿಯೆನಿಸುತ್ತದೆಯಲ್ಲವೇ..?

ಒಮ್ಮೊಮ್ಮೆ ಈ ಸಮಾಜ ಯಾಕೆ ಹೀಗೆ ಎಂದನಿಸುತ್ತದೆಯಾದರೂ ಪ್ರಾಕ್ಟಿಕಲ್ಲಾಗಿ ಇದು ನೈಜತೆಗೆ ಹತ್ತಿರ.

ಹಾಗೇ ಸುಮ್ಮನೇ ನೋಡಿ .! ಬಹಳಷ್ಟು ಸಂದರ್ಭಗಳಲ್ಲಿ ಸಪೋಸ್ ನಿಮ್ಮ ಆತ್ಮೀಯರಿಗೋ ಅಥವಾ ತೀರ ಪರಿಚಿತರಿಗೋ ಮಾತನಾಡುವ ಆಸೆಯಿಂದ ನೀವಾಗಿಯೇ ಆಗಾಗ್ಗೆ ಫೋನ್ ಕರೆ ಮಾಡುತ್ತಲೇ ಇದ್ದರೆ ಒಂದು ಹಂತದ ನಂತರ ನಿಮ್ಮ ಕರೆ ಬಂದಾಕ್ಷಣ ಬಿಜಿ ಟೋನ್ ಗೆ ಹಾಕಿಬಿಡುತ್ತಾರೆ ಇಲ್ಲವೇ ಯಾವುದೋ ಕಾರಣ ಹೇಳಿ ಅವಾಯ್ಡ್ ಮಾಡುತ್ತಾರಲ್ಲವೇ.? ಏಕೆಂದರೆ ಅವರ ದೃಷ್ಟಿಯಿಂದ ನಿಮ್ಮದು ಅನಪೇಕ್ಷಿತ ಕರೆ, ನಿಮ್ಮೊಂದಿಗೆ ಮಾತನಾಡುವುದು ಟೈಮ್ ವೇಸ್ಟು. ಈ ಮನೋಭಾವಕ್ಕೆ ಕಾರಣ, ಅವರ ದೃಷ್ಟಿಯಿಂದ ನೀವು " ಟೇಕನ್ ಫಾರ್ ಗ್ರಾಂಟೆಡ್ .!

ಅದೇ ಅವರ ಬಗ್ಗೆ ಕೇರೇ ಇಲ್ಲದ ಆದರೆ ಅಪರೂಪದ ಅಥವಾ ವ್ಯವಹಾರಿಕ ಫೋನ್ ಕರೆಗಳನ್ನು ನಿದ್ದೆಯಲ್ಲಾದರೂ ರಿಸೀವ್ ಮಾಡಿ ಮಾತನಾಡುತ್ತಾರೆ. ಆ ಮಾತು ಬೇರೆ !

ಹಾಗೆಯೇ ಸಹಾಯ ಅಂತ ಕೇಳಿ ಯಾರಾದರೂ ನಿಮ್ಮನ್ನು ಅಪ್ರೋಚ್ ಮಾಡಿದಾಗ ಅವರ ಕಷ್ಟಕ್ಕೆ ನೆರವಾಗಿ ಅವರಿಗೆ ತೀರ ಸುಲಭವಾಗಿ ಸಹಾಯ ಮಾಡಿ ನೋಡಿ. ! ಹಾಗೆ ಸಹಾಯ ಪಡೆದ ಬಹುತೇಕರಿಗೆ ನಿಮ್ಮ ಬೆಲೆ ಹಾಗೂ ಸಹಾಯದ ಮೌಲ್ಯ ಎರಡೂ ಅರ್ಥವಾಗದು. ವಿಪರ್ಯಾಸವೆಂದರೆ ಯಾರು ಸಹಾಯ ಮಾಡಿರುವುದಿಲ್ಲವೋ ಅಥವಾ ಮಾಡಿದರೂ ಅತ್ತೂ ಕರೆದು ಕಾಡಿಸಿ ಹೆಲ್ಪ್ ಮಾಡಿರುತ್ತಾರೋ ಅಂಥವರಿಗೆ ಸ್ವಲ್ಪ ಭಯ ಭಕ್ತಿಯನ್ನಾದರೂ ಇವರು ತೋರಿಸುತ್ತಾರೆ.

ಇನ್ನೂ ಸಿಂಪಲ್ ಆದ ಉದಾಹರಣೆ ಮೂಲಕ ಇದನ್ನು ಬಿಡಿಸುವುದಾದರೆ, ನಿಮ್ಮ ಆತ್ಮೀಯರಿಗೋ ಸ್ನೇಹಿತರಿಗೋ ನೀವು ನೀವಾಗಿಯೇ ನಿತ್ಯವೂ ಕಳಿಸುವ ಮೆಸೇಜಿಗೆ ಅಲ್ಲಿಂದ ಉತ್ತರವಾಗಲೀ ಅಥವಾ ಆಗಾಗ್ಗೆ ನೀವು ಪ್ರೀತಿಯಿಂದ ಮಾಡುವ ಕರೆಗಳಿಗೆ ತಕ್ಷಣದ ಸ್ಪಂದನೆಯಾಗಲೀ ಸಿಗಲಿಲ್ಲವೆಂದರೆ ಅರ್ಥ, ನೀವು ಅವರ ಪಾಲಿಗೆ ಟೇಕನ್ ಫಾರ್ ಗ್ರಾಂಟೆಡ್ ನಂತೆ ಅಮುಖ್ಯ ಎಂದೇ ! ಅಥವಾ ನಿಮಗೆ ಉತ್ತರಿಸಿದರೂ ಬಿಟ್ಟರೂ ಚಲ್ತಾ ಹೈ ಎಂಬಂತೆ ನಿಮ್ಮನ್ನು ಆದ್ಯತೆಯಲ್ಲದ ಸಂಪರ್ಕದಂತೆ ಟ್ರೀಟ್ ಮಾಡಲಾಗಿರುತ್ತೆ.

ನೀವು ಉದ್ಯೋಗ ಮಾಡುವ ಸ್ಥಳದಲ್ಲಿ, ಕಚೇರಿಗಳಲ್ಲಿ ನಿಮ್ಮ ಸಹೋದ್ಯೋಗಿಗಳೊಂದಿಗೆ ಅಥವಾ ಸಬಾರ್ಡಿನೇಟ್ಸ್ ಜೊತೆಗೆ ನಿಮ್ಮ ಪೊಸಿಷನ್ನನ್ನೂ ಮರೆತು ಸಿಕ್ಕಾಪಟ್ಟೆ ಸಲಿಗೆಯಿಂದ ಫ್ರೆಂಡ್ಲಿಯಾಗಿ ಇದ್ದಲ್ಲಿ ಅವರು ನಿಮ್ಮನ್ನು ಟ್ರೀಟ್ ಮಾಡುವ ರೀತಿಗೂ, ಅದೇ ಒಂದು ವೃತ್ತಿಪರ ಅಂತರವನ್ನು ಕಾಪಾಡಿಕೊಂಡಿದ್ದಾಗ ಅವರು ಕೊಡುವ ಗೌರವಕ್ಕೂ ಸಾಕಷ್ಟು ವ್ಯತ್ಯಾಸವಂತೂ ಇದ್ದೇ ಇದೆ. ಇಲ್ಲಿಯೂ ಅತ್ತಕಡೆಯ " ಟೇಕನ್‌ಫಾರ್ ಗ್ರಾಂಟೆಡ್" ಮನೋಭಾವ ಕೆಲಸ ಮಾಡಿರುತ್ತೆ. ಎಮೋಷನಲ್ ಜಾಸ್ತಿ ಇರುವವರಿಗೆ ಇವೆರಡರ ಸೂಕ್ಷ್ಮತೆ ಅರಿಯುವುದು ಸ್ವಲ್ಪ ಕಷ್ಟವೇ.!

ಹೀಗೇ ನಿತ್ಯಬದುಕಿನ ಹತ್ತಾರು ಉದಾಹರಣೆ ಕೊಡಬಹುದಾದರೂ ನೀವು ಒಬ್ಬರ ಫೋನ್ ಕರೆಗೆ, ಕೆಲಸಕ್ಕೆ, ಸಹಾಯಕ್ಕೆ ತೀರ ಸುಲಭಕ್ಕೆ ಸಿಗುವಂತಿದ್ದರೆ ಎಲ್ಲೋ ಒಂದು ಕಡೆ ನಿಮ್ಮ ವ್ಯಕ್ತಿತ್ವವನ್ನು ಬಹಳ ಸುಲಭಕ್ಕೆ ಅಳೆದುಬಿಡುವ ಅಪಾಯವೂ ಉಂಟು.



ವಾಸ್ತವ ವರ್ತಮಾನ

ಹಾಗಂತ ಜೀವನದಲ್ಲಿ ಸರಳವಾಗಿರದೇ, ಅನಗತ್ಯ ಬಿಲ್ಡಪ್ ಕೊಟ್ಟುಕೊಂಡು ನಕರಾ ಮಾಡುತ್ತಲೇ ಇರಬೇಕೇ...? ಏನೂ ಗೊತ್ತಿಲ್ಲದಿದ್ದರೂ ಎಲ್ಲವೂ ಗೊತ್ತಿರುವಂತೆ ಪೋಸು ಕೊಡಬೇಕೇ ? ಎಂಬೆಲ್ಲಾ ಸಹಜ ಡೌಟುಗಳಿದ್ದರೆ ಅದಕ್ಕೆ ಸಿಂಪಲ್ ಉತ್ತರ " ಇದು ನಿಮ್ಮ ಜೀವನ, ನೀವು ಹೇಗೆ ಬೇಕಾದರೂ ನಿಮಗಿಷ್ಟವಾದ ರೀತಿಯಲ್ಲಿ ಇರಬಹುದು. ಆದರೆ ಮತ್ತೊಬ್ಬರ ಪಾಲಿಗೆ ನೀವು " ಟೇಕನ್ ಫಾರ್ ಗ್ರಾಂಟೆಡ್" ಥರಾ ಆಗದಿದ್ದರೇ, ಅಷ್ಟೇ ಸಾಕು..!

ಆಯ್ತು ! ಒಬ್ಬರು ನಮ್ಮನ್ನು ಟೇಕನ್ ಫಾರ್ ಗ್ರಾಂಟೆಡ್ ಅಂತ ಅಂದುಕೊಂಡರೆ ಏನು ಪ್ರಾಬ್ಲಮ್ಮು, ಅಂದಿರಾ..? ಕುಟುಂಬದ ಒಳಗಾಗಲೀ ಅಥವಾ ಹೊರಗಾಗಲೀ ಒಮ್ಮೆ ನಿಮ್ಮನ್ನು ಹಾಗೆ ಟ್ರೀಟ್ ಮಾಡಲು ಶುರು ಮಾಡಿದಾಗ ನಿಮ್ಮ ಮನಸ್ಸು ನಿಧಾನಕ್ಕೆ ಮತ್ತೊಬ್ಬರ ವರ್ತನೆ ಬಗೆಗೆ ಕೆರೆದು ಗಾಯ ಮಾಡಿಕೊಳ್ಳಲು ಶುರುಮಾಡುತ್ತೆ. " ಒಬ್ಬ ವ್ಯಕ್ತಿ ತಾನು ಏನೊಂದೂ ಮಾಡದಿದ್ದರೂ ಅವನಲ್ಲಿ ಯಾವ ಅರ್ಹತೆ ಇರದಿದ್ದರೂ ಅಂಥವನನ್ನು ಓವರ್ ಬಿಲ್ಡಪ್ ಕೊಟ್ಟು ಮೆರೆಸುವ ಈ ಸಮಾಜ, ತಾನು ಮತ್ತೊಬ್ಬರಿಗಾಗಿ ಅಷ್ಟೆಲ್ಲಾ ಕೆಲಸ ಮಾಡಿದರೂ, ಎಲ್ಲರಿಗೂ ಬೇಕಾದವಂತೆ ಇದ್ದರೂ ತನ್ನ ಕೊಡುಗೆಯನ್ನು ನಿಕೃಷ್ಠವಾಗಿಸಿ ಕಡೆಗಣಿಸುತ್ತದೆಯಲ್ಲಾ... ಎಂಬ ಸಣ್ಣಕೊರಗು ಮನದಲ್ಲಿ ತಣ್ಣಗೆ ಟಿಸಿಲೊಡೆಯ ಲಾರಂಭಿಸುತ್ತದೆ. ಅದಷ್ಟೇ ಅಲ್ಲ, ನಿಮ್ಮಲ್ಲಿರಬಹುದಾದ ಒಳ್ಳೆಯತನವನ್ನು ಸರಳತೆಯನ್ನು ಅಥವಾ ಇತರರಿಗೆ ಹೆಚ್ಚು ಗೌರವಕೊಟ್ಟು ಮಾತನಾಡಿಸುವ ಸ್ವಭಾವವನ್ನೇ ದೌರ್ಬಲ್ಯ ಎಂದು ವರ್ಗೀಕರಿಸಿಬಿಡುವ ಅಪಾಯವನ್ನೂ ಎಸುರಿಸಬೇಕಾಗಬಹುದು.!

## ನಮ್ಮ ನಡುವಿನ ಬಹುತೇಕರ ಒಂದು ಕಾಮನ್ ಅಪ್ರೋಚ್ ಏನು ಗೊತ್ತಾ..?

ಒಂದೇ ಮಾತಿನಲ್ಲಿ ಸಮ್‌ಅಪ್ ಮಾಡುವುದಾದರೆ ನಮ್ಮ ಜೀವನದಲ್ಲಿನ ಸರಳತೆ , ಸೌಮ್ಯತೆ ಅಥವಾ ಒಳ್ಳೆಯತನವೆಂಬುದು ಮತ್ತೊಬ್ಬರಿಗೆ " ಟೇಕನ್ ಫಾರ್ ಗ್ರಾಂಟೆಡ್ " ಆಗದಂತೆ ನೋಡಿಕೊಳ್ಳುವ ಸೂಕ್ಷ್ಮತೆ ನಮ್ಮೊಳಗೆ ಜಾಗೃತವಾಗಿದ್ದಷ್ಟೂ ಒಳ್ಳೆಯದು.

**ಮರೆಯುವ ಮುನ್ನ:** ಬಹಳಷ್ಟು ಸಾರಿ ಇತರರು ನಿಮ್ಮಲ್ಲಿರುವ ಅಗಾಧವಾದ ತಾಳ್ಮೆಯನ್ನೇ ದೌರ್ಬಲ್ಯವೆಂದು ಪರಿಗಣಿಸಿಬಿಡುತ್ತಾರೆ, ಪ್ರಾಮಾಣಿಕತೆಯನ್ನೇ ಪೆಕ್ಯೂಲಿಯರ್ ಅಂದುಬಿಡುತ್ತಾರೆ. ಹಾಗೆಯೇ ಇತರರ ಕಷ್ಟಕ್ಕೆ ಅಥವಾ ಯಾಚನೆಗೆ ಸುಲಭಕ್ಕೆ ಸಿಗಬಹುದಾದ ನಿಮ್ಮ ಅಂತರಂಗದ ದಯಾಳು ಸ್ವಭಾವವನ್ನೇ ಗಾಂಧಿಗಿರಿಗೆ ಹೋಲಿಸಿ ತೀರ ತುಚ್ಛೀಕರಿಸಿ ಅಥವಾ ಯೂಸ್ ಲೆಸ್ ಎಂದು ಭಾವಿಸುವುದೂ ಉಂಟು.

ಇದು ಎಲ್ಲರ ವಿಷಯದಲ್ಲೂ ಹೀಗೇ ಆಗಬಹುದು ಎಂದೇನಲ್ಲ. ಆದರೆ ಬಹುತೇಕರ ಅನುಭವಗಳು ಹೆಚ್ಚು ಕಡಿಮೆ ಇದೇ ಟ್ರ್ಯಾಕಿನಲ್ಲೇ ಸ್ಪರ್ಧೆ ಮಾಡುತ್ತಲೇ ಇರುತ್ತವೆ.

ಮೇಲಾಗಿ ಇಲ್ಲಿ ನಾನು ಬೇಕಂತಲೇ ಒಬ್ಬರ ಸಹಾಯ ನೆನೆದು ಕೃತಜ್ಞತೆ ಹೇಳುವ ಉತ್ತಮ ವರ್ಗವನ್ನು ಹೊರಗಿಟ್ಟು ಈ ಮಾತುಗಳನ್ನು ಹೇಳುತ್ತಿದ್ದೇನೆ.

ಎಲ್ಲಿಯವರೆಗೆ ನಮಗೆ ಇಷ್ಟವಿರಲೀ ಬಿಡಲೀ , ಇತರರೊಂದಿಗೆ ಅಗತ್ಯ ಸ್ನೇಹ ವಿಶ್ವಾಸಗಳನ್ನು ಉಳಿಸಿಕೊಂಡೂ ನಮ್ಮದೇ ಆದ ಒಂದು ವೃತ್ತಿಪರ, ಖಾಸಗಿತನದ ಗೌರವಯುತ ಅಂತರವನ್ನು ಕಾಪಿಟ್ಟುಕೊಳ್ಳುವುದಿಲ್ಲವೋ ಆಗೆಲ್ಲಾ ಬಹು ಜನರ ದೃಷ್ಟಿಯಿಂದ ನಾವು ಟೇಕನ್ ಫಾರ್ ಗ್ರಾಂಟೇಡ್ ಆದಂತೆಯೇ..! !

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,